ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 30 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 192 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಹುಲ್‌ಗಾಂಧಿಯಂತೆ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಅನಿವಾರ್ಯ

● ಸಿದ್ದರಾಮಯ್ಯ ಆಪ್ತ ಸಚಿವರ ಬ್ಯಾಟಿಂಗ್ ● ಕರ್ನಾಟಕದಲ್ಲಂತೂ ಸಿದ್ದರಾಮಯ್ಯ ಅಂದರೆ ಕಾಂಗ್ರೆಸ್; ಕಾಂಗ್ರೆಸ್ ಅಂದರೆ ಸಿದ್ದರಾಮಯ್ಯ ● ಅವರಿಲ್ಲದೆ ನಾವು ಚುನಾವಣೆ ಎದುರಿಸುವುದು ಹೇಗೆ?

ಬೆಂಗಳೂರು, ಅ. 29(ಕೆಎಂಶಿ)– ಕಾಂಗ್ರೆಸ್‌ಗೆ ರಾಹುಲ್‌ಗಾಂಧಿ ಹೇಗೆ ಅನಿವಾರ್ಯವೋ ಅದೇ ರೀತಿ ಸಿದ್ದರಾಮಯ್ಯ ಸಹಾ ಎಂದು ಅವರ ಆಪ್ತ ಸಚಿವರು ಇಂದಿಲ್ಲಿ ಹೊಸ ರಾಗ ತೆಗೆದಿದ್ದಾರೆ.

ಕರ್ನಾಟಕದಲ್ಲಿ ಸಿದ್ದರಾಮಯ್ಯ ಎಂದರೆ ಕಾಂಗ್ರೆಸ್.., ಕಾಂಗ್ರೆಸ್ ಎಂದರೆ ಸಿದ್ದರಾಮಯ್ಯ, ಅವರಿಲ್ಲದೆ ಚುನಾವಣೆ ಎದುರಿಸುವುದು ಹೇಗೆ ಎಂದು ಪ್ರಶ್ನೆ ಮಾಡಿದ್ದಾರೆ.

ನಿರ್ವಿವಾದವಾಗಿ ಇಡೀ ರಾಜ್ಯಕ್ಕೆ ಸಿದ್ದರಾಮಯ್ಯ ನಾಯಕತ್ವ ಬೇಕು. ನಮಗೆ ಅವರ ನಾಯಕತ್ವ ಇಲ್ಲದೆ, ರಾಜಕೀಯ ಶೂನ್ಯವಾಗುತ್ತದೆ ಎಂದಿದ್ದಾರೆ. ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಕಾಂಗ್ರೆಸ್‌ಗೆ ಗಾಂಧಿ ಕುಟುಂಬದಂತೆ ರಾಜ್ಯದಲ್ಲಿ ಸಿದ್ದರಾಮಯ್ಯ ಇಲ್ಲದೆ ಪಕ್ಷ ಇಲ್ಲ ಎಂದಿದ್ದಾರೆ.

ರಾಜಕಾರಣದಿಂದ ಅವರು ಹೊರಗೆ ಉಳಿಯ ಬಾರದು. ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡಲೇಬೇಕು. ನಾವು ಮಾಡಿಸಿಯೇ ಮಾಡಿಸುತ್ತೇವೆ. ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ, ಏನೂ ಇಲ್ಲ, ನಾಯಕತ್ವ ಬದಲಾವಣೆಯೂ ಇಲ್ಲ. ಸಿದ್ದರಾಮಯ್ಯ ಅವರೇ ಐದು ವರ್ಷ ಆಡಳಿತ ಪೂರ್ಣಗೊಳಿಸಲಿದ್ದು, ಅವರ ನಾಯಕತ್ವದಲ್ಲೇ ಮುಂದಿನ ವಿಧಾನಸಭಾ ಚುನಾವಣೆ ಎದುರಿಸುತ್ತೇವೆ. ನಾಯಕತ್ವ ಬದಲಾವಣೆ ಮಾಡುವ ಅನಿವಾರ್ಯತೆ ರಾಜ್ಯದಲ್ಲಿ ಇಲ್ಲ ಎಂದಿರುವ ಸಂತೋಷ್ ಲಾಡ್, ಎರಡೂವರೆ ವರ್ಷಗಳ ಬಳಿಕ ಸಚಿವ ಸ್ಥಾನ ತ್ಯಾಗ ಮಾಡಬೇಕೆಂದು ಕೃಷ್ಣಬೈರೇಗೌಡ ಹೇಳಿರುವಂತೆ ನಮಗೇನೂ ಪ್ರೀ–ಕಂಡೀಷನ್ ಹಾಕಿಲ್ಲ. ಮುಖ್ಯಮಂತ್ರಿ ಆಗಲಿ, ಪಕ್ಷದ ನಾಯಕರಾಗಲೀ ಕೇವಲ ಎರಡೂವರೆ ವರ್ಷ ಅಷ್ಟೇ ಅಧಿಕಾರ ಎಂದು ತಿಳಿಸಿಲ್ಲ. ಬೈರೇಗೌಡ ಅವರು ಯಾವ ಲೆಕ್ಕದ ಆಧಾರದ ಮೇಲೆ ಇಂತಹ ಹೇಳಿಕೆ ನೀಡಿದ್ದಾರೋ ತಿಳಿಯದು ಎಂದಿದ್ದಾರೆ.



> **“ ಬಿಹಾರ ವಿಧಾನಸಭೆ ಚುನಾವಣಾ ಫಲಿತಾಂಶ ರಾಜ್ಯದ ನಾಯಕತ್ವದ ಮೇಲೂ ಪರಿಣಾಮ ಬೀರಬಹುದು. ಕೇಂದ್ರ ಸರ್ಕಾರ ಸ್ವಾಯತ್ತ ಸಂಸ್ಥೆಗಳನ್ನು ತನಗೆ ಬೇಕಾದ ರೀತಿ ದುರುಪಯೋಗ ಮಾಡಿಕೊಂಡು ಚುನಾವಣೆ ನಡೆಸುತ್ತಿದೆ. ಈ ಬಾರಿಯೂ ಅದೇ ರೀತಿ ನಡೆದರೆ ಬಿಹಾರ ಫಲಿತಾಂಶದ ಬಗ್ಗೆ ಏನೂ ಹೇಳಲಾಗದು. ನ್ಯಾಯ ಸಮ್ಮತ ಚುನಾವಣೆ ನಡೆದರೆ, ಬಿಜೆಪಿ ಮೈತ್ರಿ ಕೂಟ ಸೋಲುತ್ತದೆ.**
> **–ಸಂತೋಷ್‌ಲಾಡ್**

ಹಣೆಯಲ್ಲಿ ಬರೆದಿದ್ದರೆ ಡಿ.ಕೆ.ಶಿವಕುಮಾರ್ ಸಿಎಂ ಆಗ್ತಾರೆ

● ಸಹೋದರ ಡಿ.ಕೆ.ಸುರೇಶ್ ಪ್ರತಿಕ್ರಿಯೆ ● ಅವರಿಗೆ ಅಧಿಕಾರ ದಕ್ಕಬೇಕಿದ್ದರೆ ಅದು ವರಿಷ್ಠರಿಂದಲೇ ● ಮುಂದಿನ ಚುನಾವಣೆ ಸಿದ್ದರಾಮಯ್ಯ ನಾಯಕತ್ವದಲ್ಲೇ



ಬೆಂಗಳೂರು,ಅ.29(ಕೆಎಂಶಿ)–ಹಣೆಯಲ್ಲಿ ಬರೆದಿದ್ದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ. ಇಲ್ಲವಾದರೆ ತಲೆಕೆಡಿಸಿಕೊಳ್ಳಲಾಗದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸಹೋದರ, ಮಾಜಿ ಸಂಸದ ಡಿ.ಕೆ.ಸುರೇಶ್ ಪ್ರತಿಕ್ರಿಯಿಸಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವದಲ್ಲೇ ಎದುರಿಸುತ್ತೇವೆ. ಅದರಲ್ಲಿ ಯಾವುದೇ ಅನುಮಾನ ಇಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ. ಅವರು ಪಕ್ಷಕ್ಕೆ ಚ್ಯುತಿ ಬರದಂತೆ ನಡೆದುಕೊಂಡಿದ್ದಾರೆ. ಅವರಿಗೆ ಯಾವುದೇ ಅಧಿಕಾರ ದಕ್ಕಬೇಕಾದರೆ ದೆಹಲಿ ನಾಯಕರೇ ತೀರ್ಮಾನ ಕೈಗೊಳ್ಳಬೇಕು.

ಸಹೋದರನಾಗಿ ಅವರು ಮುಖ್ಯಮಂತ್ರಿ ಆಗಬೇಕೆಂಬುದು ನನ್ನ ಬಯಕೆ. ಅದಕ್ಕೆ ಹಣೇಬರಹದ ಜೊತೆಗೆ ಕಾಲವೂ ಕೂಡಿ ಬರಬೇಕು. ಮುಂಬರುವ ಚುನಾವಣೆಯಲ್ಲಿ ಸಿದ್ದರಾಮಯ್ಯ ಕಣಕ್ಕಿಳಿಯಲಿ ಅವರಿಗೆ ಅಂತಹ ವಯಸ್ಸೇನೂ ಆಗಿಲ್ಲ. ಅವರು ನಡೆದಾಡಿಕೊಂಡು ಚಾಕಚಕ್ಯತೆಯಿಂದ ಇದ್ದಾರೆ. 90–95 ವರ್ಷ ವಯಸ್ಸಿನವರೇ ಚುನಾವಣೆ ಎದುರಿಸುವಾಗ ನಮ್ಮ ಸಿಎಂ ಅವರು ಕಣಕ್ಕೆ ಏಕೆ ಇಳಿಯಬಾರದು ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಉತ್ತಮ ಆಡಳಿತ ನೀಡಿದ್ದಾರೆ. ಅವರು ಜನನಾಯಕ, ಮುಂದಿನ ಚುನಾವಣೆಯನ್ನು ಅವರ ಮುಂದಾಳತ್ವದಲ್ಲೇ ಎದುರಿಸುತ್ತೇವೆ. ನವೆಂಬರ್ ಕ್ರಾಂತಿ, ಎರಡೂವರೆ ವರ್ಷ ಆಡಳಿತ ಹಂಚಿಕೆ ಮಾಹಿತಿ ನನಗೇನೂ ತಿಳಿಯದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ 135ರಿಂದ 137 ಸ್ಥಾನ ನೀಡಿ ಕಾಂಗ್ರೆಸ್ ಅಧಿಕಾರದಲ್ಲಿ ಇರಬೇಕೆಂದು ಜನ ಮತ ನೀಡಿದ್ದಾರೆ. ಅದರಂತೆ ನಮ್ಮ ಪಕ್ಷ ಆಡಳಿತ ನಡೆಸುತ್ತಿದೆ ಎಂದರು.

ಡಿಕೆಶಿ, ಜಾರಕಿಹೊಳಿ ಯಾರೂ ಅಲ್ಲ; ಖರ್ಗೆ ಮುಂದಿನ ಸಿಎಂ

ಶಾಸಕ ಯತ್ನಾಳ್ ಹೊಸ ಬಾಂಬ್

ಬೆಳಗಾವಿ, ಅ.29– ಈಗ ಚರ್ಚೆಯಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಥವಾ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ ಇವರಿಬ್ಬರಲ್ಲಿ ಯಾರನ್ನೂ ಕಾಂಗ್ರೆಸ್ ಹೈಕಮಾಂಡ್ ಮುಂದಿನ ಸಿಎಂ ಮಾಡುವುದಿಲ್ಲ, ಬರೆದಿಟ್ಟುಕೊಳ್ಳಿ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಾನೇನು ಕಾಂಗ್ರೆಸ್ ವಕ್ತಾರನಲ್ಲ, ಆದರೆ ನನಗಿರುವ ಮಾಹಿತಿ ಪ್ರಕಾರ, ಈಗ ಚಲಾವಣೆಯಲ್ಲಿರುವ ಯಾವ ಹೆಸರೂ ಮುಂದಿನ ಮುಖ್ಯಮಂತ್ರಿ ಹುದ್ದೆಗೆ ಬರುವುದಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೇ ಮುಂದಿನ ಮುಖ್ಯಮಂತ್ರಿ, ಅವರೇ ಬ್ಲ್ಯಾಕ್ ಹಾರ್ಸ್ ಆಗಿ ಬರಲಿದ್ದಾರೆ


ಯತ್ನಾಳ್

ಎಂದು ಭವಿಷ್ಯ ನುಡಿದಿದ್ದಾರೆ. ಅಸಲಿಗೆ ಮಲ್ಲಿಕಾರ್ಜುನ ಖರ್ಗೆಯವರ ಹೆಸರು ಹಿಂದಿನಿಂದಲೂ ಕೇಳಿ ಬರುತ್ತಿತ್ತು. ಅವರ ಹೆಸರನ್ನು ಅಂತಿಮಗೊಳಿಸಿದರೆ ರಾಜ್ಯ ಕಾಂಗ್ರೆಸ್ಸಿನಲ್ಲಿರುವ ಯಾವ ಬಣವೂ ತಕರಾರು ಎತ್ತುವುದಿಲ್ಲ ಎನ್ನುವ ಮಾತು ಚಾಲ್ತಿಯಲ್ಲಿತ್ತು. ಈಗ ಅದಕ್ಕೆ ಪೂರಕ ಎನ್ನುವಂತೆ ಯತ್ನಾಳ್ ಅವರ ಹೆಸರನ್ನೇ ಉಲ್ಲೇಖಿಸಿದ್ದಾರೆ. ಆದರೆ, ವಯಸ್ಸಿನ ಕಾರಣಕ್ಕಾಗಿ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಹುದ್ದೆ ಒಲ್ಲೆ ಎನ್ನುತ್ತಿದ್ದಾರೆ ಎಂಬ ಮಾತುಗಳು ಕಾಂಗ್ರೆಸ್ ಪಡಶಾಲೆಯಲ್ಲಿ ಕೇಳಿ ಬರುತ್ತಿತ್ತು. ಇವರನ್ನು ಹೊರತುಪಡಿಸಿ ▶ 6ನೇ ಪುಟಕ್ಕೆ

ನ.14ರ ಬಳಿಕ ಕಾಂಗ್ರೆಸ್ ಸರ್ಕಾರ ಪತನ

ಬಿಜೆಪಿ ಶಾಸಕ ಸುರೇಶ್‌ಗೌಡ ಭವಿಷ್ಯ


ಸುರೇಶ್‌ಗೌಡ

ತುಮಕೂರು, ಅ.29– ನವೆಂಬರ್ 14ಕ್ಕೆ ಬಿಹಾರ ಚುನಾವಣೆ ಮುಗಿಯುತ್ತದೆ. ಫಲಿತಾಂಶ ಬಂದ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪತನ ಆಗುತ್ತದೆ ಎಂದು ಬಿಜೆಪಿ ಶಾಸಕ ಸುರೇಶ್‌ಗೌಡ ಭವಿಷ್ಯ ನುಡಿದಿದ್ದಾರೆ.

ತುಮಕೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಾಲಿಗೆ ಚಕ್ರಕಟ್ಟಿಕೊಂಡು ರಾಜ್ಯ ಸುತ್ತಾಡಿ, ಫಂಡಿಂಗ್ ಮಾಡಿ 138 ಸ್ಥಾನ ಗಳಿಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ವಾಡಿಕೆಯಂತೆ ಅವರೇ ಸಿಎಂ ಆಗಬೇಕಿತ್ತು ಎಂದು ಡಿಕೆಶಿ ಪರ ಬ್ಯಾಟ್ ಬೀಸಿದರು.

ಡಿಕೆಶಿ ಅವರ ತಾಕತ್‌ನಿಂದ ನಿಧಿ ಸಂಗ್ರಹಿಸಿರುವುದರಿಂದ, ಪಕ್ಷದ ಗೆಲುವಿಗೆ ಪರಿಶ್ರಮ ಹಾಕಿರುವುದರಿಂದ ಕಾಂಗ್ರೆಸ್ ಸರ್ಕಾರ ಬಂದಿದೆ. ಆದರೆ ಸಿದ್ದರಾಮಯ್ಯ ಸಿಎಂ ಆದರು. ಸಿದ್ದರಾಮಯ್ಯ ಏನಾದರೂ ಫಂಡಿಂಗ್ ಮಾಡಿದ್ದರಾ, ಪಕ್ಷಕ್ಕೆ ಹಣ ಕೊಟ್ಟರಾ? ▶ 6ನೇ ಪುಟಕ್ಕೆ

ಬಿಹಾರ ಚುನಾವಣೆಗೆ ಸಿದ್ದರಾಮಯ್ಯ 300 ಕೋಟಿ ಸಂಗ್ರಹ

ಮಾಜಿ ಸಚಿವ ಶ್ರೀರಾಮುಲು ಆರೋಪ


ಶ್ರೀರಾಮುಲು

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರ ಪ್ರಚಾರಕ್ಕೆ ಹಣ ಕಾಸು ಒದಗಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಸಚಿವರಿಂದ 300 ಕೋಟಿ ರೂ. ಸಂಗ್ರಹಿಸಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕ, ಮಾಜಿ ಸಚಿವ ಬಿ.ಶ್ರೀರಾಮುಲು ಗಂಭೀರ ಆರೋಪ ಮಾಡಿದ್ದಾರೆ.

ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಅವರು, ಈ ಹಣ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ಕಾಂಗ್ರೆಸ್ ಹೈಕಮಾಂಡ್‌ಗೆ ಸಂದಾಯವಾಗಿದೆ. ಮುಖ್ಯಮಂತ್ರಿ ತಮ್ಮ ಸಂಪುಟ ಸಹೋದ್ಯೋಗಿಗಳಿಗೆ ಇತ್ತೀಚೆಗೆ ಆಯೋಜಿಸಿದ್ದ ಭೋಜನ ಸಭೆಯಲ್ಲಿ ಈ ಮೊತ್ತವನ್ನು ಸಂಗ್ರಹಿಸಲಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರ್ಚಿ ಬಹುಶಃ ಅಲುಗಾಡುತ್ತಿದೆ. ಅವರು ನ.15ರಂದು ದೆಹಲಿಗೆ ಹೋಗಲಿದ್ದಾರೆ. ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನ.15ರ ನಂತರ ಯಾವ ಕ್ರಾಂತಿ ಸಂಭವಿಸುತ್ತದೆ ಎಂದು ನಾವು ನೋಡಬೇಕು ಎಂದರು.

ಮುಂದಿನ ತಿಂಗಳು ಕಾಂಗ್ರೆಸ್ ಸರ್ಕಾರ ತನ್ನ 5 ವರ್ಷಗಳ ಅವಧಿಯ ಅರ್ಧವನ್ನು ಪೂರ್ಣಗೊಳಿಸಲಿದ್ದು, ನಾಯಕತ್ವ ಬದಲಾವಣೆ ಬಗ್ಗೆ ಊಹಾಪೋಹಗಳಿವೆ. ಇದನ್ನು ಕೆಲವರು 'ನವೆಂಬರ್ ಕ್ರಾಂತಿ' ಎಂದು ಕರೆಯುತ್ತಿದ್ದಾರೆ. ಬಿಹಾರ ಚುನಾವಣೆ ಘೋಷಣೆಯಾಗುತ್ತಿದ್ದಂತೆ ಸಚಿವರನ್ನು ಭೋಜನಕ್ಕೆ ಕರೆದು, ಅವರಿಂದ ಸಿದ್ದರಾಮಯ್ಯ 300 ಕೋಟಿ ರೂ. ಸಂಗ್ರಹಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಮೈಸೂರಿನ ದಕ್ಷಿಣ ಭಾಗಕ್ಕೆ ನೀರು ಪೂರೈಸುವ 110 ಎಂಎಲ್‌ಡಿ ಸಾಮರ್ಥ್ಯದ ಕಬಿನಿ ಯೋಜನೆ ಪೂರ್ಣ

33 ಕೋಟಿ ರೂ. ವೆಚ್ಚದ 2ನೇ ಹಂತದ ಕಾಮಗಾರಿ ಇದು; ಮುಖ್ಯಮಂತ್ರಿಗಳಿಂದ ಶೀಘ್ರ ಉದ್ಘಾಟನೆ


ಕೆಂಬಳ್‌ನಲ್ಲಿ ಇಂಟರ್ ಮೀಡಿಯೇಟ್ ಬೂಸ್ಟರ್ ಪಂಪಿಂಗ್ ಸ್ಟೇಷನ್ ಸ್ಥಾಪಿಸಲಾಗಿದೆ.

ಮೈಸೂರು, ಅ.28(ಆರ್‌ಕೆ)– ಮೈಸೂರಿನ ಆಗ್ನೇಯ ಮತ್ತು ನೈರುತ್ಯ (South East and South West) ಭಾಗದ ವಸತಿ ಬಡಾವಣೆಗಳ ನಿವಾಸಿಗಳಿಗೆ ಇನ್ನು ಮುಂದೆ ಕುಡಿಯುವ ನೀರಿನ ಸಮಸ್ಯೆಯೇ ಇರುವುದಿಲ್ಲ.

ಕಬಿನಿ ನದಿ ಮೂಲದಿಂದ ಮೈಸೂರು ನಗರದ ದಕ್ಷಿಣ ಭಾಗದ ಬಡಾವಣೆಗಳು ಹಾಗೂ ಅವುಗಳಿಗೆ ಹೊಂದಿಕೊಂಡಂತಿರುವ ಸುಮಾರು 42 ಗ್ರಾಮಗಳಿಗೆ ನಿರಂತರ ಶುದ್ಧ ಕುಡಿಯುವ ನೀರು ಒದಗಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWS&DB)ಯು ಮೈಸೂರು ಮಹಾನಗರಪಾಲಿಕೆ ಮತ್ತು ಮೈಸೂರು

> **“ ಸಿಎಂ ಸಿದ್ದರಾಮಯ್ಯ ಅವರು ಕಬಿನಿ ನೀರು ಸರಬರಾಜು ಯೋಜನೆ ಉದ್ಘಾಟಿಸಲಿದ್ದು ದಿನಾಂಕ ನಿಗದಿಗೆ ಕಾಯುತ್ತಿದ್ದೇವೆ.**
> **–ಜಿ.ಟಿ.ದೇವೇಗೌಡ, ಶಾಸಕರು**

ನಗರಾಭಿವೃದ್ಧಿ ಪ್ರಾಧಿಕಾರ (ಪ್ರಸ್ತುತ ಎಂಡಿಎ)ದ ಸಹಯೋಗ, ಜವಾಹರ ಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಮಿಷನ್ (JNNURM) ಯೋಜನೆಯಡಿ 2008ರಲ್ಲಿ ಕಾಮಗಾರಿಯನ್ನು ಆರಂಭಿಸಲಾಗಿತ್ತು.

4,95,400 ಜನಸಂಖ್ಯೆಗೆ ನೀರು ಪೂರೈಕೆ: ಕರ್ನಾಟಕ ರಾಜ್ಯದಲ್ಲಿ ಬೆಂಗಳೂರನ್ನು ಹೊರತುಪಡಿಸಿದರೆ ಮೈಸೂರು ಅತೀ ವೇಗವಾಗಿ ▶ 6ನೇ ಪುಟಕ್ಕೆ

ಒಳಪುಟಗಳಲ್ಲಿ....

ಕಡಕೊಳ ಬಳಿಯ ವಿಶೇಷ ವಲಯದಲ್ಲಿ ಸೆಮಿ ಕಂಡಕ್ಟರ್ ಘಟಕಗಳು ಸ್ಥಾಪನೆ

■ ಮೈಸೂರಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಘೋಷಣೆ ■ ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿ ಗುಂಡಿ ಮುಕ್ತ ರಸ್ತೆ ನಿರ್ಮಾಣ ■ ಭಾರತದಲ್ಲಿ ಕರ್ನಾಟಕದ ಏರೋಸ್ಪೇಸ್‌ನಿಂದ ಶೇಕಡ 65ರಷ್ಟು ಪಾಲು ■ ಜಾಗತಿಕ ಮಟ್ಟದಲ್ಲಿ 3ನೇ ಅತೀ ದೊಡ್ಡ ಎಕೋ ಸಿಸ್ಟಂ ■ ರಾಜ್ಯದಲ್ಲಿ ಏರೋಸ್ಪೇಸ್ ಉದ್ಯಮ ವ್ಯಾಪಕ ವಿಸ್ತರಣೆ


ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ರಂಗ್ ಸನ್ಸ್ ಏರೋಸ್ಪೇಸ್‌ಗೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಬುಧವಾರ ಭೇಟಿ ನೀಡಿದರು. (ಎಡದಿಂದ) ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಸೆಲ್ವಕುಮಾರ್, ಬೋಯಿಂಗ್ ಹಿರಿಯ ಅಧಿಕಾರಿ ಅಶ್ವಾನ್ ಭಾರ್ಗವ್, ರಂಗ್ ಸನ್ಸ್ ಏರೋಸ್ಪೇಸ್ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.29(ಬಿಎಲ್‌ಯು)– ಮೈಸೂರಿನ ಕಡಕೊಳ ಬಳಿ ನಿರ್ಮಾಣವಾಗಿರುವ ಸೆಮಿಕಂಡಕ್ಟರ್ ಪಾರ್ಕ್‌ನಲ್ಲಿ ಹೊಸ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ ಆಗಲಿವೆ ಎಂದು ಬೃಹತ್ ಕೈಗಾರಿಕಾ ಸಚಿವ ಎ.ಬಿ.ಪಾಟೀಲ್ ತಿಳಿಸಿದ್ದಾರೆ.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರಂಗ್ ಸನ್ಸ್ ಏರೋಸ್ಪೇಸ್‌ಗೆ ಇಂದು ಭೇಟಿ ನೀಡಿದ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರಲ್ಲಿ ಸೆಮಿಕಂಡಕ್ಟರ್ ಘಟಕ ಸ್ಥಾಪನೆ ಆಗುವುದು ನಿಶ್ಚಿತ. ಆದರೆ ಆ ಕಂಪನಿ ಯಾವುದು, ಯಾವಾಗ ಸ್ಥಾಪನೆ ಆಗಲಿದೆ ಎಂಬ ಮಾಹಿತಿಯನ್ನು ಈಗಲೇ ಹೇಳಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಇದೇ ಸ್ಥಳದಲ್ಲಿ ಕೇನ್ಸ್ ಟೆಕ್ನಾಲಜೀಸ್ ಸೆಮಿಕಂಡಕ್ಟರ್ ಘಟಕ ಮಾಡಲು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಮೈಸೂರಿಂದ ಆಂಧ್ರಗೆ ಹೋಗಲು ಏನು ಕಾರಣ ಎಂಬ ಮಾಹಿತಿ ನೀಡಲು ಸಾಧ್ಯವಿಲ್ಲ ಎಂದರು. ▶ 6ನೇ ಪುಟಕ್ಕೆ

ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯಕ್ಕೆ ಬರುವ ಕೈಗಾರಿಕೆಗಳ ಹಾದಿ ತಪ್ಪಿಸುತ್ತಿದೆ

ಸಚಿವ ಎಂ.ಬಿ. ಪಾಟೀಲ್ ಆರೋಪ

ಮೈಸೂರು,ಅ.29(ಬಿಎಲ್‌ಯು)–ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪಿಸಲು ಮುಂದಾಗುವ ಉದ್ಯಮಿಗಳನ್ನು ಕೇಂದ್ರ ಬಿಜೆಪಿ ಸರ್ಕಾರ ಹಾದಿ ತಪ್ಪಿಸುತ್ತಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಆರೋಪಿಸಿದರು. ಮೈಸೂರು ಕಾಂಗ್ರೆಸ್ ಕಚೇರಿಯ ಕಾರ್ಯಕ್ರಮದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕೈಗಾರಿಕೆ ಸ್ಥಾಪಿಸಲು ಉದ್ಯಮಿಗಳು ▶ 6ನೇ ಪುಟಕ್ಕೆ

ಕೇನ್ಸ್ ಟೆಕ್ನಾಲಜೀಸ್‌ನಿಂದ ಚಾ.ನಗರದಲ್ಲಿ 1,500 ಕೋಟಿ ಹೂಡಿಕೆ

ಮೈಸೂರಿನ ಕೇನ್ಸ್ ಟೆಕ್ನಾಲಜೀಸ್ ಮುಂದಿನ ವರ್ಷದ ವೇಳೆಗೆ ಚಾಮರಾಜನಗರದಲ್ಲಿ 1,500 ಕೋಟಿ ಹೂಡಿಕೆ ಮಾಡಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಘೋಷಿಸಿದರು.

ಮೈಸೂರಿನ ಹೆಬ್ಬಾಳಿನ ಕೇನ್ಸ್ ಟೆಕ್ನಾಲಜೀಸ್ ಇಂದು ಭೇಟಿ ನೀಡಿದ ವೇಳೆ ಕಂಪನಿ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ ಅವರು, ಕೇನ್ಸ್ ಟೆಕ್ನಾಲಜೀಸ್ ತನ್ನ ಘಟಕ ವಿಸ್ತರಿಸಲು ▶ 6ನೇ ಪುಟಕ್ಕೆ



ಕಾಡಂಚಿನ ಗ್ರಾಮಗಳಲ್ಲಿ ಹುಲಿ ಉಪಟಳ ಹಿನ್ನೆಲೆ ಬಂಡೀಪುರ, ನಾಗರಹೊಳೆಯಲ್ಲಿ ಒಂದು ಟ್ರಿಪ್ ಸಫಾರಿ ಕಡಿತಕ್ಕೆ ಸಚಿವ ಈಶ್ವರ್ ಖಂಡ್ರೆ ಸೂಚನೆ





ಮೈಸೂರು,ಅ.29(ಎಂಟಿವೈ)– ಮೈಸೂರು ಜಿಲ್ಲೆಯ ನಂಜನಗೂಡು, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿ, ಆನೆ ಸೇರಿದಂತೆ ವನ್ಯಜೀವಿಗಳ ಉಪಟಳ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬಂಡೀಪುರ ಹಾಗೂ ನಾಗರ ಹೊಳೆ ಅಭಯಾರಣ್ಯದಲ್ಲಿ ಒಂದು ಟ್ರಿಪ್ ಸಫಾರಿ ಕಡಿತಗೊಳಿಸುವಂತೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸೂಚಿಸಿದ್ದಾರೆ.

ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಬಡಗಲಪುರದಲ್ಲಿ ಅ.17ರಂದು ಹುಲಿ ದಾಳಿ ನಡೆಸಿದ ಪರಿಣಾಮ ಮಹ ದೇವೇಗೌಡ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದರು. ಅ.26ರಂದು ಸರ ಗೂರು ತಾಲೂಕಿನ ಮುಳ್ಳೂರು ವ್ಯಾಪ್ತಿಯ ಬೆಣ್ಣೆಗೆರೆ ಗ್ರಾಮದಲ್ಲಿ ಜಾನುವಾರು ಮೇಯಿ ಸುತ್ತಿದ್ದ ರಾಜಶೇಖರ್ ಎಂಬುವರ ಮೇಲೆ ಹುಲಿ ದಾಳಿ ನಡೆಸಿ ಹತ್ಯೆಗೈಯ್ದಿತ್ತು. ಹುಲಿ ದಾಳಿಯಿಂದಾಗಿ ಅರಣ್ಯ ಇಲಾಖೆ ನಡೆಸಿದ ಕೂಂಬಿಂಗ್ ಕಾರ್ಯಾಚರಣೆ ವೇಳೆ ಬಡಗಲಪುರದ ಬಳಿ ಅ.19ರಂದು ಮುಂಗಾಲಿನ ಗಾಯದಿಂದ ಬಳಲುತ್ತಿದ್ದ 2.5 ವರ್ಷದ ಹೆಣ್ಣು ಹುಲಿ ಸೆರೆ ಹಿಡಿಯ ಲಾಗಿತ್ತು. ಅಕ್ಟೋಬರ್ 28ರಂದು ನಂಜನ ಗೂಡು ತಾಲೂಕು ವ್ಯಾಪ್ತಿಯ ಈರೇ ಗೌಡನ ಹುಂಡಿ ಹಾಗೂ ಅಂಜನಾ ಪುರದ ಬಳಿ 9 ವರ್ಷದ ಹೆಣ್ಣು ಹುಲಿ ಯನ್ನು ಸೆರೆ ಹಿಡಿಯಲಾಗಿತ್ತು.

ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿ ಗಳ ಉಪಟಳಕ್ಕೆ ಅರಣ್ಯ ಪ್ರದೇಶದಲ್ಲಿ ಇಲಾಖೆ ವತಿಯಿಂದ ಮಾಡುತ್ತಿರುವ ಸಫಾರಿಯೇ ಕಾರಣ. ಸಫಾರಿಯನ್ನು ಬಂದ್ ಮಾಡುವಂತೆ ರೈತ ಸಂಘಟನೆಗಳ ಮುಖಂಡರು ಆಗ್ರಹಿಸಿ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಸಲ್ಲಿಸಿ ದ್ದರು. ರೈತರ ಮನವಿಯನ್ನು ಪುರಸ್ಕರಿಸಿರುವ ಈಶ್ವರ್ ಖಂಡ್ರೆ ತುರ್ತಾಗಿ ಜಾರಿಗೆ ಬರುವಂತೆ ನಾಗರಹೊಳೆ ಹಾಗೂ ಬಂಡೀಪುರದಲ್ಲಿ ಒಂದು ಟ್ರಿಪ್ ಸಫಾರಿಯನ್ನು ಕಡಿತ ಮಾಡುವಂತೆ ಆದೇ ಶಿಸಿದ್ದಾರೆ. ವನ್ಯಜೀವಿಗಳ ಸಂರಕ್ಷಣೆ, ಅರಣ್ಯ ಸಂಪತ್ತಿನ ಸಂರಕ್ಷಣೆ ಹಾಗೂ ಪರಿಸರದ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವ ಶಿಕ್ಷಣ ವನ್ನು ಸಫಾರಿ ನೀಡುತ್ತದೆ. ಸಫಾರಿ ಯಿಂದಾಗಿ ವನ್ಯಜೀವಿ ಸಂರಕ್ಷಣೆಯ ಅಭಿ ಯಾನಕ್ಕೆ ಸಹಕಾರಿಯಾಗುತ್ತದೆ. ಸಫಾರಿ ಹಲವಾರು ಜನರಿಗೆ ಜೀವನೋಪಾಯವೂ ಆಗಿದೆ. ಆದರೆ, ಸಫಾರಿಗೆ ಬರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಸಫಾರಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ರೈತ ಮುಖಂಡರು ಆರೋಪಿಸಿರುವ ಹಿನ್ನೆಲೆ ಯಲ್ಲಿ ಬಂಡೀಪುರ ಹಾಗೂ ನಾಗರಹೊಳೆ ಯಲ್ಲಿ ಒಂದು ಟ್ರಿಪ್ ಸಫಾರಿ ಕಡಿತಗೊಳಿ ಸಲು ಸೂಚನೆ ನೀಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ತಿಳಿಸಿದ್ದಾರೆ.

ಭ್ರೂಣಲಿಂಗ ಪತ್ತೆ, ಪೋಕ್ಸೊ ಪ್ರಕರಣಗಳ ಬಗ್ಗೆ ನಿಗಾ ವಹಿಸಲು ಜಿಪಂ ಸಿಇಓ ವೈದ್ಯಕೀಯ ಸಿಬ್ಬಂದಿಗೆ ಸೂಚನೆ



ಮೈಸೂರು ಜಿಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು, ಅ.29(ಎಂಕೆ)– ಸಮು ದಾಯ ಮಟ್ಟದಲ್ಲಿ ಬಾಲ್ಯ ವಿವಾಹ, ಭ್ರೂಣ ಲಿಂಗ ಪತ್ತೆ ಹಾಗೂ ಪೋಕ್ಸೋ ಪ್ರಕರಣ ಗಳ ಬಗ್ಗೆ ನಿಗಾವಹಿಸುವಂತೆ ಜಿಪಂ ಸಿಇಓ ಯುಕೇಶ್‌ಕುಮಾರ್, ವೈದ್ಯಾಧಿ ಕಾರಿ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮೈಸೂರು ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಬುಧ ವಾರ ನಡೆದ ಜಿಲ್ಲಾ ಮಟ್ಟದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿ ಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಪೌಷ್ಠಿಕ ಮಕ್ಕಳ ಗುರ್ತಿಸುವಿಕೆ, ಕುಷ್ಠ ರೋಗ ನಿರ್ಮೂಲನೆ, ಮಾನಸಿಕ ಆರೋಗ್ಯ ಮತ್ತು ಅಂಧತ್ವ ಕಾರ್ಯಕ್ರಮ ಗಳ ಅನುಷ್ಠಾನಗೊಳಿಸಬೇಕು ಎಂದರು.

ಹಾಗೆಯೇ ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿ ಸ್ತ್ರೀಯರ ದಾಖಲಾತಿ ಮತ್ತು ನೋಂದಣಿ, ಸಾಂಖ್ಯಿಕ ಹೆರಿಗೆಗಳ ನಿರ್ವ ಹಣೆ, ಜೆಎಸ್‌ವೈ ಯೋಜನೆಯ ಅರ್ಹ ಫಲಾನುಭವಿಗಳ ಮಾಹಿತಿ ದಾಖಲೀಕರಣ, ಗರ್ಭಿಣಿ ಸ್ತ್ರೀಯರು ಹಾಗೂ ಬಾಣಂತಿ ಯರನ್ನು ಆಗಿಂದಾಗೆ ಆರೋಗ್ಯ ತಪಾಸಣೆ ಒಳಪಡಿಸಿರುವುದು, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಪರಿಶೀಲನೆ, ಲಸಿಕಾ ವಂಚಿತ ಮಕ್ಕಳ ಪಟ್ಟಿ ಮತ್ತು ಲಸಿಕೆ ಪಡೆದು ಫಲಾನುಭವಿಗಳ ಮಾಹಿತಿ ದಾಖಲೀ ಕರಣ ಹಾಗೂ ಎಂ.ಆರ್ ಲಸಿಕೆ ಅಭಿಯಾನ ದಲ್ಲಿ ಪ್ರಗತಿ ಸಾಧಿಸುವ ಮೂಲಕ ದಡಾರ –ರುಬೆಲ್ಲಾ ರೋಗ ನಿರ್ಮೂಲನೆಗೆ ಕ್ರಮವಹಿಸಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಗಳು ಮಾರ್ಗಸೂಚಿ ಪ್ರಕಾರವೇ ಅನು ಷ್ಠಾನವಾಗಬೇಕು. ಅನುಷ್ಠಾನದ ಬಗ್ಗೆ ಕ್ರಿಯಾ ಯೋಜನೆ ರೂಪಿಸಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು. ಇದೆಲ್ಲದರ ಜೊತೆಗೆ ಸಾರ್ವ ಜನಿಕರು ಆರೋಗ್ಯ ಸೇವೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ ಉತ್ತಮ ರೀತಿಯಲ್ಲಿ ಆರೋಗ್ಯ ಸೇವೆಗಳನ್ನು ನೀಡುವಂತೆ ಸಲಹೆ ನೀಡಿದರು.

ಕೇಂದ್ರ ಪ್ರಶಸ್ತಿ ಪ್ರದಾನ: ಇದೇ ವೇಳೆ ರಾಷ್ಟಮಟ್ಟದಲ್ಲಿ ಮಾನ್ಯತೆ ಪಡೆದ ಜಿಲ್ಲೆಯ 9 ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎನ್.ಹೆಚ್. ಪಾಳ್ಯ, ಕುಂಬಾರಕೊಪ್ಪಲು ಮತ್ತು ಕ್ಯಾತ ಮಾರನಹಳ್ಳಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಮೈಸೂರು ತಾಲೂಕಿನ ಸಾಗರ ಕಟ್ಟೆ ಮತ್ತು ಉಡಬೂರು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಟಿ.ನರಸೀಪುರ ತಾಲೂಕಿನ ಕೇತಳ್ಳಿ, ವಾಟಾಳು, ಕುರು ಬೂರು, ಕೆ.ಆರ್.ನಗರ ತಾಲೂಕಿನ ಕಾರ್ತಾಳು ಆಯುಸ್ಮಾನ್ ಆರೋಗ್ಯ ಕೇಂದ್ರ ಗಳು ಪ್ರಶಸ್ತಿಗೆ ಭಾಜನವಾದವು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ ನಿರ್ದೇಶಕಿ ಡಾ.ಉಮಾಬುಗಿ, ವಿಭಾಗೀಯ ಸಹ ನಿರ್ದೇಶಕಿ ಡಾ.ಮಲ್ಲಿಕಾ, ಜಿಲ್ಲಾ ಆರೋಗ್ಯ–ಕುಟುಂಬ ಕಲ್ಯಾಣಾಧಿಕಾರಿ ಡಾ.ಸಿ.ಪಿ.ಕುಮಾರಸ್ವಾಮಿ, ಪ್ರಾದೇಶಿಕ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಡಾ.ಆಶಾ, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲ ಡಾ.ಎಲ್.ರವಿ ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಅಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು ಮತ್ತು ಆರೋಗ್ಯ ಸಿಬ್ಬಂದಿ ಸಭೆಯಲ್ಲಿ ಭಾಗವಹಿಸಿದ್ದರು.

ರಕ್ಷಿಸಲಾದ 3 ಹುಲಿ ಮರಿ ಪೈಕಿ ಒಂದು ಸಾವು

ಮೈಸೂರು,ಅ.29(ಎಂಟಿವೈ)– ತಾಯಿ ಯಿಂದ ಬೇರ್ಪಟ್ಟು ರಕ್ಷಿಸಲ್ಪಟ್ಟಿದ್ದ ಮೂರು ಹುಲಿ ಮರಿಗಳಲ್ಲಿ ಎರಡು ಮರಿಗಳು ಮೃತ ಪಟ್ಟಿದ್ದು, ಒಂದು ಹೆಣ್ಣು ಮರಿಯನ್ನು ಹೆಚ್ಚಿನ ಆರೈಕೆಯಾಗಿ ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿದೆ.

ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವಲಯದ ಪುಣಜನೂರು–ಬೇಡಗುಳಿ ರಸ್ತೆಯಲ್ಲಿ ಬಜೇಬಾವಿ ಅರಣ್ಯ ಪ್ರದೇಶದಲ್ಲಿ ಅ.13 ರಂದು ತಾಯಿಯಿಂದ ಬೇರ್ಪಟ್ಟಿದ್ದ ಎರಡು ಮರಿ ಗಸ್ತು ಸಿಬ್ಬಂದಿಗೆ ಪತ್ತೆಯಾಗಿತ್ತು. ತಾಯಿ ಹುಲಿಯ ಕೂಂಬಿಂಗ್ ಕಾರ್ಯಾ ಚರಣೆ ವೇಳೆ ಅ.14ರಂದು ಮತ್ತೊಂದು ಹುಲಿ ಮರಿ ಪತ್ತೆಯಾಗಿತ್ತು. ಇದರಿಂದ ತಾಯಿ ಹುಲಿಯಿಂದ ಬೇರ್ಪಟ್ಟು ನಿತ್ರಾಣ ಸ್ಥಿತಿಯಲ್ಲಿದ್ದ 2 ಹೆಣ್ಣು, 1 ಗಂಡು ಮರಿ ಸೇರಿದಂತೆ ಮೂರು ಹುಲಿ ಮರಿಗಳನ್ನು ರಕ್ಷಿಸಿ, ಹೆಚ್ಚಿನ ಆರೈಕೆಗಾಗಿ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿತ್ತು.

ತಾಯಿಯಿಂದ ಬೇರ್ಪಟ್ಟಿದ್ದ ಹುಲಿ ಮರಿಗಳು ನಿತ್ರಾಣ ಸ್ಥಿತಿಯಲ್ಲಿದ್ದವು. ಅವು ಗಳ ಆರೈಕೆ ಸವಾಲಾಗಿದ್ದರೂ ಪುನರ್ವ ಸತಿ ಕೇಂದ್ರದಲ್ಲಿ ಹುಲಿ ಮರಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ವಿವಿಧ ಸೋಂಕಿಗೆ ಒಳ ಗಾಗಿದ್ದ ಹುಲಿ ಮರಿಗಳ ರಕ್ಷಣೆಗೆ ವಿಶೇಷ ಮುತುವರ್ಜಿ ವಹಿಸಲಾಗಿತ್ತಾದರೂ, ಒಂದು ಗಂಡು ಮತ್ತು ಒಂದು ಹೆಣ್ಣು ಹುಲಿ ಮರಿ ಗಳು ಮೃತಪಟ್ಟಿವೆ. ಮತ್ತೊಂದು ಹೆಣ್ಣು ಹುಲಿ ಮರಿಯನ್ನು ಹೆಚ್ಚಿನ ಆರೈಕೆಗಾಗಿ ಬೆಂಗಳೂರಿನ ಬನ್ನೇರುಘಟ್ಟದ ಜೈವಿಕ ಉದ್ಯಾನವನದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಅಲ್ಲಿ ಹುಲಿ ಮರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಅರಣ್ಯ ಇಲಾಖೆ ನಿರ್ಲಕ್ಷ್ಯತೆಯಿಂದ ಕಾಡಂಚಿನ ಗ್ರಾಮದ ಜನ, ಜಾನುವಾರುಗಳಿಗೆ ಕುತ್ತು

ಸಂತ್ರಸ್ತರ ಅಳಲು ಆಲಿಸಿದ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ



ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಿಗೆ ರೈತ ಕಲ್ಯಾಣ ಸಂಘದ ಪದಾಧಿಕಾರಿಗಳು ಭೇಟಿ ನೀಡಿ ಗ್ರಾಮಸ್ಥರ ಸಮಸ್ಯೆ ಆಲಿಸುತ್ತಿರುವುದು.

ಮೈಸೂರು, ಅ.29(ಎಂಕೆ)– ಹುಲಿ ಹಾವಳಿ ಹಿನ್ನಲೆಯಲ್ಲಿ ಸರಗೂರು ತಾಲೂಕಿನ ನುಗು ಅರಣ್ಯ ಪ್ರದೇಶ ವ್ಯಾಪ್ತಿಯ(ಬಂಡೀಪುರ ಹೆಬ್ಬಾಗಿಲು) ಕಾಡಂಚಿನ ಗ್ರಾಮಗಳಾದ ಹಳೆ ಹೆಗ್ಗುಡಿಲು ಮತ್ತು ಹಳಿಯೂರು ಗ್ರಾಮಕ್ಕೆ ಭೇಟಿ ನೀಡಿದ ರೈತ ಕಲ್ಯಾಣ ಸಂಘದ ರಾಜ್ಯಾ ಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ, ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅರಣ್ಯ ಇಲಾಖೆ ಹಾಗೂ ಇನ್ನಿತರೆ ಇಲಾಖೆ ಅಧಿ ಕಾರಿಗಳ ನಿರ್ಲಕ್ಷ್ಯತೆಯಿಂದಾಗಿ ರೈತರು, ಜಾನುವಾರುಗಳು ಪ್ರಾಣ ಕಳೆದುಕೊಳ್ಳು ವಂತಾಗಿದೆ ಎಂದು ದೂರಿದ್ದಾರೆ.

ವನ್ಯಜೀವಿಗಳ ಹಾವಳಿಯಿಂದ ರೈತರು ಸಾಲ ಮಾಡಿ ವರ್ಷಪೂರ್ತಿ ಕಷ್ಟಪಟ್ಟು ಬೆಳೆದ ಬೆಳೆ ಹಾಳಾಗುತ್ತಿದೆ. ಮಾಡಿದ ಸಾಲವನ್ನು ತೀರಿಸಲಾಗದೆ ರೈತರು ಪ್ರಾಣ ಕಳೆದುಕೊಳ್ಳುವ ಸ್ಥಿತಿಯಲ್ಲಿ ದ್ದಾರೆ. ಬೆಳೆ ನಷ್ಟ ಪರಿಹಾರಕ್ಕೆ ತಿಂಗಳು ಗಟ್ಟಲೆ ಸರ್ಕಾರಿ ಕಚೇರಿಗೆ ಅಲೆಯಬೇಕಾ ಗಿದೆ. ಅಲ್ಲದೆ ಹುಲಿ ದಾಳಿಗೆ ರೈತ ನೋರ್ವ ಬಲಿಯಾಗಿದ್ದರೂ, ಜನ ಪ್ರತಿನಿಧಿಗಳು ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರೈತರ ಹಿತ ಕಾಯುವಲ್ಲಿ ರಾಜ್ಯ ಸರ್ಕಾರ ಕ್ರಮ ವಹಿಸಬೇಕಿದೆ. ಸರ್ಕಾರ ಮತ್ತು ಅಧಿಕಾರಿಗಳ ಅಸಡ್ಡೆಯಿಂದಾಗಿ ರೈತರು ಪ್ರಾಣ ಕಳೆದುಕೊಳ್ಳುವಂತಾಗಿದೆ. ಮತ್ತೊಂ ದೆಡೆ ಬೆಳೆ ನಾಶದಿಂದಾಗಿ ರೈತರು ಆತ್ಮಹತ್ಯೆ ದಾರಿ ಹಿಡಿಯುತ್ತಿದ್ದಾರೆ. ಆದ್ದರಿಂದ ಕೂಡಲೇ ರಾಜ್ಯ ಸರ್ಕಾರ ಎಚ್ಚೆತ್ತು ರೈತರ ರಕ್ಷಣೆಗೆ ಸೂಕ್ತ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ವೇಳೆ ರೈತ ಕಲ್ಯಾಣ ಸಂಘದ ಪದಾ ಧಿಕಾರಿಗಳು ಉಪಸ್ಥಿತರಿದ್ದರು.

ವಿಶೇಷಚೇತನರಿಗೆ ಸೌಕರ್ಯ; ಎಂಎಲ್‌ಸಿ ವಿವೇಕಾನಂದರಿಗೆ ಅಭಿನಂದನೆ



ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ತಿಲಕ್‌ನಗರದ ವಿಶೇಷಚೇತನ ಶಾಲೆಯ ಶಿಕ್ಷಕರು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು,ಅ.29(ಎಂಕೆ)– ಮೈಸೂ ರಿನ ತಿಲಕ್‌ನಗರದಲ್ಲಿರುವ ವಿಶೇಷ ಚೇತನ ಮಕ್ಕಳ ಶಾಲೆಯ ಅಭಿವೃದ್ಧಿ ಹಾಗೂ ಮೂಲ ಸೌಕರ್ಯ ಸಮಸ್ಯೆ ಬಗೆ ಹರಿಸುವ ನಿಟ್ಟಿನಲ್ಲಿ ಸಂಪೂರ್ಣ ಸಹಕಾರ ನೀಡಿದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ಶಾಲೆಯ ಶಿಕ್ಷಕರು ಆತ್ಮೀಯವಾಗಿ ಅಭಿನಂದಿಸಿದರು.

ವಿಶೇಷಚೇತನ ಮಕ್ಕಳ ಶಾಲೆಯಲ್ಲಿದ್ದ ಕುಡಿಯುವ ನೀರಿನ ಸಮಸ್ಯೆ ಹಾಗೂ ಇನ್ನಿತರೆ ಮೂಲ ಸೌಕರ್ಯ ಕೊರತೆ ಬಗೆಹರಿಸುವ ನಿಟ್ಟಿನಲ್ಲಿ ಪಾಲಿಕೆ ಆಯುಕ್ತರು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂ ದಿಗೆ ಸಭೆ ನಡೆಸಿ, ಸಮಸ್ಯೆಗಳನ್ನು ಬಗೆಹರಿ ಸಿದ ಹಿನ್ನಲೆಯಲ್ಲಿ ವಿಶೇಷಚೇತನ ಮಕ್ಕಳ ಶಾಲೆ ಅಧೀಕ್ಷಕ ರಘು, ಶಿಕ್ಷಕರಾದ ಮುರಳಿ, ಚಿಕ್ಕಮಹದೇವ್, ನಿಲಯಪಾಲಕ ಆದೀಶ್ ಶಾಸಕರನ್ನು ಸನ್ಮಾನಿಸಿದರು.

ನಾಳೆಯಿಂದ ಮೈಸೂರಲ್ಲಿ ರಾಜ್ಯ ಮೂತ್ರಶಾಸ್ತ್ರ ಶಸ್ತ್ರ ಚಿಕಿತ್ಸಕರ ಸಮ್ಮೇಳನ

ಮೈಸೂರು,ಅ.29(ಜಿಎ)–ಮೈಸೂರು ಮೂತ್ರ ರೋಗಶಾಸ್ತ್ರ ಶಸ್ತ್ರ ಚಿಕಿತ್ಸಕರ ಸಂಘದ ವತಿಯಿಂದ ಅಕ್ಟೋಬರ್ 31ರಿಂದ ನವೆಂಬರ್ 2ರವರೆಗೆ ಹೆಬ್ಬಾಳಿನಲ್ಲಿರುವ ನಾರ್ತ್ ಅವೆನ್ಯೂ ಸಭಾಂಗಣದಲ್ಲಿ ರಾಜ್ಯ ಮೂತ್ರ ಶಾಸ್ತ್ರ ಶಸ್ತ್ರ ಚಿಕಿತ್ಸಕರ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಂಘಟನಾ ಸಮಿತಿ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.31ರಂದು ಬೆಳಗ್ಗೆ 8ಗಂಟೆಗೆ ಪೂರ್ವ ಸಮ್ಮೇಳನದ ಅಂಗವಾಗಿ ನಗರದ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದೆಹಲಿ, ಹೈದರಾಬಾದ್, ಬೆಂಗಳೂರು ಮೊದಲಾದ ಕಡೆಗಳಿಂದ ಆಗಮಿಸುವ 6 ಮಂದಿ ತಜ್ಞ ವೈದ್ಯರು ಈಗಾಗಲೇ ಆಯ್ಕೆ ಮಾಡಿದ ಒಟ್ಟು 15 ಮಂದಿ

ಲೈವ್ ಶಸ್ತ್ರಚಿಕಿತ್ಸೆ ಪ್ರದರ್ಶಿಸಿ ಅನುಮಾನ ನಿವಾರಣೆ

ಮೂತ್ರರೋಗ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ನೆರವೇರಿಸಲಿದ್ದಾರೆ. ಇದನ್ನು ಲೈವ್ ಆಗಿ ಸಮ್ಮೇಳನದಲ್ಲಿ ಪಾಲ್ಗೊಂಡಿರುವ ಪ್ರತಿನಿಧಿಗಳಿಗೆ ಪ್ರದರ್ಶಿಸಿ, ಅವರ ಅನು ಮಾನಗಳನ್ನು ಬಗೆಹರಿಸುವ ಪ್ರಯತ್ನ ಮಾಡಲಿದ್ದಾರೆ ಎಂದು ಹೇಳಿದರು.

ನ.1ರಂದು ಬೆಳಗ್ಗೆ 9ರಿಂದ ಸಂಜೆ 6, ನ.2ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಸಮ್ಮೇಳನ ನಡೆಯಲಿದ್ದು, ಸುಮಾರು 350 ಮಂದಿ ಪ್ರತಿನಿಧಿಗಳು ರಾಜ್ಯದ ವಿವಿಧೆಡೆಯಿಂದ ಆಗಮಿಸಿ ಪಾಲ್ಗೊ ಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ತಜ್ಞ ವೈದ್ಯರಾದ ಡಾ.ಕಿರಣ್, ಡಾ.ಸಚಿನ್ ಧಾರವಾಡಕರ್, ಡಾ.ಜಿ.ಎಸ್.ದಯಾ ನಂದ್, ಡಾ.ಪ್ರಸಾದ್ ಉಪಸ್ಥಿತರಿದ್ದರು.

ಸಿಂಹ ಸುಬ್ಬಲಕ್ಷ್ಮಿ ಕಾಲೇಜಲ್ಲಿ ಪದವಿ ಪ್ರದಾನ ಸಮಾರಂಭ



ಮೈಸೂರಿನ ಸಿಂಹ ಸುಬ್ಬಲಕ್ಷ್ಮಿ ಪ್ರಥಮದರ್ಜೆ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ ನಡೆಯಿತು. ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ನಾಗರಾಜ, ಜಿಎಸ್‌ಎಸ್‌ಎಸ್ ಕಾರ್ಯದರ್ಶಿ ಶ್ರೀಮತಿ ಅನುಪಮ ಬಿ.ಪಂಡಿತ್, ಕಾರ್ಯನಿರ್ವಾಹಕ ಆರ್.ಕೆ.ಭರತ್ ಹಾಗೂ ಪ್ರಾಂಶುಪಾಲ ಡಾ.ಟಿ.ಎಸ್.ರಾಕೇಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಸ್ನೇಹ ಬಳಗದಿಂದ ಕನ್ನಡ ರಾಜ್ಯೋತ್ಸವ ಆಚರಣೆ

ಮೈಸೂರು: ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕಿತ್ತೂರುರಾಣಿ ಚನ್ನಮ್ಮ ವೃತ್ತ ಸ್ನೇಹ ಬಳಗದಿಂದ ನ.1ರಂದು ಕನ್ನಡ ರಾಜ್ಯೋತ್ಸವವನ್ನು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳುವ ಮೂಲಕ ಆಚರಿಸಲಾಗುತ್ತಿದೆ.

ನ.1, ಸ್ವಚ್ಛತೆ ಅಭಿಯಾನ: ಪರಿಸರದ ಶುದ್ಧತೆಗೆ ಪ್ರಾರಂಭಿಕ ಹೆಜ್ಜೆ: ಮಕ್ಕಳಿಗೆ ಕ್ರೀಡಾ ಸ್ಪರ್ಧೆಗಳು: ಎಲ್ಲಾ ವಯಸ್ಸಿನ ಮಕ್ಕಳಿಗೆ ಭಾಗವಹಿಸಲು ಅವಕಾಶ; ಮಹಿಳೆಯ ರಿಂದ ನಾಡಗೀತೆ ಪ್ರದರ್ಶನ, ಸಾಮಾ ಜಿಕ ಸಂದೇಶಗಳು: ಹೆಲ್ಮೆಟ್ ಸುರಕ್ಷತೆ, ಪರಿಸರ ಸಂರಕ್ಷಣೆ, ನ.9ರಂದು ಸಂಘದ ಉದ್ಘಾಟನೆ, ಗಣ್ಯ ವ್ಯಕ್ತಿಗಳಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳು: ನೃತ್ಯ ಹಾಡು, ಆರ್ಕೆಸ್ಟ್ರಾ ಆರೋಗ್ಯ ತಪಾಸಣೆ ಶಿಬಿರ: ಕಣ್ಣು ತಪಾಸಣೆ, ಸಾಮಾನ್ಯ ಆರೋಗ್ಯ ತಪಾ ಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ನಿಧನ



ಎಂ.ಗಿರೀಶ್

ಮೈಸೂರು, ಅ.29–ಮೈಸೂರು ಕೆ.ಆರ್.ಬ್ಯಾಂಕ್‌ನ ಹಿರಿಯ ಸಹಾಯಕರಾದ ಎಂ.ಗಿರೀಶ್ ಅವರು ಇಂದು ನಿಧನರಾದರು. ಅವರಿಗೆ 53 ವರ್ಷ ವಯಸ್ಸಾಗಿತ್ತು. ಮೃತರು ತಂದೆ–ತಾಯಿ, ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರ ಅಗಲಿ ದ್ದಾರೆ. ಇವರು ಮೂಲತಃ ನಂಜನಗೂಡು ತಾಲೂಕು ಹದಿನಾರು ಗ್ರಾಮದವರು. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ ಸ್ವಗ್ರಾಮ ಹದಿನಾರು ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನದ ಹಿನ್ನೆಲೆಯಲ್ಲಿ ನಾಳೆ (ಗುರುವಾರ) ಬ್ಯಾಂಕ್‌ಗೆ ರಜೆ ನೀಡಲಾಗುತ್ತಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.10.2025 ಗುರುವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ಮಹಾತರಂಗ್ ಅಂತರ ಕಾಲೇಜು ಪಿಯು ಫೆಸ್ಟ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾ ಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಲಕ್ವ/ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ, ಕಾರ್ನಿಯಾದ ಅಪಾರದರ್ಶಕತೆ/ ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ), ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಉಬ್ಬಿದ ರಕ್ತನಾಳ, ಮೊಡವೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್ :** 5ನೇ ಶಾಖಾ ಕಚೇರಿ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮಾಜಿ ಸಂಸದ ಪ್ರತಾಪ್ ಸಿಂಹ, ಸ್ಥಳ: ಮೈತ್ರಿ ಆರ್ಕೇಡ್, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಜನಪದ ಮಹಾಕಾವ್ಯಗಳಲ್ಲಿ ಸ್ತ್ರೀ ಸಂವೇದನೆ ಕುರಿತು ವಿಚಾರ ಸಂಕಿರಣ, ಡಾ. ಗುರುರಾಜು ಅವರಿಂದ ಜನಪದ ಕಾವ್ಯ ಗಾಯನ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಉದ್ಘಾಟನೆ : ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಆಶಯ ನುಡಿ : ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್. ಸುನಂದಮ್ಮ, ಪ್ರಾಸ್ತಾವಿಕ ನುಡಿ : ಮಂಟೇಸ್ವಾಮಿ ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಕೇಶವಶರ್ಮ, ಸ್ಥಳ: ಬಿಎಂಶ್ರೀ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ :** ಮೈಸೂರು ಜಿಲ್ಲಾ ಬ್ಯಾಂಕುಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ, ಸ್ಥಳ: ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ರಿಬಾರ್ನ್ ಫೌಂಡೇಷನ್,** ವಿಶೇಷ ಮಕ್ಕಳ ಶಾಲೆ ಹಾಗೂ ಪುನರ್ವಸತಿ ಕೇಂದ್ರ : ಪುನರ್ವಸತಿ ಉಪಕರಣಗಳ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಕೆ.ಜಿ. ಕೊಪ್ಪಲು ಸರಕಾರಿ ಶಾಲೆ, ಬೆಳಗ್ಗೆ 11ಕ್ಕೆ.

■ **ಹಿರಿಯ ನಾಗರಿಕರ ಮಂಡಳಿ, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ :** ವಿಶ್ವ ಹಿರಿಯ ನಾಗರಿಕರ ದಿನಾಚರಣೆ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮುಖ್ಯ ಅತಿಥಿಗಳು : ಉದ್ಯಮಿ ಜಗನ್ನಾಥ್ ಶೆಣೈ, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಛೇರ್ಮನ್ ಎಸ್.ವಿ. ಗೌಡಪ್ಪ, ಅಧ್ಯಕ್ಷತೆ : ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ. ಎಚ್.ಎಂ. ನಾಗರಾಜು, ಸನ್ಮಾನಿತರು : ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪಿ.ವೆಂಕಟರಾಮಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಜಿ.ಸದಾನಂದಯ್ಯ, ಸ್ಥಳ: ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮೀಪುರಂ, ಬೆಳಗ್ಗೆ 11ಕ್ಕೆ.

■ **ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಮೈಸೂರು ಜಿಲ್ಲಾ ಸಮಿತಿ :** ಎಐಟಿಯುಸಿ 106ನೇ ಸಂಸ್ಥಾಪನಾ ದಿನಾಚರಣೆ, ಪ್ರಧಾನ ಭಾಷಣ : ಎಐಟಿಯುಸಿ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ಆರ್. ಶೇಷಾದ್ರಿ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ರಂಗಾಂತರಂಗ ಮೈಸೂರು ಮಕ್ಕಳ ರಂಗಭೂಮಿ :** ಪಿ. ಲಂಕೇಶ್ ಅವರ ಕಥೆಯಾಧಾರಿತ 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನ, ರಂಗರೂಪ, ನಿರ್ದೇಶನ: ಕೀರ್ತಿರಾಜ್, ಮುಖ್ಯ ಅತಿಥಿಗಳು: ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಅಧ್ಯಕ್ಷ ಆರ್. ರಘು (ಕೌಟಿಲ್ಯ), ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಭಾರತ್ ಕ್ಯಾನ್ಸರ್ ಆಸ್ಪತ್ರೆ ನಿರ್ದೇಶಕ ಡಾ. ಅಮರ್ ಕುಮಾರ್, ಡಾ. ಟಿ. ಪದ್ಮಶ್ರೀ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸಾಹಿತಿ ವೆಂಕಟೇಶ್ ಈಡಿಗರ, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.

■ **ಚಿನ್ಮಯ ಮಿಷನ್, ಶ್ರೀ ಗುರುದೇವ ದತ್ತ ಸನ್ನಿಧಿ :** ಗೀತಾಜ್ಞಾನಯಜ್ಞ, ಪೂಜ್ಯ ಸ್ವಾಮಿ ಗಹನಾನಂದ ಅವರಿಂದ ಭಗವದ್ಗೀತೆಯ 3ನೇ ಅಧ್ಯಾಯ ಕರ್ಮ ಯೋಗ ಕುರಿತು ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6.30 ರಿಂದ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಸಂಜೆ 7ಕ್ಕೆ ಶ್ರೀ ಹೇಮಾದ್ರಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

ಮಾಣಿಕ್ಯಪುರದಲ್ಲಿಂದು, ಮೈಸೂರು ತಾಲೂಕು

■ **ಶ್ರೀ ಶನೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಶನೇಶ್ವರಸ್ವಾಮಿಯವರ ನೂತನ ದೇವಸ್ಥಾನದ ಉದ್ಘಾಟನೆ ಹಾಗೂ ದೇವರ ಪ್ರತಿಷ್ಠಾಪನಾ ಕಾರ್ಯಕ್ರಮ, ಪ್ರತಿಷ್ಠಾಪನೆ, ಕಳಸರಾಧನೆ, ನವಗ್ರಹ ಸಮೇತ ಶನೇಶ್ವರ ಸ್ವಾಮಿ ಪೂಜೆ, ಮಹಾಯಾಗ, ಮೂಲಮಂತ್ರ, ಹೋಮ, ಸ್ವಾಮಿಗೆ ಪೂರ್ಣಾಹುತಿ, ಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಮಡಿವಾಳಸ್ವಾಮಿ ಮಠದ ಶ್ರೀ ಇಮ್ಮಡಿ ಮಡಿವಾಳ ಸ್ವಾಮೀಜಿ, ಶೆಟ್ಟಿನಾಯಕನಹಳ್ಳಿ ಮಠಾಧ್ಯಕ್ಷ ಶ್ರೀ ಬಸವಣ್ಣ ಸ್ವಾಮೀಜಿ, ದೇವಲಾಪುರ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಜಡೇಸ್ವಾಮೀಜಿ, ಅಧ್ಯಕ್ಷತೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಡಿ. ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಮರೀಗೌಡ, ಕೋಟೆಹುಂಡಿ ಮಹದೇವು, ಬೆಳವಾಡಿ ಶಿವಮೂರ್ತಿ, ಬೀರಿಹುಂಡಿ ಬಸವಣ್ಣ, ಕವೀಶ್‌ಗೌಡ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊ. ಸಿ. ನಾಗಣ್ಣ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ. ಪುಷ್ಪಲತಾ ಹಾಗೂ ಎಂ. ರಾಘವೇಂದ್ರ, ವ್ಯಾಖ್ಯಾನ– ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, 9.10 ಕನ್ನಡದ ಕಸ್ತೂರಿ–ನಾ ಕಸ್ತೂರಿ ನೆನಪುಗಳ ಮಾಲಿಕೆ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಜಯಶ್ರೀ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ವಿಶ್ವ ಕಪ್ ಮಹಿಳಾ ಕ್ರಿಕೆಟ್ ಸೆಮಿಫೈನಲ್ ಪಂದ್ಯದ ವೀಕ್ಷಕ ವಿವರಣೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ–ನಂಜನಗೂಡು ತಾಲೂಕು, ದೊಡ್ಡ ಕವಲಂದೆ ಹೋಬಳಿ ಮಲ್ಲಹಳ್ಳಿಯ ಕೃಷಿಕ ದಂಪತಿ ಎಂ.ನಾಗರಾಜು ಹಾಗೂ ಗೌರಮ್ಮ ಪ್ರಸ್ತುತಿ–ಎನ್.ಕೇಶವ ಮೂರ್ತಿ, 7.45 ವಿಶ್ವ ಕಪ್ ಮಹಿಳಾ ಕ್ರಿಕೆಟ್ ಸೆಮಿಫೈನಲ್ ಪಂದ್ಯದ ವೀಕ್ಷಕ ವಿವರಣೆ ಮುಂದುವರಿಯುತ್ತದೆ

ಆದ್ಯತೆ ಮೇರೆಗೆ ಮೈಸೂರು ಕೈಗಾರಿಕಾ ಪ್ರದೇಶಗಳ ಸಮಸ್ಯೆಗೆ ಪರಿಹಾರ

● ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಭರವಸೆ ● ಕೆಐಎಡಿಬಿಗೆ ತೆರಿಗೆ ಸಂದಾಯವಾಗುತ್ತಿರುವುದರಿಂದ ಎಲ್ಲಾ ಅಭಿವೃದ್ಧಿಯನ್ನು ಅದೇ ಮಾಡಲಿದೆ



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಬುಧವಾರ ಕೈಗಾರಿಕಾ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ರೈತ ಮುಖಂಡರೊಂದಿಗೆ ಸಭೆ ನಡೆಸಿದರು.

ಮೈಸೂರು, ಅ.29(ಎಸ್‌ಬಿಡಿ)– ಮೈಸೂರಿನ ಕೈಗಾರಿಕಾ ಪ್ರದೇಶಗಳ ಎಲ್ಲಾ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಪರಿಹರಿಸುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ್ ಭರವಸೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಕೈಗಾರಿಕಾ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ಅವರು, ಕಾಟಾಚಾರಕ್ಕೆ ಸಭೆ ಮಾಡಲು ಬಂದಿಲ್ಲ. ಈಗಾಗಲೇ ಎಲ್ಲಾ ಇಲಾಖೆಯ ಸಚಿವರು, ಅಧಿಕಾರಿಗಳೊಂದಿಗೆ ಸಭೆ ನಡೆಸಿ, ನೆರೆ ರಾಜ್ಯಗಳಲ್ಲಿರುವ ವ್ಯವಸ್ಥೆ ಬಗ್ಗೆ ಚರ್ಚೆ ನಡೆಸಿದ್ದು, ಅದರ ವರದಿಯನ್ನು ಕ್ಯಾಬಿನೆಟ್‌ಗೂ ತರುತ್ತಿದ್ದೇವೆ. ಕೈಗಾರಿಕೋದ್ಯಮದಲ್ಲಿ ನಮ್ಮದು ಮಾದರಿ ರಾಜ್ಯ ಆಗಬೇಕೆಂಬ ಆಶಯದೊಂದಿಗೆ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ನಾನು ಕೈಗಾರಿಕಾ ಸಚಿವನಾದ ಮೇಲೆ ಪ್ರಥಮ ಬಜೆಟ್‌ನಲ್ಲೇ ಹಳೆ ಕೈಗಾರಿಕಾ ಪ್ರದೇಶಗಳಲ್ಲಿ ಏಕಕಾಲಕ್ಕೆ ಸಕಲ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಯಿತಾದರೂ ಅದು ಸಾಧ್ಯವಾಗಲಿಲ್ಲ. ಆದರೆ ಈಗ ವಿಶೇಷ ಹೂಡಿಕೆ ಪ್ರದೇಶ (ಎಸ್‌ಐಆರ್) ಕಾಯ್ದೆಯಿಂದ ಅಭಿವೃದ್ಧಿಗೆ ಅವಕಾಶ ಸೃಷ್ಟಿಯಾಗಿದೆ. ಈವರೆಗೆ ಕೈಗಾರಿಕೋದ್ಯಮಿಗಳಿಂದ ಆ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ಪಾವತಿಸಲಾಗುತ್ತಿದ್ದು, ಆಗ ಶೇ.10ರಷ್ಟು ಮಾತ್ರ ಕೈಗಾರಿಕಾ ಪ್ರದೇಶದಲ್ಲಿ ಕೆಲಸವಾಗುತ್ತಿತ್ತು. ಆದರೆ ಎಸ್‌ಐಆರ್‌ನಿಂದ ಕೆಐಎಡಿಬಿಗೆ ಸಂಪೂರ್ಣ ತೆರಿಗೆ ಸಂದಾಯವಾಗುವುದರಿಂದ ಆಯಾ ವ್ಯಾಪ್ತಿಯಲ್ಲೇ ವೆಚ್ಚ ಮಾಡಲು ಅವಕಾಶವಿದೆ. ಇನ್ನು ಕೈಗಾರಿಕೋದ್ಯಮಿಗಳ ಸಂಪರ್ಕಿಸಿ ಆದ್ಯತೆ ಮೇರೆಗೆ ರಸ್ತೆ, ಟ್ರೀಟ್ಮೆಂಟ್ ಪ್ಲಾಂಟ್, ನೀರು, ಚರಂಡಿ ಸೇರಿದಂತೆ ಎಲ್ಲಾ ಅಭಿವೃದ್ಧಿ ಕೆಲಸ ಮಾಡಲಾಗುವುದು. ಸ್ವಲ್ಪ ಸಮಯಾವಕಾಶ ಕೊಡಿ, ನಿಮ್ಮೆಲ್ಲಾ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಮುಖ್ಯವಾಗಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ದುಸ್ಥಿತಿಯಲ್ಲಿದ್ದು, ಯಾವ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಹೂಟಗಳ್ಳಿ ನಗರಸಭೆಗೆ ಸಾಕಷ್ಟು ಕಂದಾಯ ಪಾವತಿಸಿದ್ದೇವೆ. ಇನ್ಫೋಸಿಸ್‌ನಿಂದ 13 ಕೋಟಿ ಸೇರಿ ಕೈಗಾರಿಕೆಗಳಿಂದ 15 ಕೋಟಿ ಕೆಐಎಡಿಬಿಗೆ ಹಣ ಸಂದಾಯ ಮಾಡಿದ್ದಾರೆ. ಆದರೂ ಯಾವುದೇ ಕಾಮಗಾರಿಗಳಾಗಿಲ್ಲ. ಹೂಟಗಳ್ಳಿ ನಗರಸಭೆಯಿಂದ ಒಂದೂವರೆ ವರ್ಷದಿಂದ ವಸತಿ ಹಾಗೂ ಕೈಗಾರಿಕಾ ಪ್ರದೇಶ ಒಟ್ಟಿಗೆ ಟೆಂಡರ್ ಕರೆದು ಅದ್ವಾನ ಮಾಡಿದ್ದಾರೆ. 2013ರಿಂದ ಹಣ ಪಾವತಿಸಿದವರಿಗೂ ನಿವೇಶನ ಮಂಜೂರು ಮಾಡಿಲ್ಲ. ಹೆಬ್ಬಾಳು ಎರಡನೇ ಹಂತಕ್ಕೆ ಸಾರಿಗೆ ಬಸ್ ಸೌಲಭ್ಯ ಕಲ್ಪಿಸಿಲ್ಲ. ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಓವರ್ ಬ್ರಿಡ್ಜ್ ಯೋಜನೆಯೂ ಕೈಗೂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಮಾತನಾಡಿ, ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಓವರ್ ಬ್ರಿಡ್ಜ್ ಯೋಜನೆ ಸಂಬಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ, ಸಮಸ್ಯೆ ಬಗೆಹರಿಸಲಾಗಿದ್ದು, ಮುಂದಿನ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು. ಹಾಗೆಯೇ ಎಸ್‌ಐಆರ್ ಪೂರ್ವದಲ್ಲಿ ಹೂಟಗಳ್ಳಿ ನಗರಸಭೆಯಿಂದ ಸಂಗ್ರಹಿಸಿದ್ದ ತೆರಿಗೆಯ 60 ಕೋಟಿ ಮೊತ್ತದಲ್ಲಿ ಕೈಗಾರಿಕಾ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಮಾತನಾಡಿ, ಹಿಂದೆ ಸ್ಥಳೀಯ ಸಂಸ್ಥೆಯವರು ತೆರಿಗೆ ಹಾಗೂ ನಿರ್ವಹಣಾ ವೆಚ್ಚವೆಂದು ಸ್ವಲ್ಪ ಮೊತ್ತವನ್ನು ಕೆಐಎಡಿಬಿಯಿಂದ ತೆಗೆದುಕೊಳ್ಳುತ್ತಿದ್ದರು. ಎಸ್‌ಐಆರ್ ಬಂದ ಮೇಲೆ ನಿರ್ವಹಣಾ ವೆಚ್ಚ ಬಿಟ್ಟು ಸಂಪೂರ್ಣ ತೆರಿಗೆಯನ್ನು ಕೆಐಎಡಿಬಿಗೆ ಪಾವತಿಸುವುದರಿಂದ ಸಂಪೂರ್ಣ ಜವಾಬ್ದಾರಿಯನ್ನೂ ನಿರ್ವಹಿಸಲಾಗುವುದು ಎಂದರು.

ಸಭೆಯಲ್ಲಿ ಮಾಜಿ ಮೇಯರ್ ವಿಶ್ವನಾಥ್, ಸುರೇಶ್‌ಕುಮಾರ್ ಜೈನ್, ಸತೀಶ್, ರವೀಂದ್ರ ಪ್ರಭು, ರವಿಕೋಟಿ ಸೇರಿದಂತೆ ಅನೇಕ ಕೈಗಾರಿಕೋದ್ಯಮಿಗಳು, ದಲಿತ ಮುಖಂಡ ಶ್ರೀಧರ್ ಮೂರ್ತಿ ಸೇರಿದಂತೆ ಹಲವು ರೈತ ಮುಖಂಡರು ಸಮಸ್ಯೆ ಹಾಗೂ ಬೇಡಿಕೆ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಅಧಿಕಾರಿಗಳು ಸಭೆಯಲ್ಲಿದ್ದರು.

> ▶ ಮೈಸೂರಿನಲ್ಲಿ ಸುಮಾರು 8,884 ಕೋಟಿ ಹೂಡಿಕೆಗೆ ಕ್ಲಿಯರೆನ್ಸ್ ನೀಡಿದ್ದು, ಇದರಿಂದ 10,144 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡಿ, ಎಲ್ಲಾ ಪ್ರಕ್ರಿಯೆ ಪೂರ್ಣಗೊಳಿಸುವುದು ನಮ್ಮಿಂದ ವಿಳಂಬವಾದರೆ ಅನುಷ್ಠಾನ ಅವಧಿಯನ್ನು ವಿಸ್ತರಿಸಲಾಗುವುದು. ಪೂರ್ಣ ಕ್ಲಿಯರೆನ್ಸ್ ನೀಡಿದಾಗಿನಿಂದ ಅನುಷ್ಠಾನ ಅವಧಿ ಪರಿಗಣಿಸಲಾಗುವುದು. ಇದು ರಾಜ್ಯಾದ್ಯಂತ ಅನ್ವಯವಾಗಲಿದೆ.
> – ಎಂ.ಬಿ.ಪಾಟೀಲ್, ಸಚಿವ

ಕೈಗಾರಿಕಾ ಸಚಿವರ ಕಾದು... ಕಾದು... ಸುಸ್ತಾದ ಉದ್ಯಮಿಗಳು!

ಮೈಸೂರು, ಅ.29– ಮೊದಲ ಬಾರಿ ಮೈಸೂರಿನ ಕೈಗಾರಿಕೋದ್ಯಮಿಗಳ ಸಮಸ್ಯೆ ಆಲಿಸಲು ಆಗಮಿಸಿದ್ದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು, ಸಭೆಗೆ ಒಂದು ಮುಕ್ಕಾಲು ಗಂಟೆ ತಡವಾಗಿ ಬಂದರು.

ಜಿಲ್ಲಾಧಿಕಾರಿಗಳ ಕಚೇರಿ ಕೋರ್ಟ್ ಸಭಾಂಗಣದಲ್ಲಿ ಬುಧವಾರ ಮಧ್ಯಾಹ್ನ 2.30ಕ್ಕೆ ಕೈಗಾರಿಕಾ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಸಭೆ ನಿಗದಿಪಡಿಸಲಾಗಿತ್ತು. ಸರಿಯಾದ ಸಮಯಕ್ಕೆ ಕೈಗಾರಿಕೋದ್ಯಮಿಗಳು ಸಭಾಂಗಣದಲ್ಲಿ ಆಸೀನರಾಗಿದ್ದರು. ಸಚಿವರು ಇನ್ನೇನು ಬರುತ್ತಾರೆಂದು ಭಾವಿಸಿದ್ದ ಉದ್ಯಮಿಗಳು, ಕಾದು ಸುಸ್ತಾಗಿ ಹಲವು ಕೈಗಾರಿಕೋದ್ಯಮಿಗಳು ಗೊಣಗಲಾರಂಭಿಸಿದರು. ಇನ್ನೇನು ಹೊರಡೋಣವೆಂದು ಮಾತನಾಡಿಕೊಳ್ಳುವಾಗಲೇ ಸಚಿವರು ಸಂಜೆ 4.15ರ ಹೊತ್ತಿಗೆ ಪ್ರತ್ಯಕ್ಷರಾದರು.

ಸಭೆಯಲ್ಲೂ ಕೆಲ ಉದ್ಯಮಿಗಳು, ಎರಡೂವರೆ ವರ್ಷಗಳಲ್ಲಿ ಮೊದಲ ಬಾರಿ ನಮ್ಮ ಸಮಸ್ಯೆಗಳನ್ನು ಆಲಿಸಲು ಬಂದಿರುವುದಕ್ಕೆ ಅಭಿನಂದನೆಗಳು. ಬೆಂಗಳೂರಿನ ಉದ್ಯಮಿಗಳ ಸಮಸ್ಯೆಗಳಿಗೂ ಮೈಸೂರಿನ ಪರಿಸ್ಥಿತಿ ಭಿನ್ನವಾಗಿಲ್ಲ. ಇಲ್ಲಿ ಮೂಲಸೌಕರ್ಯಗಳೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಿಮ್ಮಾವು ಕೈಗಾರಿಕಾ ಪ್ರದೇಶಕ್ಕೆ ಭೂಮಿ ನೀಡಿದ ರೈತರಿಗೆ ಪರಿಹಾರದಲ್ಲಿ ಅಕ್ರಮ ಆರೋಪ

ಸಮಗ್ರ ತನಿಖೆಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸೂಚನೆ

▶ ಈ ವಿಷಯದಲ್ಲಿ ತಹಶೀಲ್ದಾರ್ ಪಾತ್ರದ ಬಗ್ಗೆಯೂ ಪರಿಶೀಲನೆ
▶ ರೈತರು, ಉದ್ಯಮಿಗಳಿಂದ ಸಚಿವರಿಗೆ ಸಮಸ್ಯೆ ಮನವರಿಕೆ

ಮೈಸೂರು, ಅ.29(ಎಸ್‌ಬಿಡಿ)– ನಂಜನಗೂಡು ತಾಲೂಕು ಹಿಮ್ಮಾವು ಕೈಗಾರಿಕಾ ಪ್ರದೇಶದ ಸಂತ್ರಸ್ತರಿಗೆ ಪರಿಹಾರ ವಿತರಣೆ ಸಂಬಂಧ ಸಮಗ್ರ ತನಿಖೆ ನಡೆಸುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ್ ಸೂಚನೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಕೈಗಾರಿಕಾ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರೈತ ಮುಖಂಡರೊಂದಿಗೆ ನಡೆಸಿದ ಸಭೆಯಲ್ಲಿ, ಹಲವು ರೈತ ಮುಖಂಡರು ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಭೂಮಿ ಕಳೆದುಕೊಂಡ ನಿಜವಾದ ರೈತರಿಗೆ ಪರಿಹಾರ ನೀಡಿಲ್ಲ. ಇದಕ್ಕೆಲ್ಲಾ ತಹಶೀಲ್ದಾರ್ ಕಾರಣ ಎಂದು ಆರೋಪಿಸಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಈ ಸೂಚನೆ ನೀಡಿದ ಅವರು, ತನಿಖೆ ನಂತರ ಅರ್ಹರಿಗೆ ಮಾತ್ರ ಪರಿಹಾರ ದೊರಕುವಂತೆ ಕ್ರಮ ವಹಿಸುವುದರ ಜೊತೆಗೆ ತಹಶೀಲ್ದಾರ್ ಮೇಲಿನ ಆರೋಪದ ಬಗ್ಗೆಯೂ ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ಮಾತನಾಡಿದ ರೈತ ಮುಖಂಡ ಹೊಸಕೋಟೆ ಬಸವರಾಜು, ಹಿಮ್ಮಾವು ಕೈಗಾರಿಕಾ ಪ್ರದೇಶಕ್ಕೆ ಭೂಮಿ ನೀಡಿದ 444 ಜನರಿಗೆ ತಲಾ 4 ಲಕ್ಷ ರೂ.ನಂತೆ 18 ಕೋಟಿ ಹಣ ಬಿಡುಗಡೆ ಮಾಡಿದ್ದಾರೆ. ಇವರಲ್ಲಿ ಶೇ.80ರಷ್ಟು ಅನರ್ಹರಿಗೆ ನೀಡಿದ್ದಾರೆ. ಎಲ್ಲಾ ಅರ್ಹರಿಗೂ ಪರಿಹಾರ ಹಾಗೂ ಅವರ ಕುಟುಂಬಕ್ಕೆ ಉದ್ಯೋಗ ನೀಡಬೇಕು. ಈ ಅಕ್ರಮದಲ್ಲಿ ಭಾಗಿಯಾಗಿರುವ ತಹಶೀಲ್ದಾರ್ ಅವರನ್ನು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು.

ಮತ್ತೋರ್ವ ರೈತ ಮುಖಂಡ ಮಾತನಾಡಿ, ನಮ್ಮ ಗಮನಕ್ಕೆ ಬಾರದಂತೆ ಹಿಮ್ಮಾವು ಕೈಗಾರಿಕಾ ಪ್ರದೇಶಕ್ಕೆ ಭೂಮಿ ಸ್ವಾಧೀನಪಡಿಸಿಕೊಂಡಿದ್ದರಿಂದ ಹೋರಾಟ ನಡೆಸಿದೆವು. ನಂತರ ಪರಿಹಾರದ ಜೊತೆಗೆ ಕುಟುಂಬಕ್ಕೆ ಒಂದು ಉದ್ಯೋಗ, ಆಶ್ರಯ ಮನೆ ಅಥವಾ ನಿವೇಶನ ನೀಡಬೇಕೆಂದು ತೀರ್ಮಾನಿಸಲಾಯಿತು. ಆದರೆ ಈವರೆಗೆ ಎಲ್ಲಾ ರೈತರಿಗೂ ಪರಿಹಾರ ಸಿಕ್ಕಿಲ್ಲ. ತಹಶೀಲ್ದಾರ್ ಅವ್ಯವಹಾರ ಮಾಡಿದ್ದಾರೆ ಎಂದರು.

ಕಡಕೊಳ ಕೈಗಾರಿಕಾ ಪ್ರದೇಶದ ಉದ್ಯಮಿ ರಾಮಕೃಷ್ಣೇಗೌಡ ಮಾತನಾಡಿ, ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ನೂರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನಿವೇಶನ ಮಂಜೂರಾಗಿ ಮೂರು ವರ್ಷವಾಗಿದೆ. ಆದರೆ ಕೈಗಾರಿಕೆ ನಿರ್ಮಾಣಕ್ಕೆ ಭೂಮಿ ಕಳೆದುಕೊಂಡಿರುವ ರೈತರು ಅಡ್ಡಿಪಡಿಸುತ್ತಿದ್ದಾರೆ. ಪರಿಣಾಮ ಉದ್ಯಮಿಗಳಿಗೆ ನೀಡಿರುವ ಅನುಷ್ಠಾನ ಅವಧಿಯೇ ಮುಕ್ತಾಯವಾಗುತ್ತಿದೆ. ಕೆಐಎಡಿಬಿ ವತಿಯಿಂದ ನಿವೇಶನ ಪತ್ರ ಹಂಚಿಕೆಯೂ ವಿಳಂಬವಾಗುತ್ತಿದೆ ಎಂದು ಅಳಲು ತೋಡಿಕೊಂಡರು.

ತ್ರಿವೇಣಿ ಕಂಪನಿಯ ಪ್ರತಿನಿಧಿ ರಾಜಾ ಮಾತನಾಡಿ, ಇಮ್ಮಾವು ರೈತರ ಸಮಸ್ಯೆ ಬಗೆಹರಿಯದ ಕಾರಣ ನಮ್ಮೊಂದಿಗೆ ಕೈಗಾರಿಕೆ ಸ್ಥಾಪನೆಗೆ ಮುಂದಾಗಿರುವ ಇನ್ನೂ ಮೂರ್ನಾಲ್ಕು ಉದ್ಯಮಿಗಳಿಗೆ ಅಡ್ಡಿಯಾಗಿದೆ. ಇನ್ನೂ 45 ಜನರ ಪರಿಹಾರ ಬಾಕಿ ಇರುವುದರಿಂದ ಅಡ್ಡಿ ಮಾಡಲಾಗುತ್ತಿದೆ. ನಿರ್ದೇಶನ ಬಂದರೆ ಕೈಗಾರಿಕೋದ್ಯಮಿಗಳು ನೀಡಲು ಸಿದ್ಧರಿದ್ದು, ಕೆಐಎಡಿಬಿಯಿಂದ ನೇರವಾಗಿ ರೈತರಿಗೆ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

ಮೈಮುಲ್ ಅಧ್ಯಕ್ಷರಿಗೆ ಅಭಿನಂದನೆ



ಮೈಮುಲ್ ಅಧ್ಯಕ್ಷರಾದ ಕೆ. ಈರೇಗೌಡ ಅವರನ್ನು ಬುಧವಾರ ಚಾಮರಾಜನಗರ ಜಿಲ್ಲಾ ಡೈರಿ ನೌಕರರ ಪತ್ತಿನ ಸಹಕಾರ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷರಾದ ಶಿವರಾಜು ಎಸ್., ಉಪಾಧ್ಯಕ್ಷ ಹರೀಶ್ ಡಿ., ನಿರ್ದೇಶಕರಾದ ಕೋದಂಡರಾಮ ಎಸ್., ಲಲಿತಾ ಹೆಚ್., ಸಂತೋಷ್ ಆರ್., ರಜಿನಿ ಎನ್., ರವಿಕುಮಾರ್ ಎಸ್.ಜಿ., ನಟರಾಜು ಎಸ್., ಮಹಮ್ಮದ್ ಪರ್ವೀಜ್, ನಂದೀಶ್ ಕೆ.ಎನ್., ವಿನಯ್‌ಕುಮಾರ್ ಎಸ್., ಚಿದಾನಂದಮೂರ್ತಿ ಎಸ್., ಮಂಜು ಕೆ., ಮಂಜುಳಾ ಎನ್.ಎಂ. ಉಪಸ್ಥಿತರಿದ್ದಾರೆ.

ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಸಭೆ

ಕಾಗಿನೆಲೆಯಲ್ಲಿ ಪ್ರತಿವರ್ಷ ಕನಕ ಉತ್ಸವ ಆಚರಿಸಲು ನಿರ್ಧಾರ

ಬೆಂಗಳೂರು, ಅ.29(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇಂದು ನಡೆದ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ 13ನೇ ಸಭೆಯಲ್ಲಿ ಒಟ್ಟು 34 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಯಿತು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ 13ನೇ ಸಭೆ ನಡೆಯಿತು.

ಕಾಗಿನೆಲೆಯಲ್ಲಿ ಪ್ರತಿ ವರ್ಷ ಕನಕ ಉತ್ಸವ ಆಚರಿಸಲು ಕ್ರಮ ಕೈಗೊಳ್ಳಲಾಗುವುದು. ಉತ್ಸವ ವೇಳೆ ಜಿಲ್ಲೆಯ ದಾರ್ಶನಿಕರ ಜೀವನಾದರ್ಶ ಪ್ರತಿಬಿಂಬಿಸುವ ಕಾರ್ಯಕ್ರಮ ಆಯೋಜಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನಕ ಅಧ್ಯಯನ ಪೀಠ ಸಮನ್ವಯದಿಂದ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸಬೇಕು. ಪ್ರಾಧಿಕಾರದಲ್ಲಿ ಸಂಚಿತ ನಿಧಿ ಸ್ಥಾಪಿಸಿ ನಿರಂತರವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳಬೇಕು. ಪ್ರಾಧಿಕಾರದ ಆದಾಯ ಹೆಚ್ಚಳಕ್ಕೆ ಯೋಜನೆಗಳನ್ನು ರೂಪಿಸಬೇಕು.

ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಕನಕದಾಸರ ಕರ್ಮ ಭೂಮಿ ಕಾಗಿನೆಲೆ ಮತ್ತು ಜನ್ಮಭೂಮಿ ಬಾಡ ಗ್ರಾಮ ಹಾಗೂ ಸುತ್ತಮುತ್ತಲಿನ ಪರಂಪರೆಯ ತಾಣಗಳನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಗೊಳಿಸುವ ವಿವಿಧ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಸಲ್ಲಿಸಲಾಯಿತು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಲಾಭವನ ನಿರ್ಮಾಣ, ಕನಕ ವಸ್ತು ಸಂಗ್ರಹಾಲಯದಲ್ಲಿ ಒಳವಸ್ತು ಶಿಲ್ಪ ಸಂಗ್ರಹಾಲಯ ನಿರ್ಮಾಣ, ಚೆನ್ನಕೇಶವ ದೇವಾಲಯ, ಮೆಟ್ಟಿಲು, ಗೋಪುರ, ಕಮಾನುಗಳ ನಿರ್ಮಾಣ, ಕದರಮಂಡಲಗಿ ವೆಂಕಟೇಶ್ವರ ದೇವಸ್ಥಾನ, ಸಮುದಾಯ ಭವನ ನಿರ್ಮಾಣಕ್ಕೆ ತೀರ್ಮಾನಿಸಲಾಯಿತು. ಪ್ರಾಧಿಕಾರ ವ್ಯಾಪ್ತಿಯ ಉದ್ಯಾನಗಳ ವಾರ್ಷಿಕ ನಿರ್ವಹಣೆ ಗುತ್ತಿಗೆ ನೀಡುವ ಹಾಗೂ ಕನಕ ಪರಿಸರ ಉದ್ಯಾನದ ಖಾಲಿ ಜಾಗದಲ್ಲಿ ಬಟಾನಿಕಲ್ ಗಾರ್ಡನ್ ನಿರ್ಮಿಸಲು ನಿರ್ಧರಿಸಲಾಯಿತು.

ಕಾಗಿನೆಲೆ ಗ್ರಾಮ ವ್ಯಾಪ್ತಿಯಲ್ಲಿ ಇತರೆ ಅಭಿವೃದ್ಧಿ ಕಾಮಗಾರಿಗಳ ಶೀಘ್ರ ಆರಂಭ ಕುರಿತು ಚರ್ಚಿಸಲಾಯಿತು.

ರಾಜ್ಯದಲ್ಲಿ ಮಹಿಳೆಯರು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಆತಂಕಕಾರಿ ಮಟ್ಟಕ್ಕೆ

● ಬಿಜೆಪಿ ರಾಜ್ಯ ಮಹಿಳಾ ವಕ್ತಾರೆ ಕುಮಾರಿ ಸುರಭಿ ಆರೋಪ ● ದಸರಾ ವೇಳೆ ಅತ್ಯಾಚಾರ, ಹತ್ಯೆಗೀಡಾದ ಬಾಲಕಿಗೆ ಪರಿಹಾರ ನೀಡಿದ ಮಾಹಿತಿಯೇ ಇಲ್ಲ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಜ್ಯ ಮಹಿಳಾ ವಕ್ತಾರರಾದ ಕುಮಾರಿ ಸುರಭಿ ಸುದ್ದಿಗೋಷ್ಠಿ ನಡೆಸಿದರು.

ಮೈಸೂರು, ಅ.29(ಎಂಕೆ)– ರಾಜ್ಯದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿದ್ದು, ಭಯದ ವಾತಾವರಣ ನಿರ್ಮಾಣವಾಗಿದೆ. ಮಹಿಳೆಯರು ಮತ್ತು ಮಕ್ಕಳ ಕಷ್ಟಕ್ಕೆ ನೆರವಾಗಬೇಕಾದ ಮಹಿಳಾ ಆಯೋಗ ಮತ್ತು ಆಯೋಗದ ಅಧ್ಯಕ್ಷರು ಕಣ್ಮರೆಯಾಗಿದ್ದಾರೆ ಎಂದು ಬಿಜೆಪಿ ರಾಜ್ಯ ಮಹಿಳಾ ವಕ್ತಾರರಾದ ಕುಮಾರಿ ಸುರಭಿ ದೂರಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು, ನಾಡಹಬ್ಬ ದಸರಾ ಸಂದರ್ಭದಲ್ಲಿ ಅಪ್ರಾಪ್ತ ಬಾಲಕಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ನಡೆದು ತಿಂಗಳಾದರೂ ಬಾಲಕಿಯ ಕುಟುಂಬಕ್ಕೆ ಪರಿಹಾರ ನೀಡಲಾಗಿದೆಯೇ ಎಂಬ ಯಾವ ಮಾಹಿತಿಯೂ ಇಲ್ಲ. ಕನಿಷ್ಟ ಪಕ್ಷ ಅವರನ್ನು ಭೇಟಿ ಮಾಡಿ ಸಾಂತ್ವನ ಹೇಳುವ ಕನಿಷ್ಟ ಕಾಳಜಿಯೂ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಇಲ್ಲವಾಗಿದೆ ಎಂದರು.

ಕಾನೂನು ವಿಚಾರಣೆ ನೆಪದಲ್ಲಿ ಬಡ ಕುಟುಂಬವನ್ನು ಆಗಾಗ ಮೈಸೂರಿಗೆ ಬರುವಂತೆ ಸೂಚಿಸುವ ಬದಲು ಕಲುಬುರ್ಗಿಯಲ್ಲಿಯೇ ವಿಚಾರಣೆ ನಡೆಸುವಂತಾಗಬೇಕು ಎಂದು ಒತ್ತಾಯಿಸಿದ ಅವರು, ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಕಾಲ್ಪನಿಕ ಹತ್ಯೆ ಕಥೆಗೆ ಎಸ್‌ಐಟಿ ರಚನೆ ಮಾಡಿ ಎಂದು ಸರ್ಕಾರಕ್ಕೆ ಒತ್ತಡ ಏರಿದ್ದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು, ತಮ್ಮ ಕಣ್ಣ ಮುಂದೆಯೇ ಇಂತಹ ದುರ್ಘಟನೆ ನಡೆದರೂ ಸುಮ್ಮನಿರುವುದೇಕೆ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ನೊಂದವರಿಗೆ ಸರ್ಕಾರಕ್ಕಿಂತಲೂ ಮುನ್ನವೇ ವಿರೋಧ ಪಕ್ಷ ಸ್ಪಂದಿಸುತ್ತಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೇರೆ ಎಲ್ಲಾ ವಿಚಾರಗಳ ಬಗ್ಗೆಯೂ ಮಾತನಾಡಲು ಸಮಯವಿದೆ. ಆದರೆ, ತಮ್ಮದೇ ಊರಿನ ಬಡ ಕುಟುಂಬದ ಹೆಣ್ಣು ಮಗುವಿನ ಮೇಲೆ ನಡೆದ ದೌರ್ಜನ್ಯದ ಬಗ್ಗೆ ಅವರಿಗೆ ಅರಿವಿಲ್ಲ. ಕನಿಷ್ಠ ಪಕ್ಷ ಅವರನ್ನು ಭೇಟಿಯಾಗಿ ಸಾಂತ್ವನ ಹೇಳುವ ಸೌಜನ್ಯವೂ ಅವರಲ್ಲಿ ಇಲ್ಲವಾಗಿದೆ. ಕಳೆದೊಂದು ತಿಂಗಳಿಂದ ರಾಜ್ಯದ ಹಲವೆಡೆ ಮಹಿಳೆಯರು ಮತ್ತು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಸಂಬಂಧ ಬಿಜೆಪಿ ರಾಜ್ಯವ್ಯಾಪ್ತಿ ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ರೇಣುಕಾರಾಧ್ಯ, ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್, ಕಾರ್ತಿಕ್ ಮರಿಯಪ್ಪ ಉಪಸ್ಥಿತರಿದ್ದರು.

ಹಾಲಿ 984 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮಕ್ಕೆ ಅನುಮತಿ

ಮೈಸೂರು, ಅ.29 (ಎಸ್‌ಪಿಎನ್)– 2025–26ನೇ ಸಾಲಿನಲ್ಲಿ ಒಟ್ಟು 984 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ಪ್ರಸ್ತುತ ಇರುವ ಕನ್ನಡ ಅಥವಾ ಇತರೆ ಮಾಧ್ಯಮದ ಜೊತೆಗೆ ಹೊಸದಾಗಿ ಆಂಗ್ಲ ಮಾಧ್ಯಮ(ದ್ವಿಭಾಷಾ ಮಾಧ್ಯಮ) ತರಗತಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಾರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಸರ್ಕಾರದ ನಿರ್ಧಾರಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೂಡಲೇ ನಿಯಮಾನುಸಾರ ಅಗತ್ಯ ಕ್ರಮಗಳನ್ನು ವಹಿಸುವಂತೆ ಹಾಗೂ ಶಾಲೆಗಳಲ್ಲಿ ಇಎಂಟಿಐಪಿ ತರಬೇತಿ ಪಡೆದ ಶಿಕ್ಷಕರು ಲಭ್ಯವಿದ್ದಲ್ಲಿ ಸದರಿ ಶಿಕ್ಷಕರೇ ಆಂಗ್ಲ ಮಾಧ್ಯಮ ಬೋಧಿಸಲು ಕ್ರಮ ವಹಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ.

ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆ



ಪುನೀತ್ ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಸಂದೀಪ್ ಸ್ನೇಹ ಬಳಗದ ವತಿಯಿಂದ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರದ ಮುಂದೆ ಮೇಣದಬತ್ತಿ ಬೆಳಗಿಸಿ ನಮನ ಸಲ್ಲಿಸಲಾಯಿತು. ಈ ವೇಳೆ ಅಭಿಮಾನಿಗಳಾದ ಸಿ. ಸಂದೀಪ್, ಅಂಬಳೆ ಶಿವಣ್ಣ, ಮಹೇಶ್, ಮರಿಸ್ವಾಮಿ, ಬಸವಣ್ಣ, ಪುರುಷೋತ್ತಮ್, ಬಸವರಾಜ್, ಲಕ್ಷ್ಮಣ್, ಮಹದೇವಪ್ಪ, ನಿರಂಜನ್, ವಿವೇಕ್, ಮಧು, ನಾಗರಾಜು, ರಾಜೇಂದ್ರ, ಸುರೇಶ್, ಸಂತೋಷ್, ನಾರಾಯಣಪ್ಪ, ಧನುಷ್, ಸುರೇಂದ್ರ, ಮಂಜು, ಪ್ರಣವ್, ಅಭಿನವ್ ಮತ್ತಿತರರಿದ್ದರು.

ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ನಟ ಜಯಪ್ರಕಾಶ್ (ಜೆಪಿ) ಹುಟ್ಟುಹಬ್ಬ

ಮೈಸೂರು, ಅ. 29– ಮೈಸೂರಿನ ವಿವಿದೆಡೆ ಅನ್ನಸಂತರ್ಪಣೆ ವಿಶೇಷಚೇತನರಿಗೆ ಹಣ್ಣು–ಹಂಪಲು ವಿತರಣೆ ಮುಂತಾದ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಬಿಜೆಪಿ ಮುಖಂಡರೂ ಆದ ಚಲನಚಿತ್ರ ನಟ ಎಸ್. ಜಯಪ್ರಕಾಶ್ (ಜೆಪಿ) ಅವರ ಹುಟ್ಟುಹಬ್ಬವನ್ನು ಮಂಗಳವಾರ ಅಭಿಮಾನಿಗಳು ಆಚರಿಸಿದರು.

ಅಭಿಮಾನಿಗಳೊಂದಿಗೆ ಜೆಪಿಯವರು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಸೇವಾ ಕಾರ್ಯಗಳನ್ನು ಆರಂಭಿಸಿದರು. ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ಮತ್ತು ಚಾಮುಂಡಿಬೆಟ್ಟದ ತಾಯಿ ಚಾಮುಂಡೇಶ್ವರಿಗೆ ಜಯಪ್ರಕಾಶ್ ಪೂಜೆ ಸಲ್ಲಿಸಿದರು.



ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಹಾಗೂ ಖ್ಯಾತ ಚಿತ್ರನಟ ಜಯಪ್ರಕಾಶ್ (ಜೆಪಿ) ಅವರ ಹುಟ್ಟುಹಬ್ಬವನ್ನು ನಾನಾ ಸಮಾಜ ಸೇವಾಕಾರ್ಯದ ಮೂಲಕ ಹಾಗೂ ಹೊಸ ಚಿತ್ರಕ್ಕೆ ಚಾಲನೆ ನೀಡುವುದರೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು. ಇದೇ ವೇಳೆ ಅಭಿಮಾನಿಗಳು ಜೆಪಿ ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಜಯಪ್ರಕಾಶ್ ಅವರನ್ನು ಮೆರವಣಿಗೆ ಮೂಲಕ ಅಭಿಮಾನಿಗಳು ಕರೆದೊಯ್ದಿದ್ದು, ಜೆಪಿಯವರು ವರನಟ ಡಾ. ರಾಜ್‌ಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಿಕೊಂಡರು. ಬೃಂದಾವನ ಬಡಾವಣೆಯಲ್ಲಿರುವ ಚಾಮುಂಡಿ ಚಿಲ್ಡ್ರನ್ಸ್ ಹೋಮ್‌ನ ವಿಶೇಷಚೇತನ ಮಕ್ಕಳಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಬಾಪೂಜಿ ಆನಂದ ಆಶ್ರಮದ ವಯೋವೃದ್ಧರಿಗೆ ಹಾಗೂ ಹೆಬ್ಬಾಳ್‌ನ ಚಿಗುರು ಸಂಸ್ಥೆಯ ವಿಶೇಷಚೇತನರಿಗೆ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿತ್ತು. ಇದೇ ವೇಳೆ ಮಾತನಾಡಿದ ಜೆಪಿ, ತಮ್ಮ ನಟನೆಯ 'ಭಗೀರಥ' ಚಿತ್ರವು ಪ್ರೇಕ್ಷಕರ ಬೆಂಬಲ ದಿಂದ 100 ದಿನಕ್ಕೂ ಹೆಚ್ಚು ದಿನ ಭರ್ಜರಿ ಪ್ರದರ್ಶನ ಕಂಡಿದ್ದು, ಈಗಾಗಲೇ ತಾವು 105 ಕಥೆಗಳನ್ನು ಕೇಳಿ, ಅದರಲ್ಲಿ ಎರಡನ್ನು ಆಯ್ಕೆ ಮಾಡಿರುವುದಾಗಿ ಹೇಳಿದರಲ್ಲದೇ, ಈಗಾಗಲೇ ಚಿತ್ರೀಕರಣ ಪೂರ್ಣಗೊಂಡಿರುವ 'ದಿಗ್ದರ್ಶಕ' ಚಿತ್ರ ಡಿಸೆಂಬರ್‌ನಲ್ಲಿ ಬಿಡುಗಡೆಯಾಗಲಿದೆ. 'ಭಾಗ್ಯವಂತ' ಚಿತ್ರಕ್ಕೆ ನವೆಂಬರ್ 1ರಂದು ಮುಹೂರ್ತ ನಿಗದಿಯಾಗಿದೆ ಎಂದರು.

ಡಿಸೆಂಬರ್‌ನಲ್ಲಿ ಬಿಡುಗಡೆಯಾಗಲಿರುವ 'ದಿಗ್ದರ್ಶಕ' ಚಿತ್ರಕ್ಕೂ ಬೆಂಬಲ ನೀಡುವಂತೆ ಸಿನಿರಸಿಕರಲ್ಲಿ ಮನವಿ ಮಾಡಿದರು. ಅಂದು ಸಂಜೆ ಬೆಂಗಳೂರಿಗೆ ತೆರಳಿದ ಜಯಪ್ರಕಾಶ್, ಗಾಳಿ ಆಂಜನೇಯಸ್ವಾಮಿ ದೇವಸ್ಥಾನ ಮತ್ತು ಚಾಮರಾಜಪೇಟೆಯ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ತೇಜಸ್, ಲೋಕೇಶ್‌ಗೌಡ, ಸಿಂಧುವಳ್ಳಿ ಶಿವಕುಮಾರ್, ಕೃಷ್ಣಪ್ಪ, ಮಹದೇವಸ್ವಾಮಿ, ರಘು ಅರಸ್, ಅಶೋಕ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ರಾಮು : ಇವತ್ತು ನನ್ನ ಗರ್ಲ್‌ಫ್ರೆಂಡ್ ಬರ್ತ್‌ಡೇ. ಅವಳಿಗೆ ಏನು ಕೊಡ್ಲಿ?
ಶಾಮು : ನೋಡೋಕೆ ಹೇಗಿದ್ದಾಳೆ?
ರಾಮು : ತುಂಬಾ ಚೆನ್ನಾಗಿದ್ದಾಳೆ!
ಶಾಮು : ಹಾಗಿದ್ರೆ ನನ್ ನಂಬರ್ ಕೊಡು!!

ಮೈಸೂರು ಮಿತ್ರ

ಗುರುವಾರ, 30 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಜಗತ್ತು ಎಷ್ಟೇ ತಂತ್ರಜ್ಞಾನ ಹೊಂದಿದ್ದರೂ ಅನ್ನವನ್ನು ಆನ್‌ಲೈನ್‌ನಲ್ಲಿ ಬೆಳೆಯಲಾಗುವುದಿಲ್ಲ. ರೈತರ ಬೆವರಿನಿಂದ ಮಾತ್ರ ಸಾಧ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿ ಇದ್ದವನಲ್ಲಿ ಶ್ರದ್ಧೆ, ನಿದ್ದೆ ಬಾರದವನಲ್ಲಿ ವಿದ್ಯೆ.

ನಿಮ್ಮ ಪತ್ರಗಳು

ಸರ್ಕಾರಿ ನೌಕರರಿಗೆ ಜಿಲ್ಲಾ ಮಟ್ಟದ ರಾಜ್ಯೋತ್ಸವ ಸನ್ಮಾನ ಮಾಡಬಾರದೆಂದು ಹಕ್ಕೊತ್ತಾಯ

ಮಾನ್ಯರೆ,

ಮೈಸೂರು ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂಪ್ರದಾಯದಂತೆ ಪ್ರತಿ ರಾಜ್ಯೋತ್ಸವದ ಅಂಗವಾಗಿ ಜಿಲ್ಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸುವುದು ಸ್ವಾಗತಾರ್ಹ. ಆದರೆ ಇದಕ್ಕೊಂದು ಸಂಖ್ಯೆಯ ಮಿತಿ ಇರಲಿ. 20ರಿಂದ 25 ಸೀಮಿತ ಮಾಡಿದರೆ ಅದಕ್ಕೆ ಗೌರವ, ತೂಕ ಇರುತ್ತದೆ. ಇದರ ಜೊತೆ ಪ್ರತಿ ತಾಲೂಕಿಗೆ ಪ್ರಾಶಸ್ತ್ಯ ನೀಡಬೇಕು. ಈ ಬಾರಿ ನೂರಾರು ಸಂಖ್ಯೆಯಲ್ಲಿ ಅರ್ಜಿ ಬಂದಿವೆ. ಆದರೆ ನಿಜವಾಗಿಯೂ ಸಾಧನೆ ಮಾಡಿದವರು ಅರ್ಜಿ ಹಾಕಿರುವುದಿಲ್ಲ. ಅವರನ್ನು ಜಿಲ್ಲಾಡಳಿತ ಸನ್ಮಾನಿಸಬೇಕು. ಪ್ರತಿ ಬಾರಿ ಅಪರ ಜಿಲ್ಲಾಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯಲ್ಲಿ ನಿರ್ಧಾರವಾಗಿ ಅಂತಿಮ ಹಂತಕ್ಕೆ ತಲುಪಿದರೂ ರಾಜಕೀಯ ಪ್ರೇರಿತ ಶಕ್ತಿಗಳು ಹಿಂದಿನಿಂದ ಉಸ್ತುವಾರಿ ಸಚಿವರ ಹಾಗೂ ಆಡಳಿತ ಪಕ್ಷದ ಶಾಸಕರ ದುಂಬಾಲು ಹೆಸರು ಸೇರಿಸುವುದು ನಿಜಕ್ಕೂ ಆಯ್ಕೆಯಾದ ಸಾಧಕರಿಗೆ ಮಾಡಿದ ಅವಮಾನ. ಇಂತಹ ವಿಷಯಕ್ಕೆ ಶಾಸಕರು ಹಸ್ತಕ್ಷೇಪ ಮಾಡಿ ಅಧಿಕಾರಿಗಳ ಮೇಲೆ ಒತ್ತಡ ತರಬಾರದು. ಸಮಿತಿಯ ಕೆಲವರು ಹಲವು ವರ್ಷಗಳಿಂದ ಸರ್ಕಾರಿ ನೌಕರರಿಗೆ ಈ ಸನ್ಮಾನ ಮಾಡಿಸಿದ್ದು ಗಮನಕ್ಕೆ ಬಂದಿದೆ. ಇದು ಅವೈಜ್ಞಾನಿಕ. ಸರ್ಕಾರಿ ನೌಕರರು ಸಂಬಳಕ್ಕೆ ಕೆಲಸ ಮಾಡುತ್ತಿರುತ್ತಾರೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಎಂಬುದು ಕರ್ನಾಟಕ ರಾಜ್ಯ ಸರ್ಕಾರದ ಅತ್ಯುತ್ತಮ ಕೆಲಸ ಮಾಡಿದ ಸರ್ಕಾರಿ ನೌಕರರಿಗೆ ನೀಡುವ ಪ್ರಶಸ್ತಿ. ಈ ಪ್ರಶಸ್ತಿಯನ್ನು ಜಿಲ್ಲಾ ಮಟ್ಟ, ಇಲಾಖಾ ಮಟ್ಟ ಮತ್ತು ರಾಜ್ಯ ಮಟ್ಟ ಎಂದು ಮೂರು ಹಂತಗಳಲ್ಲಿ ನೀಡಲಾಗುತ್ತದೆ. ಆದ್ದರಿಂದ ಇಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರ ಅವಕಾಶ ಕಿತ್ತುಕೊಂಡಾಗುತ್ತದೆ. ಆದ್ದರಿಂದ ಈ ಭಾರಿ ಜಿಲ್ಲಾಡಳಿತ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ರಾಜ್ಯೋತ್ಸವ ಸನ್ಮಾನಕ್ಕೆ ಸಾಧಕರನ್ನು ಆಯ್ಕೆ ಮಾಡಬೇಕೆಂದು ಈ ಮೂಲಕ ಮನವಿ.

–ಅರವಿಂದ್ ಶರ್ಮ, ಸಾಮಾಜಿಕ ಚಳವಳಿಗಾರರು, ಮೈಸೂರು.

ದೇವರ ನಾಡಿನ ಸಾಧನೆ!

ಮಾನ್ಯರೆ,

ದೇವರ ನಾಡೆಂದೇ ಕರೆಯಲ್ಪಡುವ ಕೇರಳ ರಾಜ್ಯ ದೇಶದ ಪ್ರಪ್ರಥಮ ಕಡು ಬಡತನ ಮುಕ್ತ ರಾಜ್ಯವಾಗಿ ಹೊರಹೊಮ್ಮಲಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಈ ಕುರಿತು ಕೇರಳ ರಾಜ್ಯ ಸಂಸ್ಥಾಪನಾ ದಿನವಾದ ನವೆಂಬರ್ 1 ರಂದು ಅಧಿಕೃತ ಘೋಷಣೆ ಹೊರ ಬೀಳಲಿದೆ ಎಂದು ವಾರ್ತಾ ಸಂಸ್ಥೆಗಳು ವರದಿ ಮಾಡಿವೆ.

ದೇಶದ ಮೊದಲ ಸಾಕ್ಷರ ರಾಜ್ಯ ಎಂಬ ಕೀರ್ತಿಗೆ ಈಗಾಗಲೇ ಪಾತ್ರವಾಗಿರುವ ಕೇರಳದಲ್ಲಿ ಎಡ ಪ್ರಜಾತ್ಮಕ ಮೈತ್ರಿಕೂಟದ (ಎಲ್‌ಡಿಎಫ್) ಸರ್ಕಾರವಿದೆ. ವಿಶ್ವಸಂಸ್ಥೆ ಮತ್ತು ಭಾರತ ಸರ್ಕಾರದ ಅಂಕಿ ಅಂಶಗಳ ಪ್ರಕಾರ, ದೈನಂದಿನ ರೂ.190ಕ್ಕಿಂತ ಕಡಿಮೆ ಆದಾಯದ ಕುಟುಂಬಗಳನ್ನು ಕಡು ಬಡತನದ ಕುಟುಂಬ ಎಂದು ಕರೆಯಲಾಗುತ್ತದೆ. ಸರ್ಕಾರಿ ಮೂಲಗಳ ಪ್ರಕಾರ, ಕೇರಳ ರಾಜ್ಯದಲ್ಲಿ 2021 ರಲ್ಲಿ 64,000 ಕಡು ಬಡವ ಕುಟುಂಬಗಳು ಇದ್ದು, ರಾಜ್ಯ ಸರ್ಕಾರ ಇಂತಹ ಕುಟುಂಬಗಳನ್ನು ಮೇಲೆತ್ತಲು ಪಡಿತರ ಕಾರ್ಡ್, ಆಧಾರ್ ಕಾರ್ಡ್, ಮಾಸಿಕ ಪಿಂಚಣಿ ಸೇರಿದಂತೆ ಹಲವಾರು ಅಭಿವೃದ್ಧಿಪರ ಕಾರ್ಯಕ್ರಮಗಳ ಮೂಲಕ ಕಡುಬಡತನದ ರೇಖೆಯಿಂದ ಹೊರತರುವ ಮೂಲಕ ಕೇರಳ ದೇಶದ ಮೊದಲ ಕಡು ಬಡತನ ಮುಕ್ತ ರಾಜ್ಯವಾಗಿ ಹೊರಬರಲು ಸಾಧ್ಯವಾಗಿದೆ. ಇದಕ್ಕಾಗಿ ಅಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಭಿನಂದನಾರ್ಹರು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಎಸ್‌ಯುಪಿಡಬ್ಲ್ಯೂ, ಕ್ರೀಡಾ ಚಟುವಟಿಕೆ ಕಡ್ಡಾಯವಾಗಲಿ


ಮಾನ್ಯರೆ,

ಇಂದಿನ ಅನೇಕ ಶಾಲೆಗಳು ಶಿಕ್ಷಣದ ನಿಜವಾದ ಅರ್ಥವನ್ನು ಸಂಪೂರ್ಣ ಮರೆತಿವೆ. ಎಸ್.ಯು.ಪಿ. ಡಬ್ಲ್ಯೂ (ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಕಾರ್ಯ) ಮತ್ತು ಕ್ರೀಡಾ ಚಟುವಟಿಕೆಗಳು ಪಠ್ಯಕ್ರಮದ ಅವಿಭಾಜ್ಯ ಭಾಗವಾಗಿದ್ದರೂ, ಬಹುತೇಕ ಶಾಲೆಗಳು ಇವುಗಳನ್ನು ಕೇವಲ ಔಪಚಾರಿಕದಂತೆ ನೋಡುತ್ತಿವೆ ಎಂಬ ವರದಿ ನೋವುಂಟು ಮಾಡುತ್ತದೆ. ಇದು ಶಿಕ್ಷಣದ ಮೇಲೆ ಉಂಟಾಗುತ್ತಿರುವ ಅತ್ಯಂತ ವಿಷಾದನೀಯ ಮತ್ತು ನಿರ್ಲಜ್ಜ ಧೋರಣೆ. ಮಕ್ಕಳಿಗೆ ಕೇವಲ ಪುಸ್ತಕದ ಜ್ಞಾನ ತುಂಬಿ ಪರೀಕ್ಷಾ ಅಂಕಗಳ ಹಿಂದೆ ಓಡಿಸುವುದು ಯಾವ ಶಿಕ್ಷಣವೂ ಅಲ್ಲ. ಎಸ್.ಯು.ಪಿ. ಡಬ್ಲ್ಯೂ ಮೂಲಕ ಮಕ್ಕಳಲ್ಲಿ ಶ್ರಮದ ಘನತೆ, ಕೌಶಲ್ಯ ಮತ್ತು ಸ್ವಾವಲಂಬನೆ ಬೆಳೆಸಬೇಕು. ಆದರೆ ಇಂದು ಅನೇಕ ಶಾಲೆಗಳು ಈ ಚಟುವಟಿಕೆಗಳನ್ನು ನಿರ್ಲಕ್ಷ್ಯ ಮಾಡುವ ಮೂಲಕ ವಿದ್ಯಾರ್ಥಿಗಳನ್ನು ಯಾಂತ್ರಿಕವಾಗಿ ರೂಪಿಸುತ್ತಿವೆ. ಇಂತಹ ಶಾಲೆಗಳ ನಿರ್ವಹಣಾ ಮಂಡಳಿಗೆ ನಿಜವಾದ ಶಿಕ್ಷಣದ ಅರ್ಥವೇ ಗೊತ್ತಿಲ್ಲ ಎಂಬುದೇ ಸ್ಪಷ್ಟವಾಗುತ್ತದೆ.

ಕ್ರೀಡೆಗಳ ವಿಷಯದಲ್ಲೂ ಇದೇ ಪರಿಸ್ಥಿತಿ. ಮಕ್ಕಳಿಗೆ ದಿನವೂ ಕನಿಷ್ಠ ಅರ್ಧಗಂಟೆ ಆಟದ ಸಮಯ ನೀಡಲು ಕೂಡ ಶಾಲೆಗಳು ಮುಂದೆ ಬರುತ್ತಿಲ್ಲ. ಪಾಠದ ಒತ್ತಡದಲ್ಲಿ ಮಕ್ಕಳು ಉಸಿರಾಡಲಾಗದ ಸ್ಥಿತಿಗೆ ತಲುಪಿದ್ದಾರೆ. ಇಂತಹ ಶಿಕ್ಷಣದಿಂದ ಆರೋಗ್ಯವೂ ಹಾಳು, ಉತ್ಸಾಹವೂ ನಾಶ! ಶಿಕ್ಷಣ ಇಲಾಖೆ ಇಂತಹ ಶಾಲೆಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು. ಎಸ್.ಯು.ಪಿ. ಡಬ್ಲ್ಯೂ ಮತ್ತು ಕ್ರೀಡಾ ಚಟುವಟಿಕೆಗಳನ್ನು ಕಡ್ಡಾಯಗೊಳಿಸುವ ಕಾನೂನು ತರಬೇಕು. ಇಲ್ಲವಾದರೆ ಮುಂದಿನ ಪೀಳಿಗೆಯ ದೈಹಿಕ ಹಾಗೂ ಮಾನಸಿಕ ಸ್ಥಿತಿ ಗಂಭೀರವಾಗುತ್ತದೆ. ನಿಜವಾದ ಶಿಕ್ಷಣ ಎಂದರೆ ಜೀವನಕ್ಕೆ ತಯಾರಿ ಪರೀಕ್ಷೆಗಲ್ಲ. ಇದನ್ನು ಮರೆಯುತ್ತಿರುವ ಶಾಲೆಗಳ ವಿರುದ್ಧ ಕಠಿಣ ಕ್ರಮ ಅಗತ್ಯ.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಗ್ಯಾಸ್ ಬಾಯ್‌ಗಳ ಹಗಲು ದರೋಡೆ



ಮಾನ್ಯರೆ,

ಗ್ಯಾಸ್ ಸಿಲಿಂಡರ್ ವಿತರಿಸುವ ಹೊಣೆ ಹೊತ್ತ ಏಜನ್ಸಿಗಳು ಕಂಪ್ಯೂಟರ್ ಬಿಲ್‌ನಂತೆ ಹಣ ಪಡೆಯಬೇಕು. ಬಿಲ್‌ನಂತೆ ಹಣ ನೀಡುವುದು ಗ್ರಾಹಕರ ಹೊಣೆ. ಆದರೆ ಬಿಲ್ 857.50 ಇದ್ದರೆ ಮನೆಗೆ ಬರುವ ವ್ಯಕ್ತಿಗಳು 910 ಗಳನ್ನು ಒತ್ತಾಯ ಪೂರ್ವಕವಾಗಿ, ಕೆಲವೊಮ್ಮೆ ಬೆದರಿಸಿ ವಸೂಲಿ ಮಾಡುತ್ತಿದ್ದಾರೆ. ಮೊದಲೇ ಬೆಲೆ ಏರಿಕೆಯ ಹೊಡೆತ. ಈ ರೀತಿ ರೂ.52.50 ಹೆಚ್ಚುವರಿಯಾಗಿ ಪಡೆದು ಸುಲಿಗೆ ಮಾಡುತ್ತಿರುವುದು ಹಗಲು ದರೋಡೆ ಅಲ್ಲವೇ? ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಗ್ಯಾಸ್ ಡೆಲಿವರಿ ಮಾಡುವ ವ್ಯಕ್ತಿಗಳ ಮೇಲೆ ಹಿಡಿತ ಇಲ್ಲವೇ? ಗ್ಯಾಸ್ ವಿತರಕರು ಯಾಕೆ ಸುಮ್ಮನಿದ್ದಾರೆ?

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ನಾಡಿನಾದ್ಯಂತ ನೆಲೆ ನಿಂತಾಳೇ ಕನ್ನಡದ ಕುಲದೇವಿ

ಭುವನೇಶ್ವರಿಯ ನೆನೆ ಮಾನಸವೇ
ಭವಬಂಧನಗಳ ಭೀತಿಯ ಬಿಡುವೆ

ಈ ಹಾಡನ್ನು ಎಲ್ಲರೂ ಎಸ್ ಜಾನಕಿ ಅವರ ಮಧುರ ಸ್ವರದಲ್ಲಿ ಕೇಳಿಯೇ ಇರುತ್ತೀರಿ.

ಈ ವರ್ಷದ ಆರಂಭದಲ್ಲಿ ಅಂದರೆ ಜನವರಿ 27ಕ್ಕೆ ವಿಧಾನ ಸೌಧದ ಪಶ್ಚಿಮದ್ವಾರದ ಬಳಿ ಭುವನೇಶ್ವರಿಯ ಭವ್ಯ ಪ್ರತಿಮೆ ಅನಾವರಣವಾಯಿತು. ಈ ಪ್ರತಿಮೆ ತನಗೆ ತಾನೇ ಸಾಟಿ. ಪ್ರಪಂಚದಲ್ಲಿಯೇ ಇಷ್ಟು ಭವ್ಯವಾದ ಭುವನೇಶ್ವರಿಯ ಪ್ರತಿಮೆ ಮತ್ತೊಂದಿಲ್ಲ. ಕಂಚಿನ ಈ ಪ್ರತಿಮೆ 43 ಅಡಿ ಎತ್ತರವಿದ್ದು 31.50 ಟನ್ ತೂಕವಿದೆ. 21.24 ಕೋಟಿ ವೆಚ್ಚದಲ್ಲಿ ತಯಾರಾಗಿರುವ ಈ ಪ್ರತಿಮೆ ಪ್ರತಿಷ್ಠಾಪಿಸಿರುವ ಪೀಠ ಹೊಯ್ಸಳ ಶೈಲಿಯಲ್ಲಿದೆ. ಬೊಂಬೆ ಮನೆ ಶ್ರೀಧರಮೂರ್ತಿಯವರ ಕೈಚಳಕದಲ್ಲಿ ಅರಳಿರುವ ಈ ಶಿಲ್ಪ ಮನೋಹರವಾಗಿದೆ. ಸಾಮಾನ್ಯವಾಗಿ ಭುವನೇಶ್ವರಿ ಅಥವಾ ಯಾವುದೇ ದೇವಿಯ ವಿಗ್ರಹಕ್ಕೆ ಚತುರ್ಭುಜವಿರುತ್ತದೆ. ಆದರೆ ನಾಡದೇವಿ ಎಂದು ನಾವೆಲ್ಲರೂ ಶ್ರದ್ಧೆಯಿಂದ ಪ್ರೀತಿಯಿಂದ ಪೂಜಿಸುವ ಈ ಶಿಲ್ಪ ದ್ವಿಭುಜವುಳ್ಳದ್ದು. ಬಲಗೈ ಅಭಯಮುದ್ರೆ ಹೊಂದಿದ್ದರೆ ದೇವಿಯ ಎಡಗೈಲಿ ತಾಳೆಗರಿಯಿದೆ! ಸರ್ವಾಲಂಕಾರಭೂಷಿತೆಯಾಗಿರುವ ಭುವನೇಶ್ವರಿಯ ಬೆನ್ನಿಗೆ ಕರ್ನಾಟಕದ ನಕ್ಷೆಯಿದೆ. ನೋಡುಗರ ಮನದಲ್ಲಿ ಅಭಿಮಾನ ಉಕ್ಕಿಸುವ ಈ ಶಿಲ್ಪ ಕನ್ನಡಿಗರ ಸ್ವಾಭಿಮಾನದ ಸಂಕೇತವೂ ಆಗಿದೆ.

ಹೌದು, ನವೆಂಬರ್ ಬಂತು. ಇದೇ ಶನಿವಾರ ಎಲ್ಲೆಡೆ ಜೈ ಭುವನೇಶ್ವರಿ ಘೋಷ ಮಂತ್ರ ಮೊಳಗಲಿದ್ದು ಭುವನೇಶ್ವರಿ ಮತ್ತೆ ಕನ್ನಡನಾಡಿನ ತುಂಬೆಲ್ಲಾ ರಾರಾಜಿಸಲಿದ್ದಾಳೆ.

ಇದೇ ಹಿನ್ನೆಲೆಯಲ್ಲಿ ನಾವೆಲ್ಲರೂ ಅತೀವ ಪ್ರೀತಿ ಅಕ್ಕರೆಯಿಂದ ನಾಡದೇವಿ, ಕನ್ನಡಮ್ಮ, ಕನ್ನಡತಾಯಿ ಎಂದೆಲ್ಲಾ ಕರೆಯುವ ಭುವನೇಶ್ವರಿಯ ಬಗೆಗೆ ತಿಳಿಯುವ ಕುತೂಹಲವಾಯಿತು.

ಎಂದಿನಿಂದ ಭುವನೇಶ್ವರಿ ಕನ್ನಡಿಗರ ಮಾತೆಯಾದಳು, ಎಲ್ಲಿಂದ ಈ ಪರಿಕಲ್ಪನೆ ಬಂತು, ಯಾರು ಇದರ ಹಿಂದಿರುವವರು!

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಬಂಕಿಮಚಂದ್ರರು ವಂದೇ ಮಾತರಂ, ಗೀತೆಯ ಮೂಲಕ ಭಾರತಮಾತೆಯ ಪರಿಕಲ್ಪನೆಗೆ ಒಂದು ಗಟ್ಟಿ ತಳಹದಿ ಹಾಕಿಕೊಟ್ಟರೆ, ರವೀಂದ್ರರ ಸೋದರ ಅವನೀಂದ್ರನಾಥ ಠಾಕೂರರು ಭಾರತಮಾತೆಯನ್ನು ತಮ್ಮ ಚಿತ್ರದ ಮೂಲಕ ಸಾಕಾರಗೊಳಿಸಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಹೊಸ ಸ್ಫೂರ್ತಿ ತುಂಬಿದರು.

ಅದೇ ರೀತಿಯಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸುವ ಪ್ರಯತ್ನದಲ್ಲಿದ್ದ ಕನ್ನಡಪರ ಏಕೀಕರಣ ಹೋರಾಟಗಾರರಿಗೆ ಒಂದು ಗಟ್ಟಿ ಆಧಾರ ಬೇಕಿತ್ತು ಅವರ ನೈತಿಕ ಸ್ಥೈರ್ಯವನ್ನು ಬಲಪಡಿಸಲು. ಆಗ ಹುಟ್ಟಿಕೊಂಡದ್ದೇ ಭುವನೇಶ್ವರಿಯ ಪರಿಕಲ್ಪನೆ. ಅದರಲ್ಲೂ. ಅಲೂರು ವೆಂಕಟರಾಯರು ತಮ್ಮ ಕೃತಿ ಕರ್ನಾಟಕದ ಗತವೈಭವದ ಮೂಲಕ ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಕೆಲಸ ಮಾಡಿದರು. ತಮ್ಮ ಭಾಷಣಗಳಲ್ಲಿ ವಿಜಯನಗರದ ವೈಭವವನ್ನು ಮತ್ತೆ ಮತ್ತೆ ನೆನಪಿಸುತ್ತಾ ಭುವನೇಶ್ವರಿ ನಾಡದೇವಿ ಎಂಬ ಅಭಿಮಾನವನ್ನು ಹುಟ್ಟಿಸಿದವರು ಅವರೇ. ಹಂಪಿಯನ್ನು ಆಳಿದ ವಿಜಯನಗರದ ದೊರೆಗಳು ತಮ್ಮನ್ನು ತಾವು ಕರ್ನಾಟಕದವರೆಂದು ಕರೆದುಕೊಂಡಿದ್ದರು, ಹಂಪಿಯ ವಿರೂಪಾಕ್ಷ ದೇವಸ್ಥಾನದ ಆವರಣದಲ್ಲಿಯೇ ಭುವನೇಶ್ವರಿಯ ದೇವಾಲಯವೂ ಇದ್ದುದರಿಂದ, ಕನ್ನಡಿಗರು ಆಕೆಯನ್ನೇ ಕನ್ನಡ ನಾಡಿನ ಅಧಿದೇವತೆಯನ್ನಾಗಿ ಆರಿಸಿ ತಮ್ಮ ಮನಮಂದಿರಗಳಲ್ಲಿ ಪ್ರತಿಷ್ಠಾಪಿಸಿಕೊಂಡುಬಿಟ್ಟರು. ಏಕೀಕರಣದ ಶುಭಸಂದರ್ಭದಲ್ಲಿ ದೇವಿಯನ್ನು ಪೂಜಿಸಿದ ಆಲೂರರು ಕನ್ನಡಿಗರ ಪ್ರೀತಿಯ ಕನ್ನಡದ ಕುಲಪುರೋಹಿತರಾಗಿಬಿಟ್ಟರು.

ಕನ್ನಡದ ಈ ಚಳುವಳಿಗೆ ಶಕ್ತಿ ತುಂಬಲು ಏಕೀಕರಣದ ಸಂದರ್ಭದಲ್ಲಿ ಬಿಎಂಶ್ರೀ, ಬೇಂದ್ರೆ, ಕುವೆಂಪು, ಮುದವೀಡು ಕೃಷ್ಣರಾಯರು, ಗೋವಿಂದ ಪೈಗಳು, ಬೆನೆಗಲ್ ರಾಮರಾಯರು, ಶಾಂತಕವಿ ಎಂದೇ ಪ್ರಸಿದ್ಧರಾದ ಬಾಳಾಚಾರ್ಯ ಗೋಪಾಲಾಚಾರ್ಯ ಸಕ್ಕರಿ, ಹ.ಗೋ. ಕಟ್ಟಿ ಅಂದಾನಪ್ಪ ದೊಡ್ಡಮೇಟಿ ಮತ್ತು ಇನ್ನೂ ಮುಂತಾದವರು ವಿವಿಧ ಬಗೆಯಲ್ಲಿ ಕನ್ನಡಾಂಬೆಯನ್ನು ಸ್ತುತಿಸಿ ಕನ್ನಡದ ಶಕ್ತಿಯನ್ನು ಭಾವನಾತ್ಮಕವಾಗಿ, ಆದರೆ ವಾಸ್ತವಿಕ ನೆಲೆಯಲ್ಲಿ ಪ್ರದರ್ಶಿಸಿದರು.

ಪೌರಾಣಿಕವಾಗಿ ಭುವನೇಶ್ವರಿ ಅಷ್ಟಾದಶಪುರಾಣಗಳಲ್ಲಿ ಉಲ್ಲೇಖಗೊಂಡಿದ್ದಾಳೆ. ಅಲ್ಲದೆ ಮುಮ್ಮುಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಶ್ರೀ ತತ್ವನಿಧಿ ಕೃತಿಯಲ್ಲಿ ಭುವನೇಶ್ವರಿಯ ವಿವಿಧ ರೂಪ ಭೇದಗಳನ್ನು ದಾಖಲಿಸಿದ್ದಾರೆ. ಮೈಸೂರು ಅರಮನೆಯ ಆವರಣದಲ್ಲಿ ಭುವನೇಶ್ವರಿಯ ದೇವಾಲಯವಿರುವುದು ನಿಮಗೆಲ್ಲಾ ತಿಳಿದೇ ಇದೆ,

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೋರಿಕೆಯ ಮೇರೆಗೆ ಹರಿಕೇಶ ನಲ್ಲೂರು ಮುತ್ತಯ್ಯ ಭಾಗವತರು ರಚಿಸಿದ 114 ಚಾಮುಂಡಿ ಸ್ತೋತ್ರಗಳಲ್ಲಿ ಲೇಖನದ ಮೊದಲಿಗೆ ನೆನಪಿಸಿದ



> “ ನಮ್ಮನ್ನೆಲ್ಲಾ ಸೃಷ್ಟಿಸಿದವಳು ದೇವಿ, ನಮ್ಮನ್ನು ಪೊರೆಯುತ್ತಿರುವವಳು ದೇವಿ ಎಂದು ಧೃಡವಾಗಿ ನಂಬಿರುವವರು ನಾವು. ಭಾರತಮಾತೆಯ ತನುಜಾತೆಯ ಸಿಂಹಾಸನಾಧೀಶ್ವರಿ ಭುವನೇಶ್ವರಿ ನಮ್ಮೆಲ್ಲರ ಮನದಲ್ಲಿ ನೆಲೆಗೊಂಡು ಕನ್ನಡಪ್ರೀತಿ ಸ್ಥಿರಗೊಳಿಸಲಿ ಎಂದು ಆಶಿಸುತ್ತಾ, ನಿಮಗೆಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತೇನೆ.

ಭುವನೇಶ್ವರಿಯ ನೆನೆ ಮಾನಸವೇ
ಭವಬಂಧನದೊಳ ಭೀತಿಯ ಬಿಡುವೆ
ಕೂಡಾ ಒಂದು!

ಬಿಕೆಎಸ್ ವರ್ಮಾ ಅವರು ರಚಿಸಿರುವ ಭುವನೇಶ್ವರಿ, ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿರುವ ಭುವನೇಶ್ವರಿ ವಿಗ್ರಹಗಳು ನಮಗೆ ಗೊತ್ತು. ಆದರೆ ಕರ್ನಾಟಕದಲ್ಲಿ ಭುವನೇಶ್ವರಿಯನ್ನು ಆರಾಧಿಸುವ ದೇವಸ್ಥಾನಗಳೂ ಸಾಕಷ್ಟಿವೆ.

ನಿಮಗೂ ಕುತೂಹಲ ಅಲ್ಲವೇ?

ಮೈಸೂರು: ಕರ್ನಾಟಕದ ಏಕೀಕರಣಕ್ಕೆ ಮುನ್ನವೇ 1951ರಲ್ಲಿ ಭುವನೇಶ್ವರಿ ದೇವಾಲಯ ಚಾಮರಾಜ ಒಡೆಯರ್‌ರಿಂದ ನಿರ್ಮಿಸಲ್ಪಟ್ಟಿತು. ಅರಮನೆಯ ಉತ್ತರಭಾಗದಲ್ಲಿ ಇರುವ ಈ ದೇವಾಲಯ ದ್ರಾವಿಡ ಶೈಲಿಯಲ್ಲಿದ್ದು, ಚಾಮರಾಜ ಒಡೆಯರ್‌ರ ಗುರುಗಳಾಗಿದ್ದ ಸಿದ್ಧಲಿಂಗ ಸ್ವಾಮಿಗಳು ಇದರ ಶಿಲ್ಪಿ. ಮೈಸೂರಿನಲ್ಲಿ ರಾಜ್ಯೋತ್ಸವ ಕಾರ್ಯಕ್ರಮದ ಮುನ್ನ, ಜಿಲ್ಲಾಧಿಕಾರಿಗಳು ಇಲ್ಲಿಯೇ ಮೊದಲ ಪೂಜೆ ಸಲ್ಲಿಸುವ ಪ್ರತೀತಿ ನಡೆದುಕೊಂಡು ಬಂದಿದೆ. ಶಿಲ್ಪಕಲೆಯ ದೃಷ್ಟಿಯಿಂದಲೂ ಈ ದೇವಸ್ಥಾನ ಅತ್ಯಂತ ಸುಂದರವಾಗಿದೆ.

ಭುವನಗಿರಿ: ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನಲ್ಲಿರುವ ಭುವನಗಿರಿ, ಭುವನೇಶ್ವರಿ ದೇವಾಲಯದಿಂದಲೇ ಪ್ರಸಿದ್ಧಿ ಪಡೆದಿದೆ. ಹೊಯ್ಸಳ ಶೈಲಿಯಲ್ಲಿರುವ ಈ ದೇವಾಲಯವನ್ನು ಬಿಳಗಿಯ ಅರಸರು ಅಭಿವೃದ್ಧಿಪಡಿಸಿದರೆಂದು ನಂಬಿಕೆಯಿದ್ದು, ಅವರ ಸಾಮಂತರೂ ಅಭಿವೃದ್ಧಿ ಪಡಿಸಿರಬಹುದೆಂಬ ಅನುಮಾನವನ್ನೂ ಇತಿಹಾಸಕಾರರು ವ್ಯಕ್ತಪಡಿಸುತ್ತಾರೆ. ಕದಂಬರ ಕಾಲದಿಂದಲೂ ಅಲ್ಲಿ ಪೂಜೆ ನಡೆದಿದೆ ಎಂಬ ನಂಬಿಕೆಯೂ ಇದ್ದು, ಆದರೆ ಅದನ್ನು ನಂಬಲು ಸ್ವಲ್ಪ ಕಷ್ಟ ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಕನ್ನಡ ರಾಜ್ಯೋತ್ಸವದಲ್ಲಿ ಈ ದೇವಾಲಯದಲ್ಲಿ ವಿಜೃಂಭಣೆಯಿಂದ ಉತ್ಸವ ನಡೆಯುತ್ತದೆ.

ಸುರಗಿರಿಯ ಭುವನೇಶ್ವರಿ: ಮೇಲೆ ಹೇಳಿದ ದೇವಾಲಯಗಳಿಗಿಂತ, ಸುರಗಿರಿಯ ದೇವಾಲಯ ಹೊಸತು. ಬಾಗಲಕೋಟೆ ಜಿಲ್ಲೆಯ, ಬೀಳಗಿ ತಾಲೂಕಿನ ಕುಂದರಗಿ ಗ್ರಾಮದಲ್ಲಿರುವ ಈ ದೇವಸ್ಥಾನ 2019ರಲ್ಲಿ ಲೋಕಾರ್ಪಣೆಯಾಗಿದ್ದು ಪ್ರಕೃತಿಯ ಮಡಿಲಿನಲ್ಲಿದೆ. 34 ಇಂಚಿನ ಕೃಷ್ಣಶಿಲೆಯ ಭುವನೇಶ್ವರಿಯ ಶಿಲ್ಪಿ, ಲೋಕಣ್ಣ ಬಡಿಗೇರ.

ಬಾರಕೂರು: ಇತಿಹಾಸ ಪ್ರಸಿದ್ಧ ಬಾರಕೂರಿನ ಪಂಚಲಿಂಗೇಶ್ವರ ದೇವಾಲಯದ ಆವರಣದಲ್ಲಿ ಭುವನೇಶ್ವರಿಯ ದೇವಾಲಯವಿದೆ. ಕರ್ನಾಟಕದಲ್ಲಿ ಮಾತ್ರವಲ್ಲದೆ, ದೇಶದ ಹಲವೆಡೆಯೂ ಭುವನೇಶ್ವರಿಯ ದೇವಾಲಯಗಳಿದ್ದಾವೆ.

- ಅಸ್ಸಾಂನ ಪುರಾಣ ಪ್ರಸಿದ್ಧ ಶಕ್ತಿ ಪೀಠ ಕಾಮಾಖ್ಯ ದೇವಾಲಯದಲ್ಲಿ ಭುವನೇಶ್ವರಿಯ ಪ್ರಾಚೀನ ಗುಡಿಯಿದೆ.
- ತ್ರಿಪುರದ ಉದಯಪುರದಲ್ಲಿ 17ನೇ ಶತಮಾನದಲ್ಲಿ ಗೋವಿಂದ ಮಾಣಿಕ್ಯ ಮಾಹಾರಾಜ್ ನಿರ್ಮಿಸಿದ ದೇವಾಲಯ.
- ಪಶ್ಚಿಮ ಬಂಗಾಳದ ಹೂಗ್ಲಿ ನದಿಯ ದಂಡೆಯ ಚಂದನ ನಗರ.
- ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಬಿಲ್ವಾಡಿಯ ಔದುಂಬರ ಕ್ಷೇತ್ರ
- ಗುಜರಾತ್‌ನ ಗೋದಾಲದಲ್ಲಿ 1948ರಲ್ಲಿ ಬ್ರಹ್ಮಲೀನ ಜಗದ್ಗುರು ಆಚಾರ್ಯ ಶ್ರೀ ಚರಣತೀರ್ಥ ಮಹಾರಾಜ್ ಸ್ಥಾಪಿಸಿದ ದೇವಾಲಯ.
- ಕೇರಳ ರಾಜ್ಯದಲ್ಲಿ ಕಿದಲಂಪರಂಬೋ, ತ್ರಿಶೂರ್, ಬಾಲುಸೆರಿ, ಚೆಂಗನೂರು, ಎರ್ನಾಕುಲಂ, ಮಲ್ಲಪುರಂ, ಪಳನಿ, ಅಲೆಪ್ಪಿ ಗಳಲ್ಲಿ ಭುವನೇಶ್ವರಿ ದೇವಾಲಯಗಳಿವೆ.
- ಆಂಧ್ರಪ್ರದೇಶದಲ್ಲಿ, ಆದಿಲಾಬಾದ್, ಕೋಮಾರ್, ಕೊವ್ವೂರು, ಮದನಪಲ್ಲಿ, ವಿಶಾಖಪಟ್ಟಣಂಗಳಲ್ಲಿ ಭುವನೇಶ್ವರಿ ವಿರಾಜಮಾನಳಾಗಿದ್ದಾಳೆ.
- ತಮಿಳುನಾಡಿನಲ್ಲಿಯೂ 8 ಕಡೆ, ಪುದುಕೋಟ್ಟೈ, ಸೇಲೇ ಯೂರು, ಆಡಂಬಾಕಂ, ಚೆನ್ನೈ, ನೈವೇಲಿ, ಅಂಬತ್ತೂರು ಮತ್ತು ಕೊಯಮತ್ತೂರಿನಲ್ಲಿ ಭವನೇಶ್ವರಿ ಅರ್ಚಿಸಲ್ಪಡುತ್ತಿದ್ದಾಳೆ.

ಇವುಗಳಲ್ಲದೆ, ಇತ್ತೀಚಿಗೆ ರಾಜ್ಯದ ಹಲವೆಡೆ ಭುವನೇಶ್ವರಿಯ ದೇವಾಲಯಗಳು ನಿರ್ಮಾಣಗೊಂಡಿವೆ. ಬೇರೆ ಬೇರೆ ರಾಜ್ಯಗಳಲ್ಲಿ ಇರುವ ಈ ಭುವನೇಶ್ವರಿ ದೇವಿ, ಅಲ್ಲಿ ಕನ್ನಡ ದೇವಿಯಾಗಿಲ್ಲದಿರಬಹುದು, ಆದರೆ ಎಂದೋ ಒಮ್ಮೆ ಆ ಸ್ಥಳಗಳಿಗೆ ಭೇಟಿ ನೀಡಿದಾಗ ನಮ್ಮಲ್ಲಿರುವ ಕನ್ನಡತನ ಜಾಗೃತವಾಗುವುದಂತೂ ಗ್ಯಾರಂಟಿ!

ನಮ್ಮ ಈ ವ್ಯಸ್ತ ಜೀವನದಲ್ಲಿ, ಅಧ್ಯಯನ, ಸ್ವಾಧ್ಯಾಯ, ಸಂಶೋಧನೆಗಳಿಗೆ ಅವಕಾಶ ತೀರ ಕಡಿಮೆ ಎಂಬಂತಾಗಿ ಹೋಗಿದೆ. ಗೂಗಲ್ ಮಾಡಿದರೆ ಎಲ್ಲ ಸಿಗುತ್ತದೆ, ಅದಕ್ಕೇಕೆ ಅಧ್ಯಯನ ಎಂದು ಭಾವಿಸುವ ಮೂರ್ಖಯೋಚನೆಯಲ್ಲಿ ನಾವಿದ್ದೇವೆ.

ಈ ಕಟು ಕಹಿ ಸತ್ಯವನ್ನು ಅರಿತಿರುವ ಹಾಗೆ, ಡಾ.ಟಿ ಆರ್ ಅನಂತರಾಮು ಅವರು, 150ಪುಟಗಳಲ್ಲಿ ನೂರಾರು ಮೌಲಿಕ ಗ್ರಂಥಗಳ ಸಾರವನ್ನು ಸಂಗ್ರಹಿಸಿ ನಮಗೆ, ನಾಡದೇವಿ ಭುವನೇಶ್ವರಿ ನಡೆದು ಬಂದ ದಾರಿ– ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಪುಸ್ತಕವನ್ನು ಕನ್ನಡಿಗರಿಗೆ ನೀಡಿದ್ದಾರೆ. ಮೂಲತಃ ಭೂವಿಜ್ಞಾನಿಯಾದ ಲೇಖಕರ ಕನ್ನಡದ ಬಗೆಗಿನ ಕಳಕಳಿ ಪ್ರೀತಿ ಅಗಾಧ. ಮೇಲೆ ಹೇಳಿದ ಎಲ್ಲ ವಿಚಾರಗಳ ಸಾದ್ಯಂತ ವಿವರಣೆ ಆ ಪುಸ್ತಕದಲ್ಲಿದೆ.

ಅದನ್ನು ಓದುವ ಮೂಲಕ ಅವರ ಶ್ರಮ, ಕಳಕಳಿ, ಬದ್ಧತೆಗಳಿಗೆ ನಾವು ಗೌರವ ಸಲ್ಲಿಸುವುದು ಮಾತ್ರವಲ್ಲ, ನಮ್ಮ ಜ್ಞಾನವನ್ನೂ ವಿಸ್ತರಿಸಿಕೊಳ್ಳಬಹುದು ಎಂಬ ಸಣ್ಣ ತಿಳುವಳಿಕೆ ಇರಿಸಿಕೊಳ್ಳಬೇಕು.

ರಾಜ್ಯೋತ್ಸವದ ಈ ಸಂದರ್ಭದಲ್ಲಿ ಬಹುಶಃ ನಮಗೆ ನಾವೇ ಕೊಟ್ಟುಕೊಳ್ಳುವ ಉತ್ತಮ ಬೌದ್ಧಿಕ ಉಡುಗೊರೆ ಎಂದರೆ ತಪ್ಪಾಗಲಾರದು. ಕನ್ನಡವನ್ನು ಉಳಿಸಲು ನಾವೆಲ್ಲ ಇಂದಿನ ಸಂದರ್ಭದಲ್ಲಿ ಹೋರಾಡಬೇಕಾಗಿ ಬಂದಿರುವುದೇ ವಿಷಾದನೀಯ ಸಂಗತಿ. ಕನ್ನಡದ ಮೇಲೆ ಅಭಿಮಾನ ತೋರುವಂತೆ, ಮಾತನಾಡುವಂತೆ, ಬಳಸುವಂತೆ ಒತ್ತಾಯ ಹೇರಬೇಕಾಗಿ ಬಂದಿರುವಂತಹ ಈ ಪರಿಸ್ಥಿತಿಯಲ್ಲಿ ಇಂತಹ ಪುಸ್ತಕದ ಓದು ನಮ್ಮಲ್ಲಿ ಅಭಿಮಾನ ಉಕ್ಕಿಸಿ ನಮ್ಮ ನಿರಭಿಮಾನವನ್ನು ಕುರಿತು ನಮಗೇ ನಾಚಿಕೆ ಮೂಡಿಸಬಹುದು.

ಎಲ್ಲೆಲ್ಲಿಂದಲೋ ಬಂದು ಇಲ್ಲಿನ ಸೌಂದರ್ಯ ಸೊಗಸಿಗೆ ಮನಸೋತು ಇಲ್ಲಿಯೇ ನೆಲೆಸುತ್ತಿರುವವರ ಸಂಖ್ಯೆ ಇಂದು ಹೆಚ್ಚಾಗುತ್ತಿದೆ. ಅಂತಹುದರಲ್ಲಿ ಇಲ್ಲಿನವರೇ ಆಗಿ, ಈ ನಾಡನ್ನು ಕಟ್ಟಲು ಪರಿಪರಿಯಾಗಿ ಶ್ರಮಿಸಿ ತಮ್ಮ ತನು–ಮನ–ಧನ ಜೀವನಗಳನ್ನು ಧಾರೆ ಎರೆದವರನ್ನೂ ಮರೆತು, ನಾವೂ ಅಭಿಮಾನ ಶೂನ್ಯರಾಗುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಈ ಪುಸ್ತಕ ನಮಗೆ ಇತಿಹಾಸವನ್ನು ನೆನಪಿಸುವ ಮಹತ್ತರ ಕಾರ್ಯ ಮಾಡುತ್ತಿದೆ. ನಮ್ಮನ್ನೆಲ್ಲಾ ಸೃಷ್ಟಿಸಿದವಳು ದೇವಿ, ನಮ್ಮನ್ನು ಪೊರೆಯುತ್ತಿರುವವಳು ದೇವಿ, ಎಂದು ಧೃಡವಾಗಿ ನಂಬಿರುವವರು ನಾವು. ಭಾರತಮಾತೆಯ ತನುಜಾತೆಯ ಸಿಂಹಾಸನಾಧೀಶ್ವರಿ ಭುವನೇಶ್ವರಿ ನಮ್ಮೆಲರ ಮನದಲ್ಲಿ ನೆಲೆಗೊಂಡು ಕನ್ನಡಪ್ರೀತಿ ಸ್ಥಿರಗೊಳಿಸಲಿ ಎಂದು ಆಶಿಸುತ್ತಾ, ನಿಮಗೆಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತೇನೆ.

ಜಯ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ॥

ಬ್ಯಾಂಕಿಂಗ್ ವ್ಯವಸ್ಥೆ ದೈನಂದಿನ ಜೀವನಕ್ಕೆ ಉತ್ತಮ ಸೇವೆ, ನಾವೀನ್ಯತೆ ಒದಗಿಸುತ್ತದೆ

‘ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು : ಸವಾಲುಗಳು, ನಾವೀನ್ಯತೆ ಮತ್ತು ನೀತಿ ಪ್ರತಿಕ್ರಿಯೆಗಳು’ ಕುರಿತು ರಾಷ್ಟ್ರೀಯ ಸಮ್ಮೇಳನ

ಮೈಸೂರು,ಅ.29(ಜಿಎ)–ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ವತಿಯಿಂದ ‘ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು : ಸವಾಲುಗಳು, ನಾವೀನ್ಯತೆ ಮತ್ತು ನೀತಿ ಪ್ರತಿಕ್ರಿಯೆಗಳು’ ಕುರಿತ ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗಿತ್ತು.

ಮೈಸೂರು ಸ್ಟೇಟ್ ಬ್ಯಾಂಕ್ ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ಡೆವೆಲ್ಪಮೆಂಟ್ ಸಂಸ್ಥೆಯ ಮೈಸೂರಿನ ವ್ಯವಸ್ಥಾಪಕ ನಿರ್ದೇಶಕ ದಿವಾಕರ್ ಝಾ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಬ್ಯಾಂಕಿಂಗ್ ವ್ಯವಸ್ಥೆ ದೈನಂದಿನ ಜೀವನಕ್ಕೆ ಉತ್ತಮ ಸೇವೆ ಮತ್ತು ನಾವಿನ್ಯತೆ ಒದಗಿಸುವಲ್ಲಿ ಸಕ್ರಿಯವಾಗಿದೆ ಎಂದರು.

ಪ್ರಸ್ತುತದವರೆಗೆ ಬ್ಯಾಂಕಿಂಗ್ ನಾವೀನ್ಯತೆಗಳ ಬೆಳವಣಿಗೆಯನ್ನು ವಿವರಿಸಿ, ಹಣಕಾಸು ಸೇರ್ಪಡೆಯು ಪ್ರತಿಯೊಬ್ಬ ವ್ಯಕ್ತಿಯನ್ನೂ ಔಪಚಾರಿಕ ಬ್ಯಾಂಕಿಂಗ್ ವ್ಯವಸ್ಥೆಗೆ ತಂದಿದೆ. ನಿಜವಾದ ಫಲಾನುಭವಿಗಳಿಗೆ ನೇರ ಲಾಭ ವರ್ಗಾವಣೆಯನ್ನೂ ಖಾತ್ರಿಪಡಿಸಿದ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನ್–ಧನ್ ಯೋಜನೆಯನ್ನು ಅವರು ಶ್ಲಾಘಿಸಿದರು.

ಕೊಯಮತ್ತೂರು ಭಾರತಿಯಾರ್ ವಿಶ್ವವಿದ್ಯಾಲಯದ ಐಪಿಆರ್ ನಿರ್ದೇಶಕರು ಮತ್ತು ವಾಣಿಜ್ಯ ವಿಭಾಗದ ಡೀನ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ.ಎಂ.ಸುಮತಿ ಮಾತನಾಡಿ, ದೇಶದ ವೇಗದ ಬೆಳವಣಿಗೆಗೆ ಬ್ಯಾಂಕಿಂಗ್ ಕ್ಷೇತ್ರದ ಪರಿವರ್ತನಾತ್ಮಕ ಪ್ರಗತಿಗೆ ಕಾರಣವಾಗಿದೆ. ಆದರೆ, ಹೆಚ್ಚುತ್ತಿರುವ ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ವಹಿಸಿ, ಗ್ರಾಹಕರು ಜಾಗರೂಕರಾಗಿರಬೇಕೆಂದು ಅಭಿಪ್ರಾಯಪಟ್ಟರು.

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ.ಡಿ.ಎಸ್.ಪ್ರತಿಮಾ ಮಾತನಾಡಿ, ಇತ್ತೀಚಿನ ಬ್ಯಾಂಕಿಂಗ್ ಬೆಳವಣಿಗೆಗಳು ಭಾರತದ ಜಾಗತಿಕ ಸ್ಥಾನಮಾನವನ್ನು ಉನ್ನತೀಕರಿಸಿವೆ ಎಂಬುದೆಲ್ಲವನ್ನು ತಿಳಿಸಿ, ಅವರು, ಅವಕಾಶಗಳ ಜೊತೆಗೆ ಬ್ಯಾಂಕಿಂಗ್ ಕ್ಷೇತ್ರವು ಗಣನೀಯ ಸವಾಲುಗಳನ್ನು ಎದುರಿಸಿದೆ ಎಂದರು.

ಈ ವೇಳೆ ಎರಡು ತಾಂತ್ರಿಕ ಗೋಷ್ಠಿಗಳು, ಸಂವಾದ ಗೋಷ್ಠಿ ಮತ್ತು ಎರಡು ಪ್ರಬಂಧ ಮಂಡನೆಯ ಪರ್ಯಾಯ ಗೋಷ್ಠಿಗಳು ನಡೆಯಿತು. 51 ಪ್ರಬಂಧಗಳನ್ನು ಅಧ್ಯಾಪಕರು ಹಾಗೂ ಸಂಶೋಧಕರು ಮಂಡಿಸಿದರು. ‘ಗಿಫ್ಟ್‌ಸಿಟಿ ಮೂಲಕ ಜಾಗತಿಕ ಒಮ್ಮುಖ: ಭಾರತದ ಆರ್ಥಿಕ ಭವಿಷ್ಯವನ್ನು ರೂಪಿಸುವುದು’ ಎಂಬ ವಿಷಯ ಕುರಿತಾದ ಸಂವಾದ ಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಬಿ.ಮಹದೇವಪ್ಪರವರು, ಮೈಸೂರು ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರದ ಹಿರಿಯ ಪ್ರಾಧ್ಯಾಪಕ ಡಾ.ಕೆ.ನಾಗೇಂದ್ರ ಬಾಬುರವರು, ಮೈಸೂರು ಯೂನಿಯನ್ ಬ್ಯಾಂಕ್‌ನ ಉಪಪ್ರಧಾನ ವ್ಯವಸ್ಥಾಪಕ ಎಸ್.ಜಿ.ರಾಜ್‌ಕುಮಾರ್, ಮೈಸೂರು ಸ್ಟೇಟ್ ಬ್ಯಾಂಕ್ ಇನ್ಸ್ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್‌ನ ಮುಖ್ಯವ್ಯವಸ್ಥಾಪಕ ಕೆ.ಎಲ್.ಅಭಯ ಪ್ರಕಾಶ್ ಭಾಗವಹಿಸಿದ್ದರು.

ಮೊದಲ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರು ಜೆಎಸ್‌ಎಸ್ ಟಿಐ ಕ್ಯಾಂಪಸ್ ನಿರ್ವಹಣಾ ಅಧ್ಯಯನ ಕೇಂದ್ರದ ಡೀನ್ ಮತ್ತು ಪ್ರಾಧ್ಯಾಪಕರಾದ ಡಾ.ಪಿ.ನಾಗೇಶ್ ‘ಬ್ಯಾಂಕಿಂಗ್‌ನ ಭವಿಷ್ಯವನ್ನು ನ್ಯಾವಿಗೇಟ್ ಮಾಡುವುದು: ನಾವಿನ್ಯತೆ ಮತ್ತ ಅಡಚಣೆ’ ವಿಷಯ ಕುರಿತು ಮಾತನಾಡಿದರು. ಎರಡನೇ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರು ಸ್ಟೇಟ್ ಬ್ಯಾಂಕ್ ಕಲಿಕೆ ಮತ್ತು ಅಭಿವೃದ್ಧಿ ಸಂಸ್ಥೆಯ ಮುಖ್ಯ ವ್ಯವಸ್ಥಾಪಕರಾದ ಎಸ್.ಎಸ್.ಬೆಲ್ಲೋಟೆ ಅವರು ‘ಬ್ಯಾಂಕಿಂಗ್‌ನಲ್ಲಿ ನಿಯಂತ್ರಕ ಮತ್ತು ನೀತಿ ಬೆಳವಣಿಗೆಗಳು’ ವಿಷಯ ಕುರಿತಂತೆ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ.ರೇಚಣ್ಣ, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ.ವಿ.ಗಂಗಾಧರಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ವತಿಯಿಂದ ‘ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು : ಸವಾಲುಗಳು, ನಾವೀನ್ಯತೆ ಮತ್ತು ನೀತಿ ಪ್ರತಿಕ್ರಿಯೆಗಳು’ ಕುರಿತ ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದೇವಸ್ಥಾನ ಜಾಗ ಅತಿಕ್ರಮಣ ತೆರವಿಗೆ ಆಗ್ರಹಿಸಿ ಪ್ರತಿಭಟನೆ



ಕರ್ನಾಟಕ ದಲಿತ್ ಪ್ಯಾಂಥರ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಅ.29(ವಿವಿಹೆಚ್)– ಮೈಸೂರಿನ ಗಾಂಧಿನಗರದ ಅಂಬೇಡ್ಕರ್ ವೃತ್ತದ ಬಳಿಯಿರುವ ವೀರನಗೆರೆ ಶ್ರೀ ಮಹದೇವಮ್ಮನವರ ದೇವಸ್ಥಾನದ ಜಾಗ ಅತಿಕ್ರಮಣ ಮಾಡಿಕೊಂಡಿದ್ದು, ಇದರ ಸರ್ವೆ ಮಾಡಿಸಿ ನ್ಯಾಯ ಕಲ್ಪಿಸಬೇಕೆಂದು ಗಾಂಧಿನಗರ ಕರ್ನಾಟಕ ದಲಿತ್ ಪ್ಯಾಂಥರ್ ಪ್ರತಿಭಟನೆ ನಡೆಸಿತು.

ಸದರಿ ದೇವಾಲಯದ ಸರ್ವೆ ಮಾಡಲು ಆಗಮಿಸಿದ ನಗರ ಭೂಮಾಪನ ಇಲಾಖೆ ಅಧಿಕಾರಿಗಳಿಗೆ ಅತಿಕ್ರಮಣ ಮಾಡಿರುವ ಕೆಲವರು ಸರ್ವೆ ಮಾಡಲು ಬಿಡಲಿಲ್ಲ. ದೇವಾಲಯ ಎಲ್ಲಾ 7 ಕೋಮಿನ ಜನರಿಗೂ ಸೇರಿದ್ದಾಗಿದ್ದು, ಇದರ ಸರ್ವೆ ನಡೆಸಿ, ಎಲ್ಲರಿಗೂ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ ಪ್ಯಾಂಥರ್ಸ್, ಗಾಂಧಿನಗರ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಹಾಯಕ ಭೂ ದಾಖಲೆಗಳ ನಿರ್ದೇಶಕ, ತಹಶೀಲ್ದಾರ್ ಮಹೇಶ್, ಒಂದು ವಾರದ ಒಳಗಾಗಿ ಸ್ಥಳದ ದಾಖಲೆಗಳನ್ನು ಒದಗಿಸಿ, ನಂತರ ಸರ್ವೆ ಮಾಡಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಈ ವೇಳೆ ಮಾತನಾಡಿದ ದಲಿತ್ ಪ್ಯಾಂಥರ್‌ನ ಪ್ರಧಾನ ಕಾರ್ಯದರ್ಶಿ ಎಂ.ಕಿರಣ್ ಕುಮಾರ್, ಮಹದೇವಮ್ಮನವರ ದೇವಾಲಯ ಜಾಗ 7 ಜನಾಂಗಕ್ಕೆ ಸೇರಿದ್ದು, ಆದರೆ ಒಂದು ಕೋಮಿನ ಜನರು ಎಲ್ಲವನ್ನು ಅತಿಕ್ರಮಿಸಿಕೊಂಡು, ಉಳಿದ ಕೋಮಿನ ಜನರನ್ನು ನಿರ್ಲಕ್ಷಿಸುತ್ತಿದ್ದಾರೆ. ಇದರ ವಿರುದ್ಧ ಧ್ವನಿ ಎತ್ತಿದ್ದೇವೆ. ನಮ್ಮ ಬಳಿ ಎಲ್ಲಾ ದಾಖಲೆಗಳಿದ್ದು, ಕಾನೂನು ಹೋರಾಟ ಮಾಡುತ್ತೇವೆ ಎಂದರು. ಈ ವೇಳೆ ದಲಿತ್ ಪ್ಯಾಂಥರ್ಸ್‌ನ ಸರ್ವಸದಸ್ಯರು, ಗ್ರಾಮಸ್ಥರಾದ ನಾಗಣ್ಣ, ವಿಜಯೇಂದ್ರ, ಧನಂಜಯ್, ನವೀನ್, ಪ್ರದೀಪ್, ಕುಮಾರ್, ಮನು, ಅರವಿಂದ್, ಮೋಹನ್ ಕುಮಾರ್, ಅರವಿಂದ್ ಭಾಗವಹಿಸಿದ್ದರು.

ಒಳಮೀಸಲಾತಿ ಜಾರಿಗೆ ಕಾಯ್ದೆ ತರಲು ಯೋಜನೆ

ಅಲೆಮಾರಿ ಸಮುದಾಯಕ್ಕೆ ಇಂದು 1,500 ಕೋಟಿ ವಿಶೇಷ ಪ್ಯಾಕೇಜ್ ಘೋಷಣೆ

ಬೆಂಗಳೂರು, ಅ.29– ಒಳ ಮೀಸಲಾತಿ ಅನುಷ್ಠಾನ ಸಂಬಂಧ ಕಾಯ್ದೆ ತರಲು ರಾಜ್ಯ ಸರ್ಕಾರ ನಿರ್ಧಾರ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಹೆಚ್.ಕೆ ಪಾಟೀಲ್, ಸರ್ಕಾರ ಈ ವರ್ಷ ಆ.25ರಂದು ಒಳ ಮೀಸಲಾತಿ ಸಂಬಂಧ ಹೊರಡಿಸಿರುವ ಆದೇಶದ ಅನ್ವಯ ಹೇಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಚರ್ಚೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.


ಹೆಚ್.ಕೆ ಪಾಟೀಲ್

ಒಳ ಮೀಸಲಾತಿಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು, ಸೂಕ್ತ ಪ್ರಾತಿನಿಧ್ಯ ಒದಗಿಸಲು ಕಾನೂನು ಮಾಡುವ ಅವಶ್ಯಕತೆ ಇದೆ. ಹೀಗಾಗಿ ಬಿಲ್ ತರಲು ಸರ್ಕಾರ ನಿರ್ಧಾರ ಮಾಡಿದೆ. ನಾಳೆಯ ಕ್ಯಾಬಿನೆಟ್‌ನಲ್ಲಿ ಕರಡು ಮಸೂದೆ ಮಂಡಿಸುತ್ತೇವೆ ಎಂದರು.

ಇನ್ನು ಅಲೆಮಾರಿ ಸಮುದಾಯ ಹೋರಾಟ ಹಿನ್ನೆಲೆಯಲ್ಲಿ ಆ ಸಮುದಾಯವನ್ನು ಸಮಾಧಾನ ಮಾಡಲು ವಿಶೇಷ ಪ್ಯಾಕೇಜ್ ಘೋಷಣೆಗೆ ಸರ್ಕಾರ ನಿರ್ಧಾರ ಮಾಡಿದೆ. ನಾಳೆ ಕ್ಯಾಬಿನೆಟ್‌ನಲ್ಲಿ ಅಲೆಮಾರಿ ಸಮುದಾಯಕ್ಕೆ ಒಂದೂವರೆ ಸಾವಿರದಿಂದ ಎರಡು ಸಾವಿರ ಕೋಟಿ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಣೆಗೆ ಪ್ಲ್ಯಾನ್ ಮಾಡಿದೆ.

ಅಲೆಮಾರಿ ಸಮುದಾಯದ ಅಭಿವೃದ್ಧಿ ನಿಗಮದಡಿ ವಿಶೇಷ ಪ್ಯಾಕೇಜ್ ಮೂಲಕ ನೆರವು ನೀಡಲು ಸರ್ಕಾರ ಚಿಂತನೆ ಮಾಡಿದೆ ಎನ್ನಲಾಗಿದೆ. ಇದರ ನಡುವೆ ಅಲೆಮಾರಿ ಸಮುದಾಯಗಳ ಜೊತೆ ಅ.31 ರಂದು ಸರ್ಕಾರ ಸಭೆ ನಡೆಸಲಿದೆ.

ರೈತನ ಬಲಿಪಡೆದ ಹುಲಿ ಸುಳಿವು ಸಿಗದೆ ಅರಣ್ಯ ಸಿಬ್ಬಂದಿ ಹೈರಾಣ

ಕಾರ್ಯಾಚರಣೆ ಮುಂದುವರೆಸಲು ನಿರ್ಧಾರ

ಮೈಸೂರು, ಅ.29(ಎಂಟಿವೈ)– ರೈತನ ಮೇಲೆ ದಾಳಿ ನಡೆಸಿದ ಹುಲಿ ಸೆರೆಗೆ ಗುರುವಾರ ದಿನವಿಡೀ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಯಾವುದೇ ಸುಳಿವು ಸಿಗದ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿ ಹೈರಾಣಾದರು.

ಸರಗೂರು ತಾಲೂಕಿನ ಮುಳ್ಳೂರು ವ್ಯಾಪ್ತಿಯ ಬೆಣ್ಣೆಗೆರೆ ಬಳಿ ರೈತ ರಾಜಶೇಖರ ಮೇಲೆ ದಾಳಿ ನಡೆಸಿದ ಹುಲಿ ಸೆರೆಗೆ ಕಳೆದ ಎರಡು ದಿನಗಳಿಂದಲೂ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದರೂ ಹುಲಿಯ ಸುಳಿವೇ ಸಿಗದೆ ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ. ಸ್ಥಳದಲ್ಲಿಯೇ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮೊಕ್ಕಾಂ ಹೂಡಿದ್ದು, ಕೂಂಬಿಂಗ್ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ಸತತ 8 ಗಂಟೆ ಕಾರ್ಯಾಚರಣೆಯಲ್ಲಿ ಸಿಗದ ಸುಳಿವು: ನಂಜನಗೂಡು ತಾಲೂಕಿನ ಈರೇಗೌಡನಹುಂಡಿ–ಅಂಜನಾಪುರದ ಬಳಿ ಮಂಗಳವಾರ (ಅ.28) ಸಂಜೆ ಹೆಣ್ಣು ಹುಲಿಯೊಂದನ್ನು ಸುರಕ್ಷಿತವಾಗಿ ಸೆರೆಹಿಡಿದಿದ್ದ ಅರಣ್ಯ ಸಿಬ್ಬಂದಿ ತಂಡ, ರೈತನ ಹತ್ಯೆ ಮಾಡಿದ ಹುಲಿಯನ್ನು ಸೆರೆ ಹಿಡಿಯುವ ಉತ್ಸಾಹದಿಂದ ಇಂದು ಬೆಳಗ್ಗೆಯೇ ಕೂಂಬಿಂಗ್ ಕಾರ್ಯಾಚರಣೆಗಿಳಿದರು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ಹೆಡಿಯಾಲ ಎಸಿಎಫ್ ಡಿ. ಪರಮೇಶ ಅವರು ಕೂಂಬಿಂಗ್ ಕಾರ್ಯಾಚರಣೆಯ ನೇತೃತ್ವ ವಹಿಸಿ, ಅಗತ್ಯ ಮಾರ್ಗದರ್ಶನ, ಸಲಹೆ ಸೂಚನೆ ನೀಡಿದರು.


ಸರಗೂರು ತಾಲೂಕಿನ ಮುಳ್ಳೂರು–ಬೆಣ್ಣೆಗೆರೆ ಸಮೀಪದ ರೈತನ ಮೇಲೆ ದಾಳಿ ನಡೆಸಿದ ಹುಲಿ ಪತ್ತೆಗೆ ಸಾಕಾನೆಗಳೊಂದಿಗೆ ಕೂಂಬಿಂಗ್ ಕಾಯಾಚರಣೆ ನಡೆಸುತ್ತಿರುವುದು.

ಬೆಳಗ್ಗೆ 6 ಗಂಟೆಗೆ ನಾಲ್ವರು ಆರ್‌ಎಫ್‌ಓ ನೇತೃತ್ವದ ಎಸ್‌ಟಿಪಿಎಫ್ ತಂಡ ಸೇರಿದಂತೆ ವಿವಿಧ ವಲಯದ 120ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರು. ನುಗು ಹೊಳೆ ದಡದ ಸಮೀಪ ಹಾಗೂ ರೈತನ ಮೇಲೆ ದಾಳಿ ನಡೆಸಿದ ಸ್ಥಳದ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ವಿವಿಧೆಡೆ ಕಾಲ್ನಡಿಗೆಯಲ್ಲೇ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಹುಲಿ ಸುಳಿವಾಗಲೀ, ಹೆಜ್ಜೆ ಗುರುತಾಗಲೀ ಸಿಗಲಿಲ್ಲ. ಆದರೂ ಕಾರ್ಯಾಚರಣೆ ಮುಂದುವರೆಸಲಾಗಿತ್ತು.

ಮಧ್ಯಾಹ್ನ 3 ಗಂಟೆಗೆ ಒಂದು ಸ್ಥಳದಲ್ಲಿ ಹೆಜ್ಜೆ ಗುರುತು ಗೋಚರ: ಮಧ್ಯಾಹ್ನ 3 ಗಂಟೆ ವೇಳೆಗೆ ರೈತನ ಮೇಲೆ ದಾಳಿ ನಡೆಸಿದ ಸ್ಥಳದಿಂದ ಅನತಿ ದೂರದಲ್ಲಿ ಕೂಂಬಿಂಗ್ ಸಿಬ್ಬಂದಿಗೆ ಹುಲಿ ಹೆಜ್ಜೆ ಗುರುತು ಪತ್ತೆಯಾಯಿತು. ಕೂಡಲೇ ಅಲರ್ಟ್ ಆದ ಹಿರಿಯ ಅಧಿಕಾರಿಗಳು ಹುಲಿ ಹೆಜ್ಜೆ ಪತ್ತೆಯಾದ ಸ್ಥಳಕ್ಕೆ ಮಹೇಂದ್ರ, ಭೀಮ ಹಾಗೂ ರೋಹಿತ ಆನೆಯನ್ನು ಕರೆಸಿಕೊಳ್ಳಲಾಯಿತು. ಅವುಗಳ ಮೇಲೆ ವೈದ್ಯರಾದ ಡಾ. ರಮೇಶ್, ಡಾ.ವಿಜಾರ್‌ವಾಸಿಂ, ಗುರಿಕಾರ ಡಿಆರ್‌ಎಫ್‌ಓ ರಂಜನ್ ಅವರು ಮೂರು ದಿಕ್ಕುಗಳಲ್ಲಿ ಆನೆ ಮೇಲೆ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿದರು.

ಆದರೆ, ಸಂಜೆ 6 ಗಂಟೆವರೆಗೂ ತೀವ್ರ ಶೋಧ ನಡೆಸಿದರೂ ಹುಲಿಯ ಸುಳಿವು ಸಿಗಲಿಲ್ಲ. ಅಲ್ಲದೆ, ಕತ್ತಲು ಆವರಿಸಿದ್ದರಿಂದ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ಸ್ಥಗಿತಗೊಳಿಸಲಾಯಿತು. ನಾಳೆ (ಅ.30) ಮತ್ತೆ ಕಾರ್ಯಾಚರಣೆ ನಡೆಸಲು ನಿರ್ಧರಿಸಲಾಗಿದೆ.

ಥರ್ಮಲ್ ಡ್ರೋನ್‌ಗೂ ಸಿಗದ ಹುಲಿ: ಮಂಗಳವಾರ ಸೆರೆ ಹಿಡಿದ ಹುಲಿ ಕಾರ್ಯಾಚರಣೆಯಲ್ಲಿ ಹುಲಿಯ ಚಲನ–ವಲನದ ಸುಳಿವನ್ನು ಥರ್ಮಲ್ ಡ್ರೋನ್ ನೀಡಿದ್ದರಿಂದ ಕಾರ್ಯಾಚರಣೆ ನಡೆಸಲು ನೆರವಾಯಿತು. ಆದರೆ, ಇಂದು ಥರ್ಮಲ್ ಡ್ರೋನ್ ಕಣ್ಣಿಗೆ ಹುಲಿ ಬೀಳದ ಕಾರಣ ಕಾರ್ಯಾಚರಣೆಗೆ ಹಿನ್ನಡೆಯಾಗಿದೆ.

ದಟ್ಟ ಪೊದೆಯೇ ಕಾರ್ಯಾಚರಣೆಗೆ ಅಡ್ಡಿ: ಕಾಡಂಚಿನಲ್ಲಿ ನೂರಾರು ಎಕರೆ ಪ್ರದೇಶದಲ್ಲಿ ಹತ್ತಾರು ವರ್ಷಗಳಿಂದ ಬೆಳೆದಿರುವ ದಟ್ಟ ಪೊದೆಗಳೇ ಹುಲಿ ಅಡಗಿರುವ ಸ್ಥಳ ಗುರುತಿಸುವಿಕೆಗೆ ಅಡ್ಡಿಯಾಗುತ್ತಿದೆ. ಕಾಡಿಗಿಂತಲೂ ದಟ್ಟವಾದ ಪೊದೆ ಹಾಗೂ ಮರಗಳಿಂದ ಕೂಡಿರುವ ಈ ಸ್ಥಳದಲ್ಲಿ ಕೂಂಬಿಂಗ್ ಕಾರ್ಯಾಚರಣೆ ಆನೆಗಳು ಮುನ್ನುಗ್ಗಲು ಕಷ್ಟವಾಗುವಂತಹ ವಾತಾವರಣವಿದೆ. ಇದರಿಂದ ಹುಲಿ ಯಾವ ಸ್ಥಳದಲ್ಲಿದೆ ಎಂದು ಪತ್ತೆ ಮಾಡುವುದೇ ದುಸ್ತರವಾಗಿದೆ.

ಕಾರ್ಯಾಚರಣೆಯಲ್ಲಿ ನುಗು ಆರ್‌ಎಫ್‌ಓ ಎಸ್.ವಿವೇಕ್, ಕಲ್ಕರೆ ಆರ್‌ಎಫ್‌ಓ ರಾಜೇಶ್, ಗುಂಡ್ರೆ ಆರ್‌ಎಫ್‌ಓ ಅಮೃತೇಶ್, ಮಳೆಯೂರು ಆರ್‌ಎಫ್‌ಓ ಅಮೃತ ಮಾಯಪ್ಪ ಸೇರಿದಂತೆ ಇನ್ನಿತರರು ವಿವಿಧ ತಂಡಗಳಲ್ಲಿ ಭಾಗಿಯಾಗಿದ್ದರು.

ಅಪರಾಧ ಲೋಕ ಕೈ ಬೀಸಿ ಕರೆಯುತ್ತೆ; ಒಮ್ಮೆ ಆ ಬಲೆಗೆ ಬಿದ್ದರೆ ಪಾರಾಗುವುದು ಕಷ್ಟ... ಕಷ್ಟ...

ವಿದ್ಯಾರ್ಥಿಗಳಿಗೆ ಮೈಸೂರು ನಗರ ಡಿಸಿಪಿ ಕೆ.ಎಸ್.ಸುಂದರರಾಜ್ ಎಚ್ಚರಿಕೆ ನುಡಿ

ಮೈಸೂರು,ಅ.29(ಎಸ್‌ಪಿಎನ್)– ವಿದ್ಯಾವಂತ ಯುವಕ–ಯುವತಿಯರಿಗೆ ಅಪರಾಧ ಲೋಕ ಕೈಬಿಸಿ ಕರೆಯುತ್ತಿದೆ. ಒಮ್ಮೆ ಈ ಬಲೆಯಲ್ಲಿ ಸಿಲುಕಿಕೊಂಡರೆ ಮತ್ತೆ ತಪ್ಪಿಸಿಕೊಳ್ಳುವುದು ಕಷ್ಟದ ಕೆಲಸ ಎಂದು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರರಾಜ್ ವಿದ್ಯಾರ್ಥಿಗಳಿಗೆ ಎಚ್ಚರಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಹೊಸ ಕಟ್ಟಡದ ಆವರಣದಲ್ಲಿ 2025–26ನೇ ಸಾಲಿನ ಸಾಂಸ್ಕೃತಿಕ, ಎನ್‌ಎಸ್‌ಎಸ್ ಮತ್ತು ಕ್ರೀಡಾ ಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ನಗರ ಪ್ರದೇಶದಲ್ಲಿ ಕಲಿತವರಿಂದ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು. ಹಾಗಾಗಿ ಯುವಕ, ಯುವತಿಯರು ಅಪರಾಧ ಪ್ರಕರಣಗಳಿಂದ ದೂರವಿದ್ದು, ಶಿಸ್ತುಬದ್ಧ ಜೀವನಕ್ಕೆ ಆದ್ಯತೆ ನೀಡಬೇಕು. ಡೇ ಕಾಲೇಜು ವಿದ್ಯಾರ್ಥಿಗಳಿಗೆ ವ್ಯಾಸಂಗದ ಸಂದರ್ಭದಲ್ಲಿ ಜೀವನದ ಮಹತ್ವ ತಿಳಿದಿರುವುದಿಲ್ಲ. ಆದರೆ, ಸಂಜೆ ಕಾಲೇಜಿನ ವಿದ್ಯಾರ್ಥಿಗಳು ಬದುಕಿನ ಕಷ್ಟ–ನಷ್ಟಗಳು ತುಂಬಾ ಹತ್ತಿರದಿಂದ ನೋಡಿರುತ್ತಾರೆ. ಅವರು ವೃತ್ತಿಯ ಜೊತೆಗೆ ಶಿಕ್ಷಣವನ್ನು ಮುಂದುವರೆಸುತ್ತಿರುವುದು ಸಂತೋಷ ಸಂಗತಿ ಎಂದರು.




ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರರಾಜ್ ಮಾತನಾಡುತ್ತಿರುವುದು

ಸಂಜೆ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ನಮ್ಮ ಸುತ್ತಮುತ್ತಲಿನ ಸಾಮಾಜಿಕ ವ್ಯವಸ್ಥೆ ಕುರಿತು ಪರಿಚಯವಿರುತ್ತದೆ. ಹಾಗಾಗಿ ಅವರು ವೃತ್ತಿ ಜೊತೆಗೆ ಶಿಕ್ಷಣ ಮುಂದುವರಿಸುವ ಹಂಬಲ ಹೊಂದಿರುತ್ತಾರೆ. ನಾನು 1986–89ರ ಅವಧಿಯಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಶೇ.50 ರಷ್ಟು ಅಂಕಗಳಿಸಿದರೆ, ಅದೇ ದೊಡ್ಡ ಸಾಧನೆಯಾಗಿತ್ತು ಪ್ರಸ್ತುತ ಎಲ್ಲಾ ವಿದ್ಯಾರ್ಥಿಗಳು ಶೇ.90 ರಷ್ಟು ಅಂಕಗಳಿಸಿ, ಒಳ್ಳೆಯ ಕೆಲಸಕ್ಕೂ ಸೇರಿಕೊಂಡಿರುತ್ತಾರೆ. ಆದರೆ, ಅವರು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದಿಲ್ಲ. ಹಾಗಾಗಿ ಕ್ರಿಮಿನಲ್ ಪ್ರಕರಣದಲ್ಲಿ ಕಲಿತವರೇ ಹೆಚ್ಚಾಗಿ ಭಾಗಿಯಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ವ್ಯಾಸಂಗ ಅವಧಿಯಲ್ಲಿ ಎನ್‌ಎಸ್‌ಎಸ್, ಕ್ರೀಡೆ ಹಾಗೂ ಇತರೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗಿ ಉತ್ತಮ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಅಲ್ಲದೆ, ಬಡತನದಲ್ಲಿ ಬೆಳೆದ ಕೆ.ಎಸ್. ಶಿವರಾಂ ಅವರು, ಕನ್ನಡದಲ್ಲೇ ಐಎಎಸ್ ಬರೆದು ಪಾಸಾಗಿದ್ದರು. ನಂತರ ಉನ್ನತ ಹುದ್ದೆಗಳನ್ನು ಅಲಂಕರಿಸಿ, ಇಂದಿನ ಯುವಪೀಳಿಗೆಗೆ ಮಾದರಿಯಾಗಿದ್ದಾರೆ ಎಂದು ಉದಾಹರಣೆ ನೀಡಿದರು.

ವೇದಿಕೆಯಲ್ಲಿ ವಿವಿ ಸಂಜೆ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ಎಂ.ಬಿ.ಸುರೇಶ, ಪ್ರಾಂಶುಪಾಲ ಪ್ರೊ.ವಿ.ಷಣ್ಮುಗಂ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ.ಬಿ. ಶಿವಶಂಕರ, ಡಾ.ಆರ್.ನಿಂಗರಾಜು, ಹಿರಿಯ ಪ್ರಾಧ್ಯಾಪಕಿ ಡಾ.ಸೌಭಾಗ್ಯ ಸೇರಿದಂತೆ ಇತರರಿದ್ದರು.

ಸಂಗೀತಾಮೃತ ಗಾನ ಸಂಭ್ರಮ


ಸಂಗೀತಾಮೃತ ಗಾನಸಂಭ್ರಮ ಸೀಸನ್–3 ವತಿಯಿಂದ ಕರ್ನಾಟಕ ರತ್ನ, ಸಾಹಸಸಿಂಹ, ಡಾ. ವಿಷ್ಣುವರ್ಧನ್ ಸ್ಮಾರಕ ಭವನದಲ್ಲಿ ಏರ್ಪಡಿಸಿದ್ದ ಕರೋಕೆ ಸಂಗೀತ ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಕನ್ನಡ ಚಲನಚಿತ್ರ ಹಾಸ್ಯನಟ ಮಂಡ್ಯ ರಮೇಶ್ ಹಾಗೂ ಸಮಾಜ ಸೇವಕ ಎಂ.ಡಿ. ಪಾರ್ಥಸಾರಥಿ ಅವರು ದೀಪ ಬೆಳಗುವುದರ ಮೂಲಕ ಎಲ್ಲರಿಗೂ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಆಯೋಜಕರಾದ ಹರೀಶ್, ಸುಜಾತ, ಶಿಕ್ಷಕರಾದ ರಂಗಸ್ವಾಮಿ, ನಗುವನಹಳ್ಳಿ ಧನರಾಜ್, ಕಲಾವಿದ ಗೋವಿಂದರಾಜ್, ಶ್ರೀರಂಗಪಟ್ಟಣ ಮಹದೇವ್, ರೂಪ್ ಕುಮಾರ್, ಶ್ರೀಧರ್, ಶಿವಕುಮಾರ್, ನಂಜನಗೂಡು ಸಿದ್ದರಾಜು, ಕುಮಾರಿ, ಶ್ವೇತಾ, ಅನ್ನಪೂರ್ಣ, ರೇಖಾ ಪ್ರಕಾಶ್,ಕವಿತ, ಪ್ರಾರ್ಥನಾ, ವಿಜಯಶ್ರೀ, ಕಮಲ, ಕೋಮಲ ಇನ್ನಿತರ ಹವ್ಯಾಸಿ ಗಾಯಕರು ಭಾಗವಹಿಸಿದ್ದರು.


ಡಿಸೆಂಬರ್ ವೇಳೆಗೆ 2ನೇ ಹಂತದಲ್ಲಿ ಉಳಿದ ನಿಗಮ ಮಂಡಳಿಗೆ ನೇಮಕ

ಅಲ್ಲಿವರೆಗೆ ಕಾಂಗ್ರೆಸ್ ಕಾರ್ಯಕರ್ತರು ತಾಳ್ಮೆಯಿಂದ ಕಾಯಿರಿ: ಮೈಸೂರಿನಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಕಿವಿಮಾತು

● ಇದು ಸೆಪ್ಟೆಂಬರ್ ಕ್ರಾಂತಿ ಸುಳಿವು ● ಕಾಯಿರಿ, ಕಾಯಿರಿ ಎಂದು ಕುತೂಹಲ ಕೆರಳಿಸಿದರು ● ತಾಳ್ಮೆ ವಹಿಸಿದರೆ ನಿಮಗೂ ಒಳ್ಳೆಯದಾಗುತ್ತದೆ

ಮೈಸೂರು, ಅ.29 (ಬಿಎಲ್‌ಯು)– ಡಿಸೆಂಬರ್ ವೇಳೆಗೆ ಎರಡನೇ ಹಂತದಲ್ಲಿ ನಿಗಮ ಮಂಡಳಿಗಳಿಗೆ ನೇಮಕ ಮಾಡಲಿದ್ದು, ಅಲ್ಲಿಯವರೆಗೆ ತಾಳ್ಮೆಯಿಂದ ಕಾಯಿರಿ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಕಾಂಗ್ರೆಸ್ ಕಾರ್ಯಕರ್ತರಿಗೆ ಭರವಸೆ ನೀಡಿದರು.

ನವೆಂಬರ್ ಕ್ರಾಂತಿಯಾಗುತ್ತದೆ ಎಂಬ ಬಗ್ಗೆ ರಾಜ್ಯ ರಾಜಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಎಂ.ಬಿ. ಪಾಟೀಲ್ ಅವರು ನೀಡಿರುವ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ.


ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರನ್ನು ಪಕ್ಷದ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪಕ್ಷದ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಹೊಸದಾಗಿ ರಚನೆಯಾಗುವ ಸರ್ಕಾರದಲ್ಲಿ ಎರಡನೇ ಹಂತದಲ್ಲಿ ಕಾರ್ಯಕರ್ತರಿಗೆ ಅಧಿಕಾರ ನೀಡಲಾಗುವುದು ಎಂಬ ಅರ್ಥದಲ್ಲಿ ಹೇಳಿರಬಹುದು ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರು ಅರ್ಥೈಸಿದರು.

ಸರ್ಕಾರ ರಚನೆಯಾಗಿ ಎರಡೂವರೆ ವರ್ಷವಾಗಿದ್ದು, ತಮಗೆ ಇನ್ನೂ ಅಧಿಕಾರ ದೊರೆತಿಲ್ಲ ಎಂದು ಬಹಳಷ್ಟು ಕಾಂಗ್ರೆಸ್ ಕಾರ್ಯಕರ್ತರು ಅಸಮಾಧಾನ ದಲ್ಲಿರುವುದು ನಮಗೆ ತಿಳಿದಿದೆ ಈಗಾಗಲೇ ಮೊದಲ ಹಂತದಲ್ಲಿ ಕೆಲವರನ್ನು ನಿಗಮ ಮಂಡಳಿಗೆ ನೇಮಕ ಮಾಡಲಾಗಿದೆ. ಎರಡನೇ ಹಂತದಲ್ಲಿ ಡಿಸೆಂಬರ್‌ನಲ್ಲಿ ನೇಮಕ ಮಾಡಲಾಗುವುದು ಎಂದು ಆಶ್ವಾಸನೆ ನೀಡಿದರು.

ಪಕ್ಷದಲ್ಲಿ 10 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರಿದ್ದಾರೆ. ಆದರೆ ಎಲ್ಲರಿಗೂ ಅಧಿಕಾರ ನೀಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಪಕ್ಷಕ್ಕಾಗಿ ದುಡಿದ ಅರ್ಹರನ್ನು ಗುರುತಿಸಿ ಅಧಿಕಾರ ನೀಡಲಾಗುವುದು. ಈ ಸಮಯಕ್ಕಾಗಿ ಕಾದರೆ ಒಳ್ಳೆಯದಾಗುತ್ತದೆ ಎಂದು ಎಂ.ಬಿ.ಪಾಟೀಲ್ ಸಲಹೆ ನೀಡಿದರು.

ಕಳೆದ ಒಂದು ದಶಕದ ಅವಧಿಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲು ಸಾಧ್ಯವಾಗಿಲ್ಲ. ಆದರೆ, ಬಿಜೆಪಿಗೆ ಇದು ತಾತ್ಕಾಲಿಕ ಯಶಸ್ಸು. ಇದಕ್ಕೆ ಪಕ್ಷದ ಕಾರ್ಯಕರ್ತರು ಎದೆಗುಂದಬಾರದು. ನಮಗೂ ಅಧಿಕಾರ ಸಿಗುತ್ತದೆ. ಆದರೆ ಇದಕ್ಕಾಗಿ ತಾಳ್ಮೆಯಿಂದ ಕಾಯಬೇಕಷ್ಟೆ ಎಂದು ಕಿವಿಮಾತು ಹೇಳಿದರು.

ಜಾತಿ ಮುಕ್ತ ಸಮಾಜ ನಿರ್ಮಾಣ ಬುದ್ಧ, ಬಸವ, ಅಂಬೇಡ್ಕರ್ ಅವರ ನಿಲುವಾಗಿತ್ತು. ಕಾಂಗ್ರೆಸ್ ಪಕ್ಷ ಇದನ್ನು ಅನುಸರಿಸಿಕೊಂಡು ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ಜ್ಯಾತ್ಯಾತೀತವಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇವೆ. ಇದು ಯಾವುದೇ ಒಂದು ಜಾತಿ, ಧರ್ಮಕ್ಕೆ ಸೀಮಿತವಲ್ಲ. ಆದರೆ ನಮ್ಮ ಯೋಜನೆ ಬಗ್ಗೆ ವಿರೋಧ ಪಕ್ಷಗಳು ಅಪಪ್ರಚಾರ ಮಾಡುತ್ತಿವೆ ಎಂದು ಎಂ.ಬಿ.ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಹರೀಶ್ ಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ. ವಿಜಯಕುಮಾರ್, ಮಾಜಿ ಮೇಯರ್‌ಗಳಾದ ಮೋದಾಮಣಿ, ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡ ಪ್ರದೀಪ್ ಕುಮಾರ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಅಂಬೇಡ್ಕರ್ ಜ್ಞಾನ ಬಳಸಿ ಸುಭದ್ರ, ಜಾತಿ ಮುಕ್ತ ಭಾರತ ನಿರ್ಮಾಣ

ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಕರೆ

ಮೈಸೂರು, ಅ.29(ವಿವಿಹೆಚ್)– ಈ ಜಗತ್ತು ದುಡ್ಡಿನಿಂದಲ್ಲ ಬದಲಾಗಿ ಜ್ಞಾನದಿಂದ ಆಳಲ್ಪಡುತ್ತದೆ ಎಂಬುದನ್ನು ಬಾಬಾ ಸಾಹೇಬರು ಸಾಬೀತು ಮಾಡಿದ್ದಾರೆ. ಇಂದು ಪ್ರಪಂಚದ 198 ರಾಷ್ಟ್ರಗಳು ಅವರನ್ನು ಪಾಲಿಸುತ್ತಿವೆ ಎಂದು ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲಾ ರಂಗಮಂದಿರದಲ್ಲಿ ಬಿಇಎಂಎಲ್ ಪ.ಜಾತಿ/ಪ.ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬುಧವಾರ ಆಯೋಜಿಸಿದ್ದ ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಹುಟ್ಟುಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಎಂದರೆ ಯಾವುದೋ ಫೋಟೋ, ಪ್ರತಿಮೆ/ಪುತ್ಥಳಿ ಅಥವಾ ಫ್ಲೆಕ್ಸ್ ಅಲ್ಲ. ಅಂಬೇಡ್ಕರ್ ಎಂದರೆ ಜ್ಞಾನ, ನ್ಯಾಯ ಮತ್ತು ಸ್ವಾತಂತ್ರ್ಯದ ಸಂಕೇತ. ಅದಕ್ಕಾಗಿಯೇ ಅವರನ್ನು ಆಧುನಿಕ ಭಾರತದ ತಂದೆ ಎಂದು ಕರೆಯುತ್ತಾರೆ. ಅವರ ಜ್ಞಾನವನ್ನು ಬಳಸಿಕೊಂಡು ಸುಭದ್ರವಾದ, ಜಾತಿ ಮುಕ್ತ ಭಾರತವನ್ನು ಕಟ್ಟುವ ಕೆಲಸ ಮಾಡಬೇಕು ಎಂದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಜ್ಞಾನ ಪ್ರಕಾಶ ಸ್ವಾಮೀಜಿಗಳು ಚಾಲನೆ ನೀಡಿದರು.

ಅಂಬೇಡ್ಕರ್ ಅವರು ದೇಶದ ಏಕತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಅಂಬೇಡ್ಕರ್ ಅವರ ಸಂವಿಧಾನವೇ ಸುಪ್ರೀಂ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯವೇ ಹೇಳಿದೆ. ಭಾರತದಲ್ಲಿ ಆಳ್ವಿಕೆ ಮಾಡುತ್ತಿರುವುದು ಸಂವಿಧಾನದ ಮೇಲೆ ಹೊರತು ಏಕ ಪಕ್ಷ ಅಥವಾ ಏಕ ವ್ಯಕ್ತಿಯಿಂದಲ್ಲ. ದೇಶದ ಮೊದಲ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಾಬಾ ಸಾಹೇಬರು ನನಗೆ ಭಗವಾನ್ (ದೇವರು) ಎಂದು ಹೇಳುತ್ತಾರೆ. ವಿದ್ಯುತ್ ದೀಪವನ್ನೇ ನೋಡದ ಬುಡಕಟ್ಟು ಜನಾಂಗದ ಒಬ್ಬ ಹೆಣ್ಣುಮಗಳು ಇಂದು ದೇಶದ ಅತ್ಯುನ್ನತ ಹುದ್ದೆಯಲ್ಲಿರಲು ಸಾಧ್ಯವಾಗಿದ್ದು ಅಂಬೇಡ್ಕರ್ ಅವರಿಂದಲೇ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಯಾರ್ಯಾರು ಭಗವಾನ್ ಆಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಮಾರ್ಮಿಕವಾಗಿ ನುಡಿದರು.

ಬಾಬಾ ಸಾಹೇಬರು ಸಾರ್ವಜನಿಕ ವಲಯಗಳು ಎಂದಿಗೂ ಖಾಸಗಿ ವಲಯಗಳಾಗಿ ಬದಲಾಗಬಾರದು. ಅದು ಸಾಮ್ರಾಜ್ಯಶಾಹಿತ್ವ, ವಸಾಹತು ಶಾಹಿತ್ವ ದೋರಣೆಗೆ ಹೆಚ್ಚಿನ ಮನ್ನಣೆಯನ್ನು ನೀಡುತ್ತದೆ ಎಂದು 70 ವರ್ಷಗಳ ಹಿಂದೆಯೇ ಪ್ರತಿಪಾದಿಸಿದ್ದರು. ಇಂದಿನ ದಿನಗಳಲ್ಲಿ ಎಲ್ಲವೂ ಖಾಸಗೀಕರಣ ಆಗುತ್ತಿದ್ದು ಇವುಗಳ ತಡೆಯುವ ಕಡೆಗೆ ಹೆಚ್ಚಿನ ಗಮನ ನೀಡಬೇಕಿದೆ ಎಂದರು.

ಕಾರ್ಯನಿವಾಹಕ ನಿರ್ದೇಶಕ ಎಂ.ಜಿ. ರಾಜೀವ್ ಮಾತನಾಡಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಉತ್ತಮ ಸಾಧನೆಗೈದ ಬಿ.ಇ.ಎಂ.ಎಲ್ ಪ.ಜಾತಿ/ಪ.ಪಂ ನೌಕರರ ಮಕ್ಕಳನ್ನು ಅಭಿನಂದಿಸಲಾಯಿತು. ಜೊತೆಗೆ ಒಡನಾಡಿ ಸೇವಾ ಸಂಸ್ಥೆಯ ಮಕ್ಕಳಿಗೆ ಪೆನ್ನು, ಪುಸ್ತಕ, ಬ್ಯಾಗ್ ವಿತರಿಸಲಾಯಿತು.

ಎಂಜಿನ್ ವಿಭಾಗದ ಮುಖ್ಯಸ್ಥ ಶೋಭಿತ್ ಗುಪ್ತಾ, ಬೆಮೆಲ್‌ನ ನಿವೃತ್ತ ಚೀಫ್ ಆಫ್ ಮೈಸೂರ್ ಕಾಂಪ್ಲೆಕ್ಸ್‌ನ ವಿವೇಕ್ ಕೋಹಾರ್, ಮುಖ್ಯ ಸಂಪರ್ಕ ಅಧಿಕಾರಿ ಚನ್ನಪ್ಪ ದ್ಯಾಮಪ್ಪ ಮಾದರ್, ಪಿ.ಅನ್ಬಳಗನ್, ಬಿಇಎಂಇಎ ಮೈಸೂರು ಅಧ್ಯಕ್ಷ ಜೆ.ದಿವಾಕರ, ಬೆಮೋಗ್‌ನ ಉಪಾಧ್ಯಕ್ಷ ಎಸ್.ಜಿ.ಮಾದೇಗೌಡ, ಬೆಮೆಲ್ ಮೈಸೂರು ಅಧ್ಯಕ್ಷ ಡಿ.ನಾರಾಯಣ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಹಾವೀರ ವಿದ್ಯಾಮಂದಿರದ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಮೈಸೂರು, ಅ. 29– ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಿದ ವಲಯ ಮಟ್ಟದ ಅಥ್ಲೆಟಿಕ್ ಕ್ರೀಡಾ ವಿಭಾಗದಲ್ಲಿ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾಮಂದಿರ ಶಾಲೆಯ ವಿದ್ಯಾರ್ಥಿಗಳಾದ 9ನೇ ತರಗತಿಯ ಪ್ರತಿಗ್ಯ 3000 ಮೀ ಓಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 10ನೇ ತರಗತಿಯ ನಂದನ್ ಕೆ 1500 ಮೀ ಓಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಜಾವಲಿನ್ ಎಸತದಲ್ಲಿ ದ್ವಿತೀಯ ಸ್ಥಾನ, 10ನೇ ತರಗತಿ ಯದುಕೃಷ್ಣ 800 ಮೀ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, 9ನೇ ತರಗತಿ ಮೋಹಿತ್ ಡಿ ಡಿಸ್ಕಸ್ ಥ್ರೋನಲ್ಲಿ ತೃತೀಯ ಬಹುಮಾನ, 9ನೇ ತರಗತಿ ಮೃದುಲ ಜಾವಲಿನ್ ಎಸೆತದಲ್ಲಿ ದ್ವಿತೀಯ ಬಹುಮಾನ, 5ನೇ ತರಗತಿ ಮೋಹಿತ್ ಎಸ್ ಬಿ. ಕರ್ನಾಟಕ ಪ್ಯಾರಾ ಸ್ವಿಮ್ಮಿಂಗ್ ಅಸೋಸಿಯೇಷನ್ ನಡೆಸಿದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕಿಕ್ಕೇರಿಯಲ್ಲಿ ಮೈಸೂರು ಮಲ್ಲಿಗೆ ಕಂಪು ಬೀರಿದ ಕೆಎಸ್‌ನ ನೆನಪು ಕಾರ್ಯಕ್ರಮ

ಕೆಎಸ್‌ನ ನೆನಪು ಉಳಿಯುವ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ



ಕಿಕ್ಕೇರಿಯಲ್ಲಿ ಬುಧವಾರ ಕೆಎಸ್‌ನ ಟ್ರಸ್ಟ್ ಮತ್ತಿತರ ಸಂಸ್ಥೆ ಸಹಯೋಗದಲ್ಲಿ ಜರುಗಿದ ಮಲ್ಲಿಗೆ ಕವಿ ಕೆ.ಎಸ್. ನರಸಿಂಹಸ್ವಾಮಿ ಒಂದು ನೆನಪು ಕಾರ್ಯಕ್ರಮವನ್ನು ಶಾಸಕ ಎಚ್.ಟಿ. ಮಂಜು ಉದ್ಘಾಟಿಸಿದರು.

ಕಿಕ್ಕೇರಿ, ಅ.29– ಯೋಗ ಯೋಗದಲ್ಲಿ ಸುಯೋಗ ತನಗೆ ಒಲವಿನ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ನೆನಪು ಉಳಿಯುವ ಕೆಲಸ ಮಾಡಲು ಕೆಎಸ್‌ನ ಟ್ರಸ್ಟ್ ಕಲ್ಪಿಸಿರುವುದು ಸೌಭಾಗ್ಯವೇ ಸರಿ ಎಂದು ಶಾಸಕ ಎಚ್.ಟಿ. ಮಂಜು ಹೇಳಿದರು.

ಪಟ್ಟಣದ ಕೆಪಿಎಸ್ ಶಾಲಾವರಣದಲ್ಲಿ ಬುಧವಾರ ಕರ್ನಾಟಕ ಸರ್ಕಾರದ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, ಮೈಸೂರು ಆಕಾಶವಾಣಿ ಕೇಂದ್ರ, ಮಂಡ್ಯ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಕೆಎಸ್‌ನ ನೆನಪು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಟ್ರಸ್ಟ್ ಹಮ್ಮಿಕೊಂಡಿರುವ ಕೆಎಸ್‌ನ ಸ್ವಾಗತ ಕಮಾನು, ಸ್ಮಾರಕ, ಬಯಲು ರಂಗಮಂದಿರದಂತಹ ಕೆಲಸ ಪರಿಪೂರ್ಣವಾಗುವಂತೆ, ನಿವೇಶನ ಮತ್ತಿತರ ಕೆಲಸಗಳಿಗೆ ಅಡ್ಡಿ ಆತಂಕವಿಲ್ಲದೆ ಜರುಗಲು ಮೊದಲಿಗನಾಗಿ ನಿಲ್ಲುವೆ ಎಂದರು.

ತಾಲೂಕಿನಲ್ಲಿ ಖೇಲೋ ಇಂಡಿಯಾ ಕ್ರೀಡಾಂಗಣ ನಿರ್ಮಾಣಕ್ಕೆ ಎಚ್.ಡಿ. ಕುಮಾರಸ್ವಾಮಿ ಅವರ ಸಂಸದ ನಿಧಿಯಲ್ಲಿ ಅನುದಾನದ ಭರವಸೆ ನೀಡಿದ್ದು, ತಾಲೂಕಿನಲ್ಲಿ ಬಲು ದೊಡ್ಡ ಹೋಬಳಿ ಕೇಂದ್ರದಲ್ಲಿರುವ ಕ್ರೀಡಾ ಪಟುಗಳು ಹೆಚ್ಚು ಇರುವ ಈ ಕಿಕ್ಕೇರಿ ಕೇಂದ್ರಕ್ಕೆ ಖೇಲೋ ಇಂಡಿಯಾ ಕ್ರೀಡಾಂ ಗಣ ನಿರ್ಮಿಸಲು ಯತ್ನಿಸುವೆ. ಈ ಕೇಂದ್ರದಲ್ಲಿ ಅಂತರಾಷ್ಟ್ರೀಯ ಕ್ರೀಡಾಪಟುಗಳು ಇದ್ದು ಮತ್ತಷ್ಟು ಕ್ರೀಡಾಪಟುಗಳು ಕವಿ ಕೆಎಸ್‌ನ ಅವರಂತೆ ವಿಶ್ವಮಟ್ಟದಲ್ಲಿ ಬೆಳಗಲಿ ಎಂಬುದು ತನ್ನ ಆಶಯವಾಗಿದೆ ಎಂದು ನುಡಿದರು. ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ್‌ಗೌಡ ಮಾತನಾಡಿ, ಪುತಿನ, ಕೆ.ಎಸ್‌ನ ಜಿಲ್ಲೆಯ 2 ಕಣ್ಣುಗಳಂತಿದ್ದು, ಕಿಕ್ಕೇರಿಯಲ್ಲಿ ಮೊದಲು ಬಯಲು ರಂಗಮಂದಿರ ಆಗಬೇಕು. ಗ್ರಾಮಾಂತರ ಪ್ರದೇಶದಲ್ಲಿ ಕೆಎಸ್‌ನ ಕಾರ್ಯಕ್ರಮ ನಡೆಯಬೇಕು ಎಂದು ತಿಳಿಸಿದರು.

ಮೈಸೂರು ಆಕಾಶವಾಣಿ ಕೇಂದ್ರದ ಸಹಾಯಕ ನಿರ್ದೇಶಕ ಟಿ.ಬಿ.ವಿದ್ಯಾ ಶಂಕರ್ ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿ ಕೆಎಸ್‌ನ ಕುರಿತು ಕಾರ್ಯಕ್ರಮ ನಡೆದರೆ ಕನ್ನಡ ಭಾಷೆ, ಸಾಹಿತ್ಯ ಉಳಿಯಲಿದೆ. ಆಕಾಶವಾಣಿ ಕೇಂದ್ರಕ್ಕೆ ಕೆಎಸ್‌ನ ಜಾಗೃತಿ ಮೂಡಿಸುವ ಅವಕಾಶ ಕಲ್ಪಿಸಿಕೊಟ್ಟಿರುವ ಟ್ರಸ್ಟ್ ಒಳ್ಳೆಯ ಆಲೋಚನೆ ಇಟ್ಟುಕೊಂಡಿದೆ ಎಂದು ಹೇಳಿದರು.

ಟ್ರಸ್ಟಿ ಸುರೇಶ್ ಮಾತನಾಡಿ, ಕೆ.ಎಸ್.ನ ನೆನಪು ಶಾಶ್ವತವಾಗಿರಲು ಮೊದಲು ಕೆಎಸ್.ನ ಸರೋವರ ಎಂದು ಕೆರೆಗೆ ನಾಮಕರಣವಾಗಬೇಕು. ರಂಗಮಂದಿರವಾಗಬೇಕು. ಸ್ವಾಗತ ಕಮಾನು ನಿರ್ಮಾಣವಾಗಬೇಕಿದೆ. ಎಲ್ಲವೂ ಆದರೆ ಇದು ಪ್ರವಾಸೋದ್ಯಮ ಕೇಂದ್ರವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಟ್ರಸ್ಟ್ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಕೆ.ಎಸ್.ನ ಗೀತೆಗಳನ್ನು ಹಾಡುತ್ತ ಜನರ ಮನಮುಟ್ಟುವಂತೆ ಮಾತನಾಡುತ್ತ, ಕೆ.ಎಸ್.ನ ಹೆಸರು ಅಂತರಾಷ್ಟ್ರೀಯ ಮಟ್ಟಕ್ಕೆ ತಲುಪುವಂತೆ ಅಮೇರಿಕಾ ಮತ್ತಿತರ ದೇಶಗಳಲ್ಲಿ ಕೆಎಸ್.ನ ರಥಯಾತ್ರೆ ಗೀತ ಗಾಯನ ಮಾಡಲಾಗಿದೆ. ನಮ್ಮೂರಿನ ಚೆಂದ ಹೆಚ್ಚಿಸಿದ ಮೈಸೂರು ಮಲ್ಲಿಗೆಯ ಕಂಪಿನ ಕವಿ ಕೆ.ಎಸ್.ನ ಕೆಲಸಗಳು ಮೊದಲು ಆಗಲು ಎಲ್ಲರ ಸಹಕಾರ ಬೇಕಿದೆ ಎಂದು ವಿನಂತಿಸಿದರು.

ಸಾಹಿತಿ ಎಸ್.ಬಿ.ಶಂಕರೇಗೌಡ ಕೆ.ಎಸ್.ನ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕೆಎಸ್‌ನ ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ, ಕೆಎಸ್‌ನ ಗೀತಗಾಯನ ಹಾಡಿದ ಮಕ್ಕಳಿಗೆ ನೆನಪಿನ ಕಾಣಿಕೆ ನೀಡಲಾಯಿತು.

ತಾ. ಕ್ಷೇತ್ರ ಶಿಕ್ಷಣಾಧಿಕಾರಿ ವೈಕೆ. ತಿಮ್ಮೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ವಿ. ನಂದೀಶ್, ಟ್ರಸ್ಟಿ ಎ.ಸಿ.ಹಲಗೇಗೌಡ, ಪ್ರಾಂಶುಪಾಲ ಸಹದೇವು, ಉಪಪ್ರಾಂಶುಪಾಲ ಚಲುವನಾರಾಯಣಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಐಕನಹಳ್ಳಿ ಕೃಷ್ಣೇಗೌಡ, ಕ್ಷೇತ್ರ ಸಮನ್ವಯಾಧಿಕಾರಿ ಎಚ್.ಕೆ.ಮಂಜುನಾಥ್, ಮುಖ್ಯಶಿಕ್ಷಕಿ ಮಮತಾ, ಎಪಿಎಂಸಿ ನಿರ್ದೇಶಕ ಮಧು, ಸಂಗೀತ ಶಿಕ್ಷಕ ವಿನಾಯಕ ಹೆಗ್ಗಡೆ, ಎನ್‌ಎಸ್‌ಎಸ್ ಘಟಕಾಧಿಕಾರಿ ಕುಮಾರಸ್ವಾಮಿ, ಎನ್‌ಸಿಸಿ ಯೋಜನಾಧಿಕಾರಿ ಎಸ್.ಎಂ.ಬಸವರಾಜು, ಪುತಿನ ಟ್ರಸ್ಟ್ ಟ್ರಸ್ಟಿ ಕೆ.ಜೆ.ನಾರಾಯಣ, ಶಿವರಾಮು ಹಾಜರಿದ್ದರು.

ಮನಗೆದ್ದ ಮಕ್ಕಳ ಸಮೂಹ ಗಾಯನ

ಕಿಕ್ಕೇರಿ ಕೆಪಿಎಸ್ ಶಾಲಾ ಕಾಲೇಜು ಮಕ್ಕಳು ಕೆಎಸ್‌ನ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ನೆರೆದಿದ್ದ ಪ್ರೇಕ್ಷಕರ ಮನಗೆದ್ದರು. ಪ್ರಖ್ಯಾತ ಗಾಯಕರಾದ ಕಿಕ್ಕೇರಿ ಕೃಷ್ಣಮೂರ್ತಿ, ನಗರ ಶ್ರೀನಿವಾಸ ಉಡುಪ, ಅಪ್ಪಗೆರೆ ತಿಮ್ಮರಾಜು, ಎ.ಡಿ. ಶ್ರೀನಿವಾಸ್. ಹಂಸಿನಿ, ಅಮೂಲ್ಯ, ನಾಗಮಂಗಲ ಶ್ರೀನಿವಾಸ ಮತ್ತಿತರರು 'ನಿನ್ನಲುಮೆಯಿಂದಲೇ, ದೀಪವು ನಿನ್ನದೆ ಗಾಳಿಯೂ ನಿನ್ನದೆ, ಹೆಂಡತಿಯೊಬ್ಬಳು ಮನೆಯಲ್ಲಿದ್ದರೆ, ಅಂತಿಂಥ ಹೆಣ್ಣು ನೀನಲ್ಲ. ನಾವು ಭಾರತೀಯರು, ನಗುವಾಗ ನಕ್ಕು ಅಳುವಾಗ ಅತ್ತು, ರಾಯರು ಬಂದರು ಮಾವನ ಮನೆಗೆ' ಮತ್ತಿತರ ಗೀತೆಗಳನ್ನು ಹಾಡಿ ಸಂಗೀತಾಸಕ್ತರಲ್ಲಿ ಕೆಎಸ್‌ನ ನೆನಪು ಅಚ್ಚಳಿಯದೆ ಉಳಿಯುವಂತೆ ಮಾಡಿ ಮನಕ್ಕೆ ರಸದೌತಣ ಉಣಬಡಿಸಿದರು.

ಅನುಸೂಚಿತ ಜಾತಿ, ಬುಡಕಟ್ಟು ಸಮುದಾಯಗಳ ಜೊತೆ ಆಯೋಗ ಸದಾ ಇರುತ್ತದೆ: ಡಾ.ಎಲ್.ಮೂರ್ತಿ



ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಾ.ಎಲ್.ಮೂರ್ತಿ ಮಾತನಾಡುತ್ತಿರುವುದು.

ಮಂಡ್ಯ: ಶೋಷಣೆಗೆ ಒಳಗಾದವರು ಯಾರೇ ಆಗಿರಲಿ ಆಯೋಗಕ್ಕೆ ಬಂದು ಪ್ರಕರಣ ದಾಖಲಿಸಬಹುದು. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಯೋಗ ಸದಾ ನಿಮ್ಮೊಂದಿಗೆ ಇರುತ್ತದೆ ಎಂದು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಯೋಗ ಅಧ್ಯಕ್ಷ ಡಾ. ಎಲ್.ಮೂರ್ತಿ ಹೇಳಿದರು.

ಬುಧವಾರ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಳೆದ 20 ದಿನಗಳ ಹಿಂದೆ ನಾನು ಆಯೋಗಕ್ಕೆ ನೂತನ ಅಧ್ಯಕ್ಷನಾಗಿ ನೇಮಕಗೊಂಡಿದ್ದೇನೆ, ಆಯೋಗದಲ್ಲಿ ಒಟ್ಟಾರೆ 1503 ಪ್ರಕರಣಗಳು ಹಾಗೂ 4943 ಪತ್ರ ವ್ಯವಹಾರದ ಕಡತಗಳು ಬಾಕಿ ಇವೆ ಎಲ್ಲವನ್ನೂ ಶೀಘ್ರವಾಗಿ ವಿಲೇವಾರಿ ಮಾಡಲು ಶ್ರಮಿಸುತ್ತೇನೆ ಎಂದು ಹೇಳಿದರು.

ತಿಂಗಳಿಗೆ ರಾಜ್ಯದ 3 ಜಿಲ್ಲೆಗಳಲ್ಲಿ ಪ್ರಗತಿ ಪರಿಶೀಲನೆ ಮಾಡಲಾಗುವುದು ಅದಾಲತ್ ಮಾದರಿಯಲ್ಲಿ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಜಿಲ್ಲಾ ಹಂತದಲ್ಲಿಯೇ ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತದೆ. ಮಂಡ್ಯ ಜಿಲ್ಲೆಯ ಹೆಚ್ಚಾಗಿ ಕಂದಾಯ, ದೌರ್ಜನ್ಯ, ಖಾತೆ, ಪಾಣಿ, ಸ್ಮಶಾನದ ವಿಚಾರಗಳ ಕುರಿತಾಗಿ ಪ್ರಕರಣಗಳು ದಾಖಲಾಗಿವೆ ಎಂದರು.

ಪರಿಶಿಷ್ಟ ಜನಾಂಗದವರಿಗೆ ಸ್ಮಶಾನ ನೀಡುವಾಗ ಸರ್ವೆ ನಡೆಸಿ ಯಾವ ಗ್ರಾಮದಲ್ಲಿ ಹೆಚ್ಚಾಗಿ ಕೂಲಿ ಕಾರ್ಮಿಕರು ಹಾಗೂ ಸ್ವತಃ ಜಮೀನು ಇಲ್ಲದ ಪರಿಶಿಷ್ಟರಿಗೆ ಪ್ರಾಮುಖ್ಯತೆಯ ಆಧಾರದ ಮೇಲೆ ಸ್ಮಶಾನ ಮಂಜೂರು ಮಾಡಿ, ಅಧಿಕಾರಿಗಳು ಸ್ಮಶಾನ ಮಂಜೂರು ಮಾಡಿ ಸುಮ್ಮನೆ ಬಿಡುವಂತಿಲ್ಲ ಸ್ಮಶಾನವನ್ನು ಅಭಿವೃದ್ಧಿ ಮಾಡುವುದು ಸಹ ಅಧಿಕಾರಿಗಳ ಜವಾಬ್ದಾರಿ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಅಧಿಕಾರಿಗಳು ಧ್ವನಿ ಇಲ್ಲದವರಿಗೆ ಧ್ವನಿಯಾಗಬೇಕು. ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಒಟ್ಟು 102 ಇದೆ ಅದರಲ್ಲಿ 85 ಸ್ವಂತ ಕಟ್ಟಡ 17 ಬಾಡಿಗೆ ಕಟ್ಟಡಗಳು ಇದೆ. 2025–26ನೇ ಸಾಲಿನಲ್ಲಿ 10958 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 1301 ಸ್ಮಶಾನಗಳು ಇದ್ದು ಪ್ರತ್ಯೇಕವಾಗಿ 195 ಸ್ಮಶಾನಗಳು ಪರಿಶಿಷ್ಟ ಜಾತಿ ಜನಾಂಗದವರಿಗೆ ಸೇರಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಕಾಲೋನಿಗಳ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಗತಿ ಕಾಲೋನಿ ಯೋಜನೆ ಇಡೀ 2023 ರಿಂದ ಸದರಿ ವರ್ಷದವರೆಗೂ 222 ಕಾಮಗಾರಿಗಳನ್ನು ಗುರುತಿಸಲಾಗಿದೆ ಅದರಲ್ಲಿ 97 ಕಾಮಗಾರಿಗಳು ಮುಕ್ತಾಯಗೊಂಡಿದ್ದು 124 ಕಾಮಗಾರಿಗಳು ಪ್ರಗತಿ ಹಂತದಲ್ಲಿದೆ

ನಂತರ ಸಂಘ ಸಂಸ್ಥೆಗಳಿಂದ ಅಹವಾಲುಗಳನ್ನು ಸ್ವೀಕಾರ ಮಾಡಿದರು. ಸಭೆ ಆರಂಭಕ್ಕೂ ಮುನ್ನ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಇರುವ ಉದ್ಯಾನವನದಲ್ಲಿ ನಿರ್ಮಿಸಲಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ್‌ರಾಮ್ ಅವರ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿದರು.

ನ.1 ರಂದು ಮಂಡ್ಯದಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ

ಮಂಡ್ಯ, ಅ.29– ಜಿಲ್ಲಾಡಳಿತ ವತಿಯಿಂದ ನ.1 ರಂದು 70ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯನ್ನು ಬೆಳಿಗ್ಗೆ 9 ಗಂಟೆಗೆ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯ ಸ್ವಾಮಿ ಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವದ ಸಂದೇಶ ತಿಳಿಸಲಿದ್ದಾರೆ.

ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ ಮತ್ತು ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಶಾಸಕರುಗಳು, ವಿಧಾನ ಪರಿಷತ್ ಸದಸ್ಯರುಗಳು ಸೇರಿದಂತೆ ಪ್ರಮುಖ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಂಡ್ಯ ಶಾಸಕ ಪಿ.ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಲಾಪ ಬಹಿಷ್ಕರಿಸಿ ವಕೀಲರ ಪ್ರತಿಭಟನೆ



ವಕೀಲರು ಧರಣಿ ನಡೆಸಿ ತಹಸೀಲ್ದಾರ್ ಲೋಕೇಶ್ ಅವರಿಗೆ ಮನವಿ ಸಲ್ಲಿಸಿದರು.

ಕೆ.ಆರ್.ಪೇಟೆ,ಅ.29– ಮೈಸೂರಿನ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಅವರು ನ್ಯಾಯಮೂರ್ತಿಗಳ ವಿರುದ್ಧ ಅವಹೇಳನಕಾರಿಯಾಗಿ ಮಾಧ್ಯಮಗಳ ಮೂಲಕ ಟೀಕೆ ಮಾಡಿರುವುದನ್ನು ಖಂಡಿಸಿ ತಾಲೂಕು ವಕೀಲರ ಸಂಘದ ಪದಾಧಿಕಾರಿಗಳು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ತಾಲೂಕು ಕಚೇರಿ ಮುಂದೆ ಧರಣಿ ನಡೆಸಿ ತಹಸೀಲ್ದಾರ್ ಲೋಕೇಶ್ ಅವರಿಗೆ ಮನವಿ ಸಲ್ಲಿಸಿದರು.

ನ್ಯಾಯಾಂಗವು ಸಂವಿಧಾನ ಬದ್ಧವಾಗಿ ಸಂವಿಧಾನದಲ್ಲಿ ಅಡಕವಾಗಿರುವ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಂವಿಧಾನದ ಇತಿಮಿತಿಯಲ್ಲಿ ಆದೇಶಗಳನ್ನು ನೀಡುತ್ತಿದ್ದರೂ ಸಹ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಅವರು ಅವಶ್ಯಕವಾಗಿ ನ್ಯಾಯಾಂಗದ ತೀರ್ಮಾನ ಮತ್ತು ನ್ಯಾಯಾಧೀಶರ ಆದೇಶಗಳನ್ನು ಅವಹೇಳನಕಾರಿಯಾಗಿ ಟೀಕಿಸುವ ಮೂಲಕ ನ್ಯಾಯಾಧೀಶರ ನೈತಿಕ ಸ್ಥೈರ್ಯವನ್ನು ಕುಗ್ಗಿಸುವ ರೀತಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿರುವುದು ಇಡೀ ನ್ಯಾಯಾಂಗ ವ್ಯವಸ್ಥೆಗೆ ದಕ್ಕೆ ಉಂಟು ಮಾಡುವಂತಿದೆ ಎಂದು ಪ್ರತಿಭಟನಾಕಾರರು ಆಪಾದಿಸಿದರು.

ತಹಶೀಲ್ದಾರ್ ಲೋಕೇಶ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಆರ್.ನಾಗೇಗೌಡ, ಪ್ರಧಾನ ಕಾರ್ಯದರ್ಶಿ ಎಸ್.ಜೆ.ಮಂಜೇಗೌಡ, ಉಪಾಧ್ಯಕ್ಷ ಎಸ್.ಎಸ್.ಪುರುಷೋತ್ತಮ್ ಇದ್ದರು.

ಒಂದನೇ ಪುಟದಿಂದ

ಕಬಿನಿ ಯೋಜನೆ ಪೂರ್ಣ



ಬೆಳೆಯುತ್ತಿರುವ ನಗರವಾಗಿದ್ದು, 2011ರ ಜನಗಣತಿಯಂತೆ ನಗರ ಜನಸಂಖ್ಯೆ 9,20,550 ಇದ್ದು, ಪ್ರಸ್ತುತ 13 ಲಕ್ಷಕ್ಕೆ ಏರಿಕೆಯಾಗಿರುವುದನ್ನು ಗಮನದಲ್ಲಿರಿಸಿಕೊಂಡು ಯೋಜನೆಯನ್ನು ರೂಪಿಸಲಾಗಿತ್ತು. ಅಲ್ಲದೇ ಹೊಸದಾಗಿ ಸೃಜಿಸಿರುವ ಶ್ರೀರಾಂಪುರ, ಬೋಗಾದಿ, ಕಡಕೊಳ ಪಟ್ಟಣ ಪಂಚಾಯಿತಿ ಹಾಗೂ ಹೂಟಗಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ 1,45,400 ಜನಸಂಖ್ಯೆಯಿದ್ದು, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ 50,057 ನಿವೇಶನಗಳು ಮತ್ತು ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಖಾಸಗಿ ಬಡಾವಣೆಗಳಲ್ಲಿ 53,163 ಸೇರಿದಂತೆ ಒಟ್ಟು 1,03,220 ನಿವೇಶನಗಳಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ 4,95,400 ಜನರಿಗೆ ನೀರಿನ ಸಮಸ್ಯೆಯನ್ನು ನೀಗಿಸುವುದು ಕಬಿನಿ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

3 ಹಂತದ ಯೋಜನೆ: ಪ್ರಸ್ತುತ ಮೈಸೂರು ನಗರಕ್ಕೆ ಬೆಳಗೊಳ, ಹೊಂಗಳ್ಳಿ, ಮೇಳಾಪುರ ಹಾಗೂ ಕಬಿನಿ ಮೂಲ ಸ್ಥಾವರಗಳಿಂದ ಒಟ್ಟು 300 ಎಂಎಲ್‌ಡಿ (Mega liters per Day) ನೀರು ಸರಬರಾಜು ಮಾಡಲಾಗುತ್ತಿದೆ. ಆದಾಗ್ಯೂ ನಗರದ ದಕ್ಷಿಣ ಭಾಗದ ಬಡಾವಣೆಗಳಿಗೆ ನೀರಿನ ಸಮಸ್ಯೆ ಎದುರಾಗುತ್ತಿದ್ದರಿಂದ ಮೂಲತಃ 108 ಕೋಟಿ ರೂ. ವೆಚ್ಚದಲ್ಲಿ 3 ಹಂತದ ಕಬಿನಿ ನದಿ ಮೂಲದಿಂದ ನೀರು ಪೂರೈಸಲು ಯೋಜನೆಯನ್ನು ರೂಪಿಸಲಾಗಿತ್ತು. ಅದರಂತೆ 184 ಎಂಎಲ್‌ಡಿ ಸಾಮರ್ಥ್ಯಕ್ಕೆ ಯಂತ್ರಾಗಾರಗಳನ್ನು ಅಳವಡಿಸಲಾಗಿದೆ.

ಹಣಕಾಸು ಅನುದಾನ: ಕಬಿನಿ ನೀರು ಸರಬರಾಜು ಯೋಜನೆಗೆ ಮಹಾನಗರ ಪಾಲಿಕೆಯ 13ನೇ ಹಣಕಾಸು ಯೋಜನೆಯಲ್ಲಿ 3.52 ಕೋಟಿ ರೂ. 14ನೇ ಹಣಕಾಸು ಯೋಜನೆಯಡಿ 5.38 ಕೋಟಿ ರೂ., 15 ಹಣಕಾಸು ಯೋಜನೆಯಡಿ 7.56 ಕೋಟಿ ರೂ. ಮತ್ತು ಪಾಲಿಕೆ ನಿಧಿಯಿಂದ 1.32 ಕೋಟಿ ರೂ.ಗಳನ್ನು ಭರಿಸಿದ್ದು ಮೈಸೂರು ನಗರಾಭಿವೃದಿ ಪ್ರಾಧಿಕಾರದಿಂದ 14 ಕೋಟಿ ರೂ. ವಂತಿಕೆಯನ್ನು ಭರಿಸಲಾಗಿದೆ. ಈಗ 2ನೇ ಹಂತದ ಕಾಮಗಾರಿ ಪೂರ್ಣಗೊಂಡಿದ್ದು ಇದುವರೆಗೆ ಒಟ್ಟು ಸುಮಾರು 33 ಕೋಟಿ ರೂ.ಗಳನ್ನು ಖರ್ಚುಮಾಡಲಾಗಿದೆ.

60 ರಿಂದ 110 ಎಂಎಲ್‌ಡಿ ಸಾಮರ್ಥ್ಯಕ್ಕೆ ಏರಿಕೆ: 2ನೇ ಹಂತದ ಕಾಮಗಾರಿ ಪೂರ್ಣಗೊಂಡಿರುವುದರಿಂದ ಕುಡಿಯುವ ನೀರಿನ ಪಂಪಿಂಗ್ ಸಾಮರ್ಥ್ಯವನ್ನು 60 ರಿಂದ 110 ಎಂಎಲ್‌ಡಿ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿದ್ದು, ಇದರಿಂದ ಆ ಭಾಗದ ಬಡಾವಣೆಗಳಿಗೆ 50 ಎಂಎಲ್‌ಡಿ ಹೆಚ್ಚುವರಿ ನೀರು ಸರಬರಾಜು ಮಾಡಿದಂತಾಗಿದೆ ಅಲ್ಲದೇ ಶುದ್ಧೀಕರಣ ಘಟಕ (Water Treatment Plant) ದ ಸಾಮರ್ಥ್ಯವನ್ನು 60 ರಿಂದ 120 ಎಂಎಲ್‌ಡಿಗೆ ಹೆಚ್ಚಿಸಿದಂತಾಗಿದೆ.

ಎಲ್ಲೆಲ್ಲಿಗೆ ನೀರು: ಕಬಿನಿ ಯೋಜನೆಯಿಂದಾಗಿ ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯ ಶ್ರೀರಾಂಪುರ, ಜೆ.ಪಿ.ನಗರ, ಕುವೆಂಪುನಗರ, ಸರಸ್ವತಿಪುರಂ, ಅಶೋಕಪುರಂ, ಶಾರದದೇವಿನಗರ, ಟಿ.ಕೆ. ಲೇಔಟ್, ರಾಮಕೃಷ್ಣನಗರ, ದಟ್ಟಗಳ್ಳಿ, ಸೇರಿದಂತೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ 23 ಬಡಾವಣೆಗಳು, ಅದಕ್ಕೆ ಹೊಂದಿಕೊಂಡಂತಿರುವ ರಮಾಬಾಯಿನಗರ, ಮಹದೇವಪುರ, ವಿಶ್ವವಿದ್ಯಾನಿಲಯ ಬಡಾವಣೆ, ಲಿಂಗಾಂಬುದಿಪಾಳ್ಯ ಸೇರಿ 8 ಖಾಸಗಿ ಬಡಾವಣೆಗಳು, ಆರ್.ಟಿ.ನಗರ, ಸೋಮನಾಥ ಬಡಾವಣೆ, ಬೋಗಾದಿ, ರೂಪಾನಗರ, ಬಿಇಎಂಎಲ್ ಲೇಔಟ್, ನ್ಯಾಯಾಂಗ ಬಡಾವಣೆ, ರವಿಶಂಕರ್ ಬಡಾವಣೆ ಹಾಗೂ ವಿಜಯನಗರ 4ನೇ ಹಂತದ ಬಡಾವಣೆಗಳ ನಿವಾಸಿಗಳಿಗೆ ನೀರು ಸರಬರಾಜು ಮಾಡಲಾಗುವುದು.

ಯಂತ್ರಾಗಾರ: ಈ ಯೋಜನೆಗಾಗಿ ದೂರ ಉಪಯಂತ್ರಾಗಾರದಿಂದ ಕೆಂಬಳ್ ಯಂತ್ರಾಗಾರದವರೆಗೆ 11 ಕೆವಿ ಎಕ್ಸ್‌ಪ್ರೆಸ್ ಸಾಮರ್ಥ್ಯದ ಭೂಗತ ಕೇಬಲ್ ಅಳವಡಿಸಿದ್ದು, ಕೆಂಬಾಳ ಯಂತ್ರಾಗಾರದಲ್ಲಿ ಹೊಸದಾಗಿ 2x2500 ಹೆಚ್‌ಪಿ, ಪಿಂಜರಾಪೋಲ್ ಐಬಿಪಿಎಸ್‌ನಲ್ಲಿ 2x1750 ಹೆಚ್‌ಪಿ ಬೂಸ್ಟರ್ ಪಂಪಿಂಗ್ ಯಂತ್ರ ಅಳವಡಿಸಿದ್ದು ಭವಿಷ್ಯದ ದಿನಗಳಲ್ಲಿ ಅವಶ್ಯವಿರುವ ನೀರಿನ ಸರಬರಾಜು ಪೂರೈಸಲು ಸಹಕಾರಿಯಾಗಿದೆ.

ಸೆಮಿ ಕಂಡಕ್ಟರ್ ಘಟಕಗಳು ಸ್ಥಾಪನೆ

ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿ ರಸ್ತೆಗಳು ಗುಂಡಿ ಬಿದ್ದಿದ್ದು, ಭಾರೀ ಅವ್ಯವಸ್ಥೆ ಎದುರಾಗಿರುವ ಸಂಬಂಧ 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿರುವ ವರದಿ ಬಗ್ಗೆ ಪ್ರತಿಕ್ರಿಯೆ ನೀಡಿದ ಎಂ.ಬಿ. ಪಾಟೀಲ್, ಮೈಸೂರಿನ ಎಲ್ಲಾ ಕೈಗಾರಿಕಾ ಪ್ರದೇಶದಲ್ಲಿ ಗುಂಡಿ ಮುಕ್ತ ರಸ್ತೆ ನಿರ್ಮಾಣ ಮಾಡುವ ಸಂಬಂಧ ಸರ್ಕಾರದ ಮಟ್ಟದಲ್ಲಿ ಪ್ರಕ್ರಿಯೆಗಳು ಆರಂಭವಾಗಿದೆ ಎಂದು ಹೇಳಿದರು.

ರಸ್ತೆ ನಿರ್ಮಾಣ ಮಾಡುವ ಸಂಬಂಧ ಕೆಐಎಡಿಬಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮಹೇಶ್ ಅವರು ಟೆಂಡರ್ ಸೇರಿದಂತೆ ಇತರೆ ಪ್ರಕ್ರಿಯೆ ಆರಂಭಿಸಿದ್ದಾರೆ ಎಂದು ಹೇಳಿದರು.

ಅಮೇರಿಕಾದಲ್ಲಿರುವ ವಿಶ್ವದ ಪ್ರತಿಷ್ಠಿತ ಏರ್ ಬಸ್ ವಿಮಾನ ತಯಾರಿಕಾ ಕಾರ್ಖಾನೆ ಬೋಯಿಂಗ್‌ಗೆ ಮೈಸೂರಿನ ರಂಗ ಸನ್ ಏರೋಸ್ಪೇಸ್ ಅಗತ್ಯ ಬಿಡಿಭಾಗಗಳನ್ನು ರಫ್ತು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ರಂಗ ಸನ್ಸ್‌ಗೆ ಇಂದು ಭೇಟಿ ನೀಡಿದ ಎಂ.ಬಿ.ಪಾಟೀಲ್ ಅವರು ಅಲ್ಲಿನ ಉತ್ಪನ್ನಗಳ ಬಗ್ಗೆ ಸಮಗ್ರ ಮಾಹಿತಿ ಪಡೆದುಕೊಂಡರು.

ಬೋಯಿಂಗ್ ಮಾತ್ರವಲ್ಲದೆ ವಿಶ್ವದ ಹಲವು ಪ್ರತಿಷ್ಠಿತ ಕೈಗಾರಿಕೆಗಳಿಗೆ ಅಗತ್ಯ ಬಿಡಿಭಾಗಗಳನ್ನು ತಯಾರಿಸಿ ರಫ್ತು ಮಾಡುತ್ತಿದ್ದೇವೆ ಎಂದು ರಂಗ್ ಸನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ ಸಚಿವರಿಗೆ ಸಮಗ್ರ ಮಾಹಿತಿ ನೀಡಿದರು.

ರಂಗ ಸನ್ಸ್ ಏರೋಸ್ಪೇಸ್ ಅತ್ಯಾಧುನಿಕ ಘಟಕ ಉದ್ಘಾಟನೆ: ಈ ವೇಳೆ ರಂಗ್ ಸನ್ಸ್ ಏರೋಸ್ಪೇಸ್ ಕಂಪನಿಯ ನೂತನ ಮತ್ತು ಅತ್ಯಾಧುನಿಕ ಘಟಕವನ್ನು ಎಂ.ಬಿ.ಪಾಟೀಲ್ ಉದ್ಘಾಟಿಸಿದರು. ಅಲ್ಲದೆ ಕಂಪನಿಯಲ್ಲಿ ಕೌಶಲ್ಯ ತರಬೇತಿ ಪಡೆದಿರುವ 60 ಐಟಿಐ ಪದವೀಧರರಿಗೆ ಪ್ರಮಾಣ ಪತ್ರ ವಿತರಿಸಿದರು.

ಈ ವೇಳೆ ಮಾತನಾಡಿದ ಎಂ.ಬಿ. ಪಾಟೀಲ್, ಅಗರ ಬತ್ತಿ ತಯಾರಿಕೆ ನಂತರ ಈ ಸಂಸ್ಥೆ ವಿಮಾನಕ್ಕೆ ಅಗತ್ಯ ಭಾಗಗಳನ್ನು ತಯಾರಿಸಿ ನೀಡುತ್ತಿದೆ. ಈ ಮೂಲಕ ಸಂಸ್ಥೆ ಮತ್ತಷ್ಟು ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು.

ಭಾರತದಲ್ಲಿ ಕರ್ನಾಟಕ ರಾಜ್ಯ ಏರೋಸ್ಪೇಸ್ ಕ್ಷೇತ್ರಕ್ಕೆ ಶೇಕಡ 65 ರಷ್ಟು ಪಾಲು ನೀಡುತ್ತಿದೆ. ಅಲ್ಲದೆ ಜಾಗತಿಕ ಮಟ್ಟದಲ್ಲಿ ಮೂರನೇ ಅತಿ ದೊಡ್ಡ ಎಕೋ ಸಿಸ್ಟಂ ಹೊಂದಿದೆ ಎಂಬ ಮಾಹಿತಿ ನೀಡಿದರು.

ಒಟ್ಟಾರೆ ಕರ್ನಾಟಕದಲ್ಲಿ ಕೈಗಾರಿಕಾ ಬೆಳವಣಿಗೆಯಾಗುತ್ತಿದೆ. ಇದಕ್ಕೆ ನಮ್ಮ ಸರ್ಕಾರ ಅಗತ್ಯ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದ ಎಂ.ಬಿ. ಪಾಟೀಲ್ ಅವರು, ರಂಗಸನ್ಸ್ ಕಂಪನಿ ಜಾಗತಿಕ ಗುಣಮಟ್ಟಕ್ಕೆ ತಕ್ಕಂತೆ ಪ್ರಿಸಿಷನ್ ಉತ್ಪಾದನೆಯಲ್ಲಿ ತೊಡಗಿರುವುದು ಇದರ ಯಶಸ್ವಿಗೆ ಸ್ಪಷ್ಟ ಉದಾಹರಣೆಯಾಗಿದೆ. ಈ ಮೂಲಕ ಭಾರತದ ಏರೋಸ್ಪೇಸ್ ಕಂಪನಿಗಳು ಜಾಗತಿಕ ಮಾರುಕಟ್ಟೆಯ ಬೇಡಿಕೆ ಪೂರೈಸಲು ಸಮರ್ಥವಾಗಿದೆ ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೇ ಎಂದು ಪ್ರಶ್ನಿಸಿದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಸೆಲ್ವಕುಮಾರ್, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರೂ ಆದ ಕೈಗಾರಿಕಾ ಅಭಿವೃದ್ಧಿಯ ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಮಹೇಶ್, ಬೋಯಿಂಗ್ ಕಂಪನಿಯ ಹಿರಿಯ ಅಧಿಕಾರಿ ಅಶ್ವಾನ್ ಭಾಗರ್ವ್, ಸಿಒಒ ಕಾಂತೇಶ್ ಹಾಗೂ ಇತರರು ಈ ವೇಳೆ ಹಾಜರಿದ್ದರು. ಇದೇ ಸಂದರ್ಭದಲ್ಲಿ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಸೆಯಾಂಟ್ ಕಾರ್ಖಾನೆಗೂ ಭೇಟಿ ನೀಡಿದ ಸಚಿವ ಎಂ.ಬಿ.ಪಾಟೀಲ್ ಅವರು, ಕಂಪನಿಯ ಉನ್ನತ ಮಟ್ಟದ ವಿನ್ಯಾಸ, ಡಿಜಿಟಲ್ ಟ್ವಿನ್ ಕ್ರಿಯೇಷನ್ ಸೇರಿದಂತೆ ಇತರೆ ಮಾಹಿತಿಯನ್ನು ಕಂಪನಿಯ ಅಧಿಕಾರಿಗಳಿಂದ ಪಡೆದರು.

ಕೈಗಾರಿಕೆಗಳ ಹಾದಿ ತಪ್ಪಿಸುತ್ತಿದೆ

ಆಸಕ್ತಿ ತೋರುತ್ತಾರೆ. ಈ ಸಂಬಂಧ ಸರ್ಕಾರದ ಜೊತೆ ಮಾತುಕತೆ ಕೂಡ ಯಶಸ್ವಿ ಆಗುತ್ತದೆ. ಆದರೆ ಉದ್ಯಮಿಗಳು ದೆಹಲಿಗೆ ಹೋದ ನಂತರ ಬದಲಾಗುತ್ತಾರೆ ಎಂದು ಆಪಾದಿಸಿದರು. ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು ಕೇಂದ್ರದ ಬಿಜೆಪಿ ಸರ್ಕಾರ ಉದ್ಯಮಿಗಳ ಹಾದಿ ತಪ್ಪಿಸುತ್ತಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೇ ಎಂದು ಪ್ರಶ್ನಿಸಿದರು. ಕರ್ನಾಟಕದಿಂದ ಆಂಧ್ರಕ್ಕೆ ಗೂಗಲ್ ಎಐ ಹೋಗಲು ಕೇಂದ್ರ ಸರ್ಕಾರ ಕಾರಣವೇ ಹೊರತು ನಾವಲ್ಲ. ಆಂಧ್ರ ಪ್ರದೇಶದಲ್ಲಿ ಗೂಗಲ್ ಎಐ ಸ್ಥಾಪಿಸಲು ಚಂದ್ರಬಾಬು ನಾಯ್ಡು ಸರ್ಕಾರಕ್ಕೆ ಕೇಂದ್ರದ ಬಿಜೆಪಿ ಸರ್ಕಾರ 22 ಸಾವಿರ ಕೋಟಿ ಅನುದಾನ ನೀಡುತ್ತಿದೆ. ಮೋದಿ ಸರ್ಕಾರದ ಜೊತೆ ಭಾಗಿಯಾಗಿರುವ ಟಿಡಿಪಿ ಮೈತ್ರಿ ನಾಯಕ ಚಂದ್ರಬಾಬು ನಾಯ್ಡುಗೆ ಕೇಂದ್ರ ಸರ್ಕಾರ ನೀಡುತ್ತಿರುವ ಗಿಫ್ಟ್ ಇದು ಎಂದು ಎಂ.ಬಿ.ಪಾಟೀಲ್ ದೂರಿದರು.

ಗುಜರಾತ್‌ನಲ್ಲಿ ಸೆಮಿ ಕಂಡಕ್ಟರ್ ಸ್ಥಾಪಿಸಲು ಕೇಂದ್ರ ಸರ್ಕಾರ ಶೇಕಡ 50ರಷ್ಟು ಅನುದಾನ ನೀಡುತ್ತಿದೆ. ಅಂದರೆ 1 ಲಕ್ಷ ಕೋಟಿ ಬಂಡವಾಳ ಹೂಡಿದರೆ ಕೇಂದ್ರ ಸರ್ಕಾರ 50 ಸಾವಿರ ಕೋಟಿ ರೂ. ನೀಡುತ್ತದೆ. ಆದರೆ ಕರ್ನಾಟಕಕ್ಕೆ ಅನುದಾನ ನೀಡದ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತಳೆದಿದೆ ಎಂದು ಕಿಡಿಕಾರಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 10.22 ಲಕ್ಷ ಕೋಟಿ ಬಂಡವಾಳ ತಂದಿದೆ. ಈತನಕ ಯಾವುದೇ ಕಂಪನಿಗಳು ಬೇರೆ ರಾಜ್ಯಕ್ಕೆ ಹೋಗಿಲ್ಲ. ಈಗಾಗಲೇ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿರುವ ಕಂಪನಿಗಳು ರಾಜ್ಯದಲ್ಲಿ ಶೇಕಡ 65ರಷ್ಟು ಉದ್ಯಮ ಸ್ಥಾಪಿಸಿವೆ ಎಂದು ಹೇಳಿದರು.

ಚಾ.ನಗರದಲ್ಲಿ 1,500 ಕೋಟಿ ಹೂಡಿಕೆ

20 ಎಕರೆ ಭೂಮಿ ಕೇಳಿದೆ. ಆದರೆ ಅಲ್ಲಿ ಕಂಪನಿಗೆ ಹೊಂದಿಕೊಂಡಿರುವ ಭೂಮಿ ಕೃಷಿಗೆ ಮೀಸಲಾಗಿದೆ. ಈ ಹಿನ್ನೆಲೆಯಲ್ಲಿ ಕೃಷಿಯೇತರ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಮಸ್ಯೆ ಪರಿಹಾರ ಮಾಡಿ ಭೂಮಿ ನೀಡಲಾಗುವುದು ಎಂದು ಆಶ್ವಾಸನೆ ನೀಡಿದರು. 1988ರಿಂದ ಮೈಸೂರನ್ನು ಕೇಂದ್ರ ಕಚೇರಿಯಾಗಿ ಮಾಡಿಕೊಂಡಿರುವ ಕೇನ್ಸ್ ಟೆಕ್ನಾಲಜೀಸ್ ಏಳು ರಾಜ್ಯದಲ್ಲಿ ಅಸ್ತಿತ್ವ ಹೊಂದಿದೆ. 70 ಜನರಿಂದ ಆರಂಭವಾದ ಚಾಮರಾಜನಗರದ ಕಂಪನಿಯಲ್ಲಿ ಇಂದು 700 ಉದ್ಯೋಗಿಗಳಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಂಪನಿಯಲ್ಲಿ ಇಂದು 1,500 ಉದ್ಯೋಗಿಗಳಿದ್ದು, ಮೂರು ಖಂಡಗಳ 26 ದೇಶಗಳಲ್ಲಿ 250ಕ್ಕೂ ಹೆಚ್ಚು ಗ್ರಾಹಕ ಸಂಸ್ಥೆಗಳ ಜಾಲ ಹೊಂದಿದೆ ಎಂದರು. ವಿಜಯಪುರದ ಮುಳವಾಡ ಪಿಸಿಬಿ ಉತ್ಪಾದನಾ ಘಟಕ ಸ್ಥಾಪಿಸಬೇಕು. ಕೆಜಿಎಫ್‌ನಲ್ಲಿ ಕಂಪನಿಯ ಮತ್ತೊಂದು ಘಟಕ ಸ್ಥಾಪನೆ ಮಾಡಬೇಕು. ಇದಕ್ಕೆ ಅಗತ್ಯ ಭೂಮಿ ಸೇರಿದಂತೆ ಸೌಲಭ್ಯವನ್ನು ಸರ್ಕಾರ ನೀಡಲಿದೆ ಎಂದು ಭರವಸೆ ನೀಡಿದರು. ಕೇನ್ಸ್ ಟೆಕ್ನಾಲಜೀಸ್ ಕಾರ್ಯ ನಿರ್ವಾಹಕ ಉಪಾಧ್ಯಕ್ಷ ರಮೇಶ್ ಆರ್.ಕಣ್ಣನ್, ಅಧ್ಯಕ್ಷೆ ಸವಿತಾ ರಮೇಶ್, ನಿರ್ದೇಶಕ ಜಯರಾಂ ಪಿ.ಸಂಪತ್, ಸಿಇಒ ರಾಜೇಶ್ ಶರ್ಮಾ ಸೇರಿದಂತೆ ಇತರೆ ಅಧಿಕಾರಿಗಳು ಹಾಜರಿದ್ದರು.

ಖರ್ಗೆ ಮುಂದಿನ ಸಿಎಂ

ಬೇರೆ ಹೆಸರನ್ನು ಸೂಚಿಸಿದರೆ ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಬಣ ರಾಜಕೀಯ ತಾರಕಕ್ಕೇರುವ ಸಾಧ್ಯತೆಯೇ ಹೆಚ್ಚು ಎಂಬ ವಿಚಾರ ಕಾಂಗ್ರೆಸ್ ಹೈಕಮಾಂಡಿಗೂ ತಿಳಿದಿದೆ ಎನ್ನುವುದು ಕಾಂಗ್ರೆಸ್ಸಿನಲ್ಲಿ ಚರ್ಚೆಯಲ್ಲಿರುವ ವಿಷಯ. ಈ ನಡುವೆ 2028ರಲ್ಲಿ ಚುನಾವಣಾ ರಾಜಕೀಯದಿಂದ ಹಿಂದಕ್ಕೆ ಸರಿಯುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗೊಂದಲ ಮುಂದುವರಿದಿದೆ. ನನ್ನ ಹಿತೈಷಿಗಳು, ಸ್ನೇಹಿತರು, ರಾಜಕೀಯದಿಂದ ನಿವೃತ್ತಿ ಹೊಂದಬಾರದು ಎಂದು ಬಲವಂತ ಮಾಡುತ್ತಿದ್ದಾರೆ ಎಂದು ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಸಚಿವ ಸಂಪುಟ ವಿಸ್ತರಣೆ, ಮುಖ್ಯಮಂತ್ರಿ ಬದಲಾವಣೆ, ಸರ್ಕಾರದ ಖಜಾನೆಯಲ್ಲಿ ದುಡ್ಡು ಇಲ್ಲದೇ ಇರುವುದು, ಇದರಿಂದ ಜನರ ಮೈಂಡ್ ಡೈವರ್ಟ್ ಮಾಡಬೇಕೆನ್ನುವ ಕಾರಣಕ್ಕಾಗಿ ಸುಮ್ಮನೆ ಆರ್‌ಎಸ್‌ಎಸ್, ಧರ್ಮ ರಾಜಕಾರಣದ ವಿಚಾರವನ್ನು ಕಾಂಗ್ರೆಸ್ ಮುನ್ನಲೆಗೆ ತರುತ್ತಿದೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಪತನ

ಡಿ.ಕೆ.ಶಿವಕುಮಾರ್ ಪರಿಶ್ರಮಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಈಗಲೂ ಸಿದ್ದರಾಮಯ್ಯ ಡಿಕೆಶಿಯನ್ನು ಸಿಎಂ ಮಾಡಬಾರದು ಎಂದು ತಂತ್ರ ರೂಪಿಸುತಿದ್ದಾರೆ. ಆದರೆ ಡಿಕೆ ಶಿವಕುಮಾರ್ ಮಾತ್ರ ತಾನು ನೂರಕ್ಕೆ ನೂರು ಸಿಎಂ ಆಗುತ್ತೇನೆ ಎಂದು ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದರು. ಆಗಾಗ ಕೊಕ್ಕೆ ಹಾಕುವ ಸಿದ್ದ ರಾಮಯ್ಯ, ಡಾ.ಜಿ.ಪರಮೇಶ್ವರ್, ಡಾ. ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ ಮತ್ತು ಎಂ.ಬಿ.ಪಾಟೀಲ್‌ಗೆ ನೀವುಗಳೇ ಸಿಎಂ ಆಗಿ ಎಂದು ಎತ್ತಿಕಟ್ಟುತ್ತಿದ್ದಾರೆ. ಸಿದ್ದರಾಮಯ್ಯರ ಎಲ್ಲಾ ತಂತ್ರಗಳೂ ಡಿ.ಕೆ.ಶಿವಕುಮಾರ್‌ಗೆ ಗೊತ್ತಾಗಿದೆ. ಇಬ್ಬರು ಮೇಲ್ನೋಟಕ್ಕೆ ಚೆನ್ನಾಗಿದ್ದವರಂತೆ ಕಾಣುತ್ತಾರೆ. ಆದರೆ ಸಿದ್ದರಾಮಯ್ಯ ಡಿಕೆಶಿಯನ್ನು ಗೋಡೆಗೆ ತಳ್ಳಿ ಬಕಾ, ಬಕಾ ಎಂದು ದಿನಕ್ಕೊಬ್ಬರನ್ನು ಬಿಟ್ಟು ಬಾಕ್ಸಿಂಗ್ ಮಾಡುತ್ತಿದ್ದಾರೆ. ಡಿಕೆ ಶಿವಕುಮಾರ್ ಮಾತ್ರ ದೇವರ ಥರ ನಿಂತುಕೊಂಡಿದ್ದಾರೆ. ಏನೇ ಇದ್ದರೂ ನ.14ರ ಬಳಿಕ ಈ ಸರ್ಕಾರ ಪತನ ಆಗುವುದು ಗ್ಯಾರಂಟಿ ಎಂದು ಅವರು ಭವಿಷ್ಯ ನುಡಿದಿದ್ದಾರೆ.

ದರ್ಶನ್‌ಗೆ ಹರಿದ ಚಾದರ: ಜೈಲು ಅಧಿಕಾರಿಗಳಿಗೆ ನ್ಯಾಯಾಲಯ ಛೀಮಾರಿ



ಬೆಂಗಳೂರು, ಅ.29–ಪರಪ್ಪನ ಅಗ್ರಹಾರ ಜೈಲಿನಲ್ಲಿ ಇರುವ ದರ್ಶನ್‌ಗೆ ಹರಿದ ಚಾದರ ನೀಡಿದ ಜೈಲು ಅಧಿಕಾರಿಗಳಿಗೆ ಕೋರ್ಟ್ ಛೀಮಾರಿ ಹಾಕಿದೆ ಎಂದು ದರ್ಶನ್ ಪರ ವಕೀಲ ಸುನಿಲ್ ಹೇಳಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸೆಷನ್ಸ್ ನ್ಯಾಯಾಲಯದಲ್ಲಿ ಮೂರು ಅರ್ಜಿಗಳ ವಿಚಾರಣೆ ನಡೆದಿದೆ. ದರ್ಶನ್‌ಗೆ ಮೂಲ ಸೌಕರ್ಯಗಳನ್ನು ನೀಡಬೇಕು ಎಂದು ನ್ಯಾಯಾಲಯ ಆದೇಶಿಸಿತ್ತು. ಆದರೂ ಜೈಲಾಧಿಕಾರಿಗಳು ಅದನ್ನು ಪಾಲನೆ ಮಾಡುತ್ತಿಲ್ಲ ಎಂದು ಅವರ ಮೇಲೆ ನ್ಯಾಯಾಂಗ ನಿಂದನೆ ಕೇಸ್ ದಾಖಲು ಮಾಡುವಂತೆ ದರ್ಶನ್ ಪರ ವಕೀಲರು ನ್ಯಾಯಾಲಯವನ್ನು ಕೋರಿದರು. ಈ ವಿಚಾರವಾಗಿ ವಾದ–ಪ್ರತಿವಾದ ನಡೆದಾಗ ಕೋರ್ಟ್ ಜೈಲು ಅಧಿಕಾರಿಗಳಿಗೆ ಛೀಮಾರಿ ಹಾಕಿದೆ. ಜೈಲು ಅಧಿಕಾರಿಗಳು ಇನ್ನು ಮುಂದೆ ಈ ನ್ಯಾಯಾಲಯದಿಂದ ಯಾವುದೇ ಆದೇಶವನ್ನು ನಿರೀಕ್ಷಿಸದೇ ಜೈಲಿನ ಮ್ಯಾನುಯೆಲ್‌ನಲ್ಲಿ ಇರುವ ಎಲ್ಲ ಸೌಕರ್ಯಗಳನ್ನು ಕೊಡಿ ಎಂದು ಕಠಿಣ ಆದೇಶ ಮಾಡಿದೆ. ಆರೋಪಿಗಳನ್ನು ಇನ್ನೂ ಕ್ವಾರೆಂಟೈನ್ ಸೆಲ್‌ನಲ್ಲಿ ಇಟ್ಟಿದ್ದಾರೆ. ಸಾಧ್ಯವಾದರೆ ಬೇರೆ ಸೆಲ್‌ಗೆ ಶಿಫ್ಟ್ ಮಾಡಿ ಎಂದು ನ್ಯಾಯಾಲಯ ಆದೇಶ ನೀಡಿದೆ.

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ವಿಸ್ತರಣೆ

ಮೈಸೂರು: 2025–26ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆಯಲು ಬಯಸುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು swdhmis.karnataka.gov.inರಲ್ಲಿ ಅರ್ಜಿ ಸಲ್ಲಿಸಲು ಅ.31 ಅಂತಿಮ ದಿನಾಂಕವಾಗಿರುತ್ತದೆ. ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಅರ್ಜಿ ಪ್ರತಿಯೊಂದಿಗೆ ದೃಢೀಕೃತ ದಾಖಲೆಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಸಲ್ಲಿಸತಕ್ಕದ್ದು. ಮಾಹಿತಿಗೆ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಡಾ॥ ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿ ಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು–12, ದೂ.ಸಂಖ್ಯೆ: 0821–2520910 ಯನ್ನು ಸಂಪರ್ಕಿಸಬಹುದು.

ಪುನೀತ್ ಪುಣ್ಯ ಸ್ಮರಣಾರ್ಥ ಅನ್ನದಾನ



ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಡಾ.ರಾಜ್‌ಕುಮಾರ್ ಪುತ್ಥಳಿ ಮುಂದೆ ಪವರ್ ಸ್ಟಾರ್ ದಿ.ಪುನೀತ್ ರಾಜ್‌ಕುಮಾರ್ ಅವರ ನಾಲ್ಕನೇ ಪುಣ್ಯಸ್ಮರಣೆ ಆಯೋಜಿಸಲಾಗಿತ್ತು.

ಮೈಸೂರು,ಅ.29(ಎಂಟಿವೈ)– ಪವರ್ ಸ್ಟಾರ್ ದಿ. ಡಾ.ಪುನೀತ್‌ರಾಜ್‌ಕುಮಾರ್ ಅವರ 4ನೇ ಪುಣ್ಯ ಸ್ಮರಣಾರ್ಥ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಅನ್ನದಾನ ಏರ್ಪಡಿಸಿದ್ದರು.

ಮೈಸೂರು ಚಾಮರಾಜ ಜೋಡಿ ರಸ್ತೆಯಲ್ಲಿರುವ ವರನಟ ಡಾ.ರಾಜಕುಮಾರ್ ಪುತ್ಥಳಿಗೆ ಪೂಜೆ ಸಲ್ಲಿಸಿದ ಬಳಿಕ ಅನ್ನದಾನ ನಡೆಯಿತು. ಈ ವೇಳೆ ಪುನೀತ್ ಅಭಿಮಾನಿಗಳು ಡಾ.ರಾಜ್‌ಕುಮಾರ್ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ತಿಂಡಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸುಯೋಗ್ ಆಸ್ಪತ್ರೆಯ ಮುಖ್ಯಸ್ಥ, ವೈದ್ಯ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಕರ್ನಾಟಕ ಕಂಡ ಅತ್ಯುತ್ತಮ ಕಲಾವಿದರಲ್ಲಿ ಒಬ್ಬರೆನಿಸಿದ್ದ ಡಾ.ಪುನೀತ್ ರಾಜ್‌ಕುಮಾರ್ ಅವರು ಅಕಾಲಿಕ ನಿಧನರಾಗಿ ನಾಲ್ಕು ವರ್ಷ ಸಂದಿದೆ. ನಟನೆಯೊಂದಿಗೆ ಸಮಾಜ ಸೇವೆಯಲ್ಲೂ ಮುಂಚೂಣಿಯಲ್ಲಿದ್ದ ಪುನೀತ್ ರಾಜ್‌ಕುಮಾರ್ ಅವರನ್ನು ಕಳೆದುಕೊಂಡಿದ್ದೇವೆ. ಅವರ ನಿಧನದಿಂದ ಸಮಾಜಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಬದುಕಿನ ಅವಧಿಯಲ್ಲಿ ನಾವು ಮಾಡುವ ಒಳ್ಳೆಯ ಕಾರ್ಯ ನಮ್ಮ ವ್ಯಕ್ತಿತ್ವವನ್ನು ಮರಣದ ನಂತರವೂ ಜೀವಂತವಾಗಿಸುತ್ತದೆ. ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿ 4 ವರ್ಷ ಕಳೆದಿದ್ದರೂ, ಅವರ ಸಮಾಜಮುಖಿ ಕೆಲಸ, ನಟನೆ ಹಾಗೂ ಅವರ ಹೆಸರು ಸದಾ ಹಚ್ಚಹಸಿರಾಗಿ ಉಳಿದಿದೆ ಎಂದರು.

ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಮಾತನಾಡಿ, ದಿವಂಗತ ಪುನೀತ್ ರಾಜ್‌ಕುಮಾರ್ ಅವರು ಸರಳತೆ ಮತ್ತು ಪರೋಪಕಾರಿ ಗುಣ ಹೊಂದಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಎಲೆಮರೆ ಕಾಯಿಯಂತೆ ಕೆಲಸ ಮಾಡುತ್ತಿದ್ದ ಪುನೀತ್ ರಾಜ್‌ಕುಮಾರ್ ಮಾನವೀಯ ಮೌಲ್ಯಗಳ ಗಣಿ ಆಗಿದ್ದರು ಎಂದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಜಿ.ಶ್ರೀನಾಥ್ ಬಾಬು, ಮುಖಂಡರಾದ ಜಿ.ರಾಘವೇಂದ್ರ ಕಿಶೋರ್‌ಕುಮಾರ್, ಎಲ್‌ಐಸಿ ಬಾಲು, ಶೇಖರ್, ಕಿರಣ್, ಮಂಜುನಾಥ್, ಎಸ್.ಎನ್.ರಾಜೇಶ್, ಹರೀಶ್ ನಾಯ್ಡು, ಷಣ್ಮುಗನ್, ಮಾಯಣ್ಣ, ನಟರಾಜ್, ನಾಗರಾಜ್, ಮಲ್ಲೇಶ್, ಸತೀಶ್, ಲಕ್ಷ್ಮಣ ಹಾಗೂ ಇನ್ನಿತರರಿದ್ದರು.

ಜೀವನದ ಮೌಲ್ಯ ತಿಳಿಸಿಕೊಡುವ ಮಹಾಕಾವ್ಯ ರಾಮಾಯಣ

ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸಂಸದ ಜಿ.ಕುಮಾರ್ ನಾಯಕ್ ಅಭಿಮತ

ಮೈಸೂರು, ಅ.29(ಎಂಟಿವೈ)– ಮಹರ್ಷಿ ವಾಲ್ಮೀಕಿ ರಚಿಸಿದ ರಾಮಾಯಣ ಎಲ್ಲರಿಗೂ ಜೀವನದ ಮೌಲ್ಯ ತಿಳಿಸಿಕೊಡುವ ಮಹಾಕಾವ್ಯ ಎನಿಸಿದೆ ಎಂದು ಸಂಸದ ಜಿ. ಕುಮಾರ್ ನಾಯಕ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾವೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವು ಗುರುಗಳನ್ನು ನೋಡುವ ರೀತಿ, ತಂದೆ–ಮಕ್ಕಳ ನಡುವಿನ ಸಂಬಂಧ, ಪೋಷಕರ ಆಜ್ಞೆ ಪಾಲನೆ ಹೇಗಿರಬೇಕು ಎಂದು ಭರತನ ನಡೆಯಿಂದ ತಿಳಿಯಬಹುದು. ರಾಮಾಯಣವು ನಮಗೆ ಹಲವು ಜೀವನ ಮೌಲ್ಯಗಳ ಪಾಠವನ್ನು ಕಲಿಸಿಕೊಡುತ್ತದೆ ಎಂದು ಹೇಳಿದರು.

ರಾಮಾಯಣವು ದೇಶದ ಹಲವು ಭಾಷೆಗಳಲ್ಲಿ ಮಹಾಕಾವ್ಯ ರಚನೆಗೆ ಉತ್ತೇಜನ ನೀಡಿದೆ. ಪ್ರತಿಯೊಬ್ಬ ಭಾರತೀಯರಿಗೂ ಮಹರ್ಷಿ ವಾಲ್ಮೀಕಿ ಪ್ರಾತಸ್ಮರಣೀಯರು. ವಿದ್ಯಾರ್ಥಿಗಳಲ್ಲಿ ಗುರಿ, ಛಲ, ಏಕಾಗ್ರತೆ ಇರಬೇಕು. ತನ್ನ ಸುತ್ತಲೂ ಹುತ್ತ ಬೆಳೆದರೂ ಏಕಾಗ್ರತೆಯಿಂದ ವಾಲ್ಮೀಕಿ ತಪಸ್ಸು ಮಾಡಿದರು. ವಾಲ್ಮೀಕಿ ಅವರನ್ನು ವಿದ್ಯಾರ್ಥಿಗಳು ಆದರ್ಶವಾಗಿಟ್ಟುಕೊಂಡು ಏಕಾಗ್ರತೆಯಿಂದ ಅಧ್ಯಯನ ಮಾಡಬೇಕು. ಆಗ ಮಾತ್ರ ದೊಡ್ಡಮಟ್ಟದ ಸಾಧನೆ ಮಾಡಲು ಸಾಧ್ಯ. ಸಮಾಜ ಯಾವ ರೀತಿ ಇರಬೇಕು ಎನ್ನುವುದನ್ನು ರಾಮಾಯಣ ತಿಳಿಸಿಕೊಟ್ಟಿದೆ. ದೇಶವನ್ನು ಯಾವ ರೀತಿ ಮುನ್ನಡೆಯಬೇಕು ಎಂದು ಡಾ.ಬಿ.ಆರ್. ಅಂಬೇಡ್ಕರ್ ನಮಗೆ ಸಂವಿಧಾನದ ಮೂಲಕ ತಿಳಿಸಿದ್ದಾರೆ. ಆ ಕಾರಣದಿಂದ ಸಂವಿಧಾನವನ್ನು ಉಳಿಸುವ ಕಾರ್ಯ ಆಗಬೇಕು. ಸಂವಿಧಾನಕ್ಕೆ ಧಕ್ಕೆ ಎದುರಾದರೆ ನಾವು ಆಯುಧ ಹಿಡಿದು ಹೋರಾಡುವ ಅವಶ್ಯಕತೆ ಇಲ್ಲ. ಸಂವಿಧಾನ ಬದ್ಧವಾಗಿಯೇ ಶಾಂತಿಯುತ ಹೋರಾಟ ನಡೆಸಿ ಸಂವಿಧಾನ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಮುಂದೆ ಇದೆ ಎಂದು ತಿಳಿಸಿದರು.

ಇದೇ ವೇಳೆ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಡಾ.ಶಂಕರ ಮಹಾದೇವ ಬಿದರಿ ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರ ರಾಮಾಯಣದ ಪ್ರಭಾವ ವಿಶ್ವದೆಲ್ಲೆಡೆ ಬೀರಿದೆ. ಮುಸ್ಲಿಂ ರಾಷ್ಟ್ರವಾಗಿರುವ ಇಂಡೋನೇಷಿಯಾದಲ್ಲಿ ಪ್ರತಿ ಮನೆಯಲ್ಲೂ ರಾಮಾಯಣ ಗ್ರಂಥ ಇರುವುದನ್ನು ಕಾಣಬಹುದು. ಅಲ್ಲದೆ, ಅಲ್ಲಿನ ಮನೆಗಳಲ್ಲಿ ರಾಮನ ಗುಡಿಯೂ ಇದೆ. ಥೈಲ್ಯಾಂಡ್‌ನಲ್ಲಿ ರಾಜನನ್ನು ರಾಮ ಎಂದು ಕರೆಯಲಾಗುತ್ತದೆ. ಇಂಡೋನೇಷಿಯಾ, ಥೈಲ್ಯಾಂಡ್ ಮಾದರಿಯಲ್ಲಿ ರಾಮಾಯಣದ ಪ್ರಭಾವಕ್ಕೆ ಒಳಗಾದ ಅನೇಕ ದೇಶಗಳಿವೆ ಎಂದರು.

ಸಾವಿರಾರು ವರ್ಷಗಳು ಕಳೆದರೂ ರಾಮಾಯಣ ಸದಾ ಹಸಿರಾಗಿಯೇ ಇರುತ್ತದೆ. ರಾಮಾಯಣವನ್ನು ಪ್ರತಿ ಬಾರಿ ಓದಿದಾಗ ನಮಗೆ ಹೊಸದಾಗಿ ಕಾಣುತ್ತದೆ, ಹೊಸ ವಿಚಾರ ತಿಳಿಯುತ್ತದೆ. ರಾಮಾಯಣ ಎಂದರೆ ಕೇವಲ ಸಾಹಿತ್ಯವಲ್ಲ, ನಮಗೆ ಜೀವನ ಮೌಲ್ಯವನ್ನು ತಿಳಿಸಿಕೊಡುವ ಮಹಾಕಾವ್ಯ. ವಾಲ್ಮೀಕಿ ಅಂದರೆ ನಾಯಕ ಸಮುದಾಯಕ್ಕೆ ಸೀಮಿತವಾದವರು ಎಂದು ಕೆಲವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ವಾಲ್ಮೀಕಿ ನಾಯಕ ಸಮುದಾಯದಲ್ಲಿ ಹುಟ್ಟಿರಬಹುದು. ಆದರೆ, ಅವರು ಮಾನವ ಕುಲಕೋಟಿಯ ಆಸ್ತಿ. ವಾಲ್ಮೀಕಿ ಅವರನ್ನು ನಾವು ಸಣ್ಣವರಾಗಿ ಮಾಡಬಾರದು, ಅವರು ಇಡೀ ವಿಶ್ವಕ್ಕೆ ಬೇಕಾದವರು ಎಂದು ಹೇಳಿದರು.


ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ. ಎಸ್.ಕೆ.ನವೀನ್‌ಕುಮಾರ್, ಪರೀಕ್ಷಾಂಗ ಕುಲಸಚಿವ ಆನಂದ್‌ಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ. ರಾಮನಾಥಂ ನಾಯ್ಡು, ಹಣಕಾಸು ಅಧಿಕಾರಿ ಪ್ರೊ. ಎಸ್.ನಿರಂಜನ್ ಅರಸ್, ಸ್ಪರ್ಧಾತ್ಮಕ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಗೌಡ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಪಿ.ಮಂಜುನಾಥ್ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಸಂಸದ ಕುಮಾರ್‌ನಾಯಕ್ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು.

ಮಕ್ಕಳಲ್ಲಿ ಮದ್ಯ, ಮಾದಕ ವಸ್ತುಗಳ ಸೇವನೆ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಅವಶ್ಯ

ಅದುವೇ ಆರೋಗ್ಯವಂತ ಸಮಾಜಕ್ಕೆ ನಾಂದಿ: ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ ಸಲಹೆ



ದಸರಾ ವಸ್ತುಪ್ರದರ್ಶನ ಆವರಣದಲ್ಲಿ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಜಾಗೃತ ಮಳಿಗೆಯನ್ನು ಶರಣಪ್ಪ ಸಲಾದಪುರ ಉದ್ಘಾಟಿಸಿದರು.

ಮೈಸೂರು, ಅ.29(ಎಂಕೆ)– ಮದ್ಯ ಮತ್ತು ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಲ್ಲಿ ಜಾಗೃತಿ ಮೂಡಿಸಿದರೆ, ಆರೋಗ್ಯವಂತ ಮತ್ತು ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ ಹೇಳಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಿರ್ಮಿಸಿರುವ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಜಾಗೃತಿ ಮಳಿಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಮದ್ಯ ಮತ್ತು ಮಾದಕ ವಸ್ತುಗಳಿಂದ ಆರೋಗ್ಯದ ಮೇಲಾಗುವ ಪರಿಣಾಮಗಳು ಬಗ್ಗೆ ಅರಿವು ಮೂಡಿಸುವ ಅನಿವಾರ್ಯತೆ ಇದ್ದು, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯನಿರ್ವಹಿಸುತ್ತಿದೆ ಎಂದರು ತಿಳಿಸಿದರು.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಮಂಡಳಿ ವತಿಯಿಂದ ನಿರ್ಮಿಸಿರುವ ಜಾಗೃತಿ ಮಳಿಗೆಯಲ್ಲಿ ಮದ್ಯಪಾನ, ಧೂಮಪಾನ ಹಾಗೂ ಇನ್ನಿತರೆ ಮಾದಕ ವಸ್ತುಗಳಿಂದಾಗುವ ಪರಿಣಾಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಲಾಗಿದೆ. ಅಲ್ಲದೆ ಮಳಿಗೆಯೂ ಅತ್ಯಾಕರ್ಷಕವಾಗಿದ್ದು, ವಸ್ತುಪ್ರದರ್ಶನಕ್ಕೆ ಆಗಮಿಸುವ ಪ್ರವಾಸಿಗರು ಮಳಿಗೆ ವೀಕ್ಷಣೆ ಮಾಡಿ ಮಾಹಿತಿ ಪಡೆದುಕೊಳ್ಳುವಂತೆ ಕೋರಿದರು.

ಪಠ್ಯದ ಮೂಲಕ ಜಾಗೃತಿ: ಶಾಲಾ ಪಠ್ಯಪುಸ್ತಕಗಳಲ್ಲಿ ಮದ್ಯ ಮತ್ತು ಮಾದಕ ವಸ್ತುಗಳಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಪಠ್ಯ ಸೇರಬೇಕು. ತಾಯಿ ಮತ್ತು ಮಗುವಿನ ನಡುವೆ ನಡೆಯುವ ಸಂಭಾಷಣೆ ರೀತಿಯಲ್ಲಿ ಪಠ್ಯ ಇದ್ದರೆ, ಹೆಚ್ಚು ಪರಿಣಾಮಕಾರಿಯಾಗಿ ಮಕ್ಕಳ ಮನಸ್ಸನ್ನು ಮುಟ್ಟುತ್ತದೆ ಎಂದು ಅಭಿಪ್ರಾಯಿಸಿದರು.

ಸರ್ಕಾರಕ್ಕೆ ವಂಚನೆ: ಗ್ರಾಮೀಣ ಪ್ರದೇಶಗಳಲ್ಲಿ ಪರವಾನಗಿ ಪಡೆಯದೆ ಮದ್ಯವನ್ನು ಮಾರಾಟ ಮಾಡುವುದಲ್ಲದೇ, ನಕಲಿ ಮದ್ಯಗಳ ಮಾರಾಟದಿಂದ ಸರ್ಕಾರಕ್ಕೆ ತೆರಿಗೆ ಹಣ ವಂಚನೆ ಮಾಡಲಾಗುತ್ತಿದೆ. ಬೀಡ ಮಾರುವ ಅಂಗಡಿಗಳಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ಮಾರಾಟ ಮಾಡಲಾಗುತ್ತಿದೆ. ನಕಲಿ ಮದ್ಯ ಮಾರಾಟದ ವ್ಯವಹಾರ ಕರ್ನಾಟಕ ರಾಜ್ಯದಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತಿದ್ದು, ಮದ್ಯಪ್ರಿಯರು ಎಚ್ಚರಿಕೆಯಿಂದಿರಬೇಕು ಎಂದರು. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎನ್.ಎಸ್. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಪುನೀತ್ ರಾಜ್‌ಕುಮಾರ್ 4ನೇ ವರ್ಷದ ಪುಣ್ಯಸ್ಮರಣೆ



ಮೈಸೂರು, ಅ. 29–ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದ ಬಳಿ ಇರುವ ಅಪ್ಪು ಬಳಗದ ವತಿಯಿಂದ ದಿವಂಗತ ಡಾ. ಪುನೀತ್ ರಾಜ್‌ಕುಮಾರ್ ಅವರ ನಾಲ್ಕನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ಅವರ ಸಹೋದರ ಶ್ರೀನಿವಾಸ್, ಸಾಹಿತಿ ಬಿ.ಗಣೇಶ ಕೆ.ಜಿ.ಕೊಪ್ಪಲು, ಸಿಂಗನಹಳ್ಳಿ ಅಶ್ವಥ ಎಸ್. ಹೆಚ್, ಕಳಸ್ತವಾಡಿ ವಿನಯ್ ಕುಮಾರ್, ಛೇರ್ ಸುರೇಶ್, ಎಲ್ಲಪ್ಪ ಮತ್ತು ರಾಜು ಬೆಳಗೋಳ ಸೇರಿದಂತೆ ಅಪ್ಪು ಅಭಿಮಾನಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನ ಆಚರಣೆ

ಮೈಸೂರು,ಅ.29–ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಎಚ್‌ಪಿ), ಮೈಸೂರು, ಚೈಲ್ಡ್ ಫಂಡ್ ಇಂಟರ್‌ನ್ಯಾಷನಲ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಶಾಂತಿನಗರದ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.



ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಆಯಾಜ್ ಪಾಷಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಎಲ್ಲಾ ಮಹಿಳೆಯರು ತಮ್ಮ ಮಾನಸಿಕ ಆರೋಗ್ಯದ ಕಡೆ ಗಮನ ಕೊಡಬೇಕು. ದೈಹಿಕ ಆರೋಗ್ಯ ಎಷ್ಟು ಮುಖ್ಯವೋ, ಮಾನಸಿಕ ಆರೋಗ್ಯ ಕೂಡ ಅಷ್ಟೇ ಮುಖ್ಯ ಎಂದು ಹೇಳಿದರು. ಮತ್ತು ಮೊಬೈಲ್ ಬಳಕೆಯನ್ನು ಕಡಿಮೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸಿ.ಇ.ಜಿ ಆಸ್ಪತ್ರೆ ವೈದ್ಯರಾದ ಡಾ.ಸಹನಾ ಎಂ.ಎಸ್ ಅವರು ಮಹಿಳೆಯರ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮ ಕುರಿತು ವಿವರವಾಗಿ ಮಾತನಾಡಿದರು. ಇವತ್ತಿನ ದಿನಗಳಲ್ಲಿ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಮಾನಸಿಕವಾದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದರಿಂದಾಗಿ ಮಹಿಳೆಯರು ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಸಮಸ್ಯೆಗಳಿಂದ ಹೊರಗಡೆ ಬರಬೇಕಾದರೆ ಸಮಯಕ್ಕೆ ಸರಿಯಾಗಿ ಆಪ್ತಸಮಾಲೋಚನೆ, ಮಾರ್ಗದರ್ಶನ ಮತ್ತು ಚಿಕಿತ್ಸೆ ಬಹಳ ಅಗತ್ಯ, ಅದಕ್ಕಾಗಿ ನಾವು ಮಾನಸಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡಬೇಕು ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂರಕ್ಷಣಾಧಿಕಾರಿ ಶ್ರೀಮತಿ ಸಂಗೀತ ಪ್ರಕಾಶ್ ಪೂಜಾರ ಅವರು ಮಹಿಳೆಯರ ಮೇಲಾಗುವ ಹಿಂಸೆ ದೌರ್ಜನ್ಯಗಳು, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ 2005ರ ಕುರಿತು ವಿವರವಾಗಿ ಮಾತನಾಡಿದರು.

ಕಾರ್ಯಕ್ರಮದ ಉದ್ದೇಶಗಳು ಮತ್ತು ಸಂಸ್ಥೆಯ ಕುರಿತು ನಿರ್ದೇಶಕರಾದ ಸರಸ್ವತಿ ಮಾತನಾಡಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಡಾ. ಹಾನಮ್, ವೈದ್ಯಾಧಿಕಾರಿಗಳು ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಶಾಂತಿನಗರ, ರೋಷನ್ ಉರ್ದು ಹಿ.ಪ್ರಾ. ಶಾಲೆ ಮುಖ್ಯೋಪಾಧ್ಯಾಯಿನಿ ಸಪೂರ ಉಪಸ್ಥಿತರಿದ್ದರು.

ಯಶಸ್ಸಿಗೆ ಹೊಂದಾಣಿಕೆ ಪ್ರವೃತ್ತಿ ಅವಶ್ಯ



ಮೈಸೂರು,ಅ.29–ವ್ಯಕ್ತಿಗಿಂತ ಸಮುದಾಯ ದೊಡ್ಡದು ಎಂದು ಮೈಸೂರಿನ ಕಲಾ, ವಾಣಿಜ್ಯ–ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕ ಪ್ರೊ.ದೇವಣ್ಣ ಹೆಚ್.ಬಿ. ಹೇಳಿದರು.

ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಸುತ್ತೂರಿನ ವತಿಯಿಂದ ಸಂಗಮ ಶ್ರೀಕ್ಷೇತ್ರದಲ್ಲಿ ಏರ್ಪಡಿಸಿರುವ ಸಮುದಾಯ ಜೀವನ ಶಿಬಿರ–2025 ಅನ್ನು ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ವ್ಯಕ್ತಿಗೆ ಹೊಂದಾಣಿಕೆ ಮಾಡಿಕೊಳ್ಳುವ ಪ್ರವೃತ್ತಿ ಇರಬೇಕು. ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಿದರೆ ಜಯ ಸಿಕ್ಕುತ್ತದೆ. ಸಮಷ್ಠಿಯಲ್ಲಿ ಶಕ್ತಿ ಇದೆ. ವಿದ್ಯಾರ್ಥಿಗಳಿಗೆ ಸೌಹಾರ್ದ ಜೀವನದ ಅರಿವು ಬೇಕು. ಕೇವಲ ಪುಸ್ತಕ ಜ್ಞಾನದಿಂದ ಮಾತ್ರ ಜೀವನ ನಿರ್ವಹಣೆ ಕಲೆ ಬರುವುದಿಲ್ಲ. ಪ್ರಾಯೋಗಿಕ ಜ್ಞಾನ ನೈಜ ಮೌಲ್ಯಗಳಿಂದ ಅದನ್ನು ಪಡೆಯಬಹುದು. ಈ ರೀತಿಯ ಶಿಬಿರಗಳು ತಾಳ್ಮೆ, ಸಹಕಾರ, ಹೊಂದಾಣಿಕೆ ಮನೋಭಾವಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿವೆ ಎಂದು ನುಡಿದರು. ಪ್ರಾಂಶುಪಾಲ ಡಾ.ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಸಂಗಮ ಶ್ರೀಕ್ಷೇತ್ರದ ಕಾರ್ಯಸ್ವಾಮಿ ಗದ್ದುಗೆ ಮಠದ ಶ್ರೀ ಮಹೇಶ್ವರಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕ ಕೆ.ವಿ.ಯೋಗೇಶ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪಲ್ಲವಿ ಸ್ವಾಗತಿಸಿದರು. ಲಲಿತ್ ವಂದಿಸಿ ದರು. ದೀಪ್ತಿ ಸಹನ ನಿರೂಪಿಸಿದರು.

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಹಸ್ತಪ್ರತಿಗಳ ಸಂರಕ್ಷಣೆಗೆ ಎಲ್ಲಾ ಕ್ರಮ

ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ಭರವಸೆ

ಮೈಸೂರು, ಅ.29 (ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯವು ಮೈಸೂರಿನ ಹಿರಿಮೆಯಾಗಿದ್ದು, ಸಂಶೋಧನಾಲಯದಲ್ಲಿರುವ ಹಸ್ತಪ್ರತಿಗಳ ಸಂರಕ್ಷಣೆಗೆ ಕ್ರಮವಹಿಸಲಾಗುವುದು ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ತಿಳಿಸಿದ್ದಾರೆ.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದ 134ನೇ ಸಂಸ್ಥಾಪನಾ ದಿನಾಚರಣೆ ಹಾಗೂ 'ಉತ್ತರೇ ರಾಮಚರಿತೇ ಭವ ಭೂತಿರ್ವಿಶಿಷ್ಯತೇ' ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 70 ಸಾವಿರಕ್ಕೂ ಹೆಚ್ಚು ಅಮೂಲ್ಯವಾದ ಹಸ್ತಪ್ರತಿಗಳನ್ನು ಮತ್ತೊಮ್ಮೆ ರಚಿಸಲು ಸಾಧ್ಯವಿಲ್ಲ. ಆದರೆ, ಕಟ್ಟಡ ಸೋರುತ್ತಿರುವುದರಿಂದ ಹಸ್ತಪ್ರತಿಗಳ ಸಂರಕ್ಷಣೆ ಮುಖ್ಯವಾಗಿದೆ. ಹಾಗಾಗಿ ಮೈಸೂರು ವಿವಿ ಸಹಕಾರದೊಂದಿಗೆ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.



ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದ 134ನೇ ಸಂಸ್ಥಾಪನಾ ದಿನಾಚರಣೆಯಲ್ಲಿ 'ಮಹೇಂದ್ರವಿಜಯಡಿಮ' ಹಾಗೂ 'ಚಿಂತಾಮಣಿ ವಿಜಯಚಂಪೂ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೆ ಪ್ರೇರಣೆಯಾದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಜ್ಞಾನ ಭಂಡಾರವೇ ಇದೆ ಎಂಬುದು ಮೈಸೂರು ಮಾತ್ರವಲ್ಲದೆ ನಾಡಿನಾದ್ಯಂತ ತಿಳಿಯಬೇಕು. ಈ ನಿಟ್ಟಿನಲ್ಲಿ ಸಂಶೋಧನಾಲಯವು ಕಾರ್ಯಚಟುವಟಿಕೆಗಳನ್ನು ರೂಪಿಸಬೇಕು. ಇದಕ್ಕೆ ಸಾರ್ವಜನಿಕರು ಹಾಗೂ ಸಂಘ–ಸಂಸ್ಥೆಗಳು ಕೈಜೋಡಿಸಬೇಕು ಎಂದು ಕೋರಿದರು.

ಪ್ರಾಚ್ಯವಿದ್ಯಾ ಸಂಶೋಧನಾಲಯ 70 ಸಾವಿರಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಣೆ ಮಾಡಿದೆ ಎಂದರೆ ಅದು ನಿಜಕ್ಕೂ ಅವಿಸ್ಮರಣೀಯ. ಇಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಪ್ರತಿಯನ್ನು ನೋಡಿ, ಆನಂದ ಪಡಬಹುದಾಗಿದೆ. ನೂರಾರು ವಿದ್ವಾಂಸರು ಊರೂರು ಸುತ್ತಿ ಹಸ್ತ ಪ್ರತಿಗಳನ್ನು ಸಂಗ್ರಹ ಮಾಡಿದ್ದಾರೆ. ಇಂದಿಗೂ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃತಿ ಬಿಡುಗಡೆ: ಇದೇ ವೇಳೆ ಪ್ರಾಚ್ಯವಿದ್ಯಾ ಸಂಶೋಧನಾಲಯದ ಉಪ ನಿರ್ದೇಶಕರಾದ ಡಾ.ಸಿ.ಪಾರ್ವತಿ ಸಂಪಾದಿತ 'ಮಹೇಂದ್ರವಿಜಯಡಿಮ' ಹಾಗೂ ಡಾ.ಎಸ್.ಪ್ರಭುಸ್ವಾಮಿ ಸಂಪಾದಿತ 'ಚಿಂತಾಮಣಿವಿಜಯಚಂಪೂ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಮಳೆಗಾಲದ ಬಳಿಕ ರಸ್ತೆಗುಂಡಿ ಮುಚ್ತೇವೆ; ಡಾಂಬರೂ ಹಾಕ್ತೇವೆ

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾಹಿತಿ

ಮೈಸೂರು,ಅ.29(ಎಸ್‌ಪಿಎನ್)– ಮಳೆಗಾಲ ಮುಗಿದ ತಕ್ಷಣ ರಸ್ತೆಯಲ್ಲಿ ಬಿದ್ದಿರುವ ಗುಂಡಿ ಮುಚ್ಚುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ್ದ ಅವರು, ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು. ತಾವು ನಿರ್ವಹಿಸುವ ಲೋಕೋಪಯೋಗಿ ಇಲಾಖೆಯಲ್ಲಿ ಹೊಸ ಕಾಮಗಾರಿಗಳಿಗೆ ಪ್ರತಿವರ್ಷದಂತೆ ಈ ವರ್ಷವೂ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಮಳೆಗಾಲ ಮುಗಿದ ತಕ್ಷಣ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು ಸರ್ಕಾರದ ಮೊದಲ ಆದ್ಯತೆ. ನಂತರ ರಸ್ತೆಗಳ ಡಾಂಬರೀಕರಣ ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು ಎಂದರು.



ದಸರಾ ವಸ್ತುಪ್ರದರ್ಶನಕ್ಕೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭೇಟಿ ನೀಡಿ, ವೀಕ್ಷಣೆ ಮಾಡಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಚಟುವಟಿಕೆಗಳು ಉತ್ತಮವಾಗಿವೆ. ಬೆಳಗಾವಿಯಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ 30 ದಿನಗಳ ವಸ್ತು ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಅಯೂಬ್‌ಖಾನ್ ಅಧ್ಯಕ್ಷರಾದ ಮೇಲೆ ಪ್ರಾಧಿಕಾರದ ಚಟುವಟಿಕೆಗಳಿಗೆ ಜೀವಕಳೆ ಬಂದಿದೆ. ಅವರ ಆಹ್ವಾನದ ಮೇರೆಗೆ ಇಲ್ಲಿಗೆ ಬಂದು ವಸ್ತುಪ್ರದರ್ಶನವನ್ನು ವೀಕ್ಷಣೆ ಮಾಡಿದ್ದೇನೆ. ಇಲ್ಲಿನ ಚಟುವಟಿಕೆಗಳು ಜನರನ್ನು ಆಕರ್ಷಿಸುತ್ತಿವೆ ಎಂದು ಸಚಿವರು ಮೆಚ್ಚುಗೆಯ ಮಾತುಗಳನ್ನಾಡಿದರು.

ಅಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ವಿವಿಧ ಸಂದರ್ಭದಲ್ಲಿ ತೆಗೆದಿದ್ದ ಭಾವಚಿತ್ರದ ಗ್ಯಾಲರಿಗೆ ಭೇಟಿ ನೀಡಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿವಿಧ ಸಂದರ್ಭದಲ್ಲಿ ತೆಗೆದಿರುವ ಭಾವಚಿತ್ರಗಳು ಅವರ ರಾಜಕೀಯ ಇತಿಹಾಸವನ್ನು ಸಾರುತ್ತಿವೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು, ಕಾಂಗ್ರೆಸ್ ಪಕ್ಷದಲ್ಲಿ ಖುರ್ಚಿಗಾಗಿ ಕದನ ಆರಂಭವಾಗಿದೆ ಎಂಬ ಟೀಕೆಗೆ ಪ್ರಕ್ರಿಯಿಸಿ, ಇದು ನಮ್ಮ ಪಕ್ಷದ ವಿಚಾರ, ಅವರ ಹೇಳಿಕೆಗೆ ನಾವೇಕೆ ಉತ್ತರಿಸಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ಮರುಪ್ರಶ್ನೆ ಹಾಕಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಭೇಟಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ಅವರ ಇಲಾಖೆ ಸಂಬಂಧ ಹಾಗೂ ಪಕ್ಷದ ಅಧ್ಯಕ್ಷರಾಗಿ ಬೇರೆಬೇರೆ ಕಾರಣಕ್ಕೆ ದೆಹಲಿಗೆ ಭೇಟಿ ನೀಡಿರಬಹುದು. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ. ಉಪಮುಖ್ಯಮಂತ್ರಿಗಳ ದೆಹಲಿ ಭೇಟಿಗೂ ಈಗಿನ ರಾಜಕೀಯ ಗೊಂದಲಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿದರಲ್ಲದೆ, ಮುಖ್ಯಮಂತ್ರಿ ಬದಲಾವಣೆ ಕುರಿತು ಕೇಳಿದ ಪ್ರಶ್ನೆಗೆ, ಸಚಿವರು ಯಾವುದೇ ಪ್ರತಿಕ್ರಿಯೆ ನೀಡದೇ ತೆರಳಿದರು.

ಈ ಸಂದರ್ಭದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಮಂಜುನಾಥ್, ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಲೋಕೇಶ್ ಪಿಯಾ, ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ.ಗುರುರಾಜ್ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ ಗುರುವಾರ ೩೦ ಅಕ್ಟೋಬರ್ ೨೦೨೫

ಮಡಿಕೇರಿ ನಗರಸಭೆ ಅಧ್ಯಕ್ಷರಿಗೆ ತರಾಟೆ

ಗೊಂದಲದ ಗೂಡಾದ ಮಾಸಿಕ ಸಭೆ

ಮಡಿಕೇರಿ, ಅ.29–ನಗರಸಭೆಯ ಅಧ್ಯಕ್ಷ–ಉಪಾಧ್ಯಕ್ಷರ ವಿರುದ್ಧ ಪ್ರಶ್ನೆಗಳ ಸುರಿಮಳೆಗೈದಿದ್ದರಿಂದ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಘರ್ಷಣೆ ನಡೆದು ಸಾಮಾನ್ಯ ಸಭೆ ಅಕ್ಷರಶಃ ಗೊಂದಲದ ಗೂಡಾಗಿ ರೂಪಿತಗೊಂಡಿತ್ತು.

ನಗರಸಭಾಧ್ಯಕ್ಷೆ ಪಿ.ಕಲಾವತಿ ಅಧ್ಯಕ್ಷತೆಯಲ್ಲಿ ಆರಂಭವಾದ ಸಾಮಾನ್ಯ ಸಭೆಯಲ್ಲಿ ಎಸ್‌ಡಿಪಿಐ ಸದಸ್ಯ ಅಮಿನ್ ಮೊಹಿಸಿನ್ ಮಾತನಾಡಿ, ರಾಜಾ ಸೀಟು ಬಳಿ ವಾಹನ ಪಾರ್ಕಿಂಗ್ ಶುಲ್ಕ ವಸೂಲಾತಿ ಸ್ಥಗಿತಗೊಂಡಿದೆ. ಶುಲ್ಕ ವಸೂಲಾತಿಯ ಟೆಂಡರ್ ಸ್ಥಗಿತ ಮಾಡಲು ಕಾರಣ ಏನು ಎಂದು ಪ್ರಶ್ನಿಸಿದರೆ, ಬಿಜೆಪಿ ಸದಸ್ಯ ಕೆ.ಎಸ್.ರಮೇಶ್, ರಾಜಾಸೀಟು ಬಳಿ ವಾಹನ ಪಾರ್ಕಿಂಗ್ ಶುಲ್ಕ ವಸೂಲಾತಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸುವಂತೆ ಆಗ್ರಹಿಸಿದರು. ಅಧ್ಯಕ್ಷರ ಸೂಚನೆಯಂತೆ ಕೌನ್ಸಿಲ್ ಕಾರ್ಯದರ್ಶಿ ತಾಹಿರ್ ಮಾತನಾಡಿ, ರಾಜಾಸೀಟು ಬಳಿ ಪಾರ್ಕಿಂಗ್ ಟೆಂಡರನ್ನು 37.85 ಲಕ್ಷ ರೂ.ಗಳಿಗೆ ನೀಡಲಾಗಿದೆ. ಈ ಟೆಂಡರ್ ಮೊತ್ತದಲ್ಲಿ ಟೆಂಡರ್‌ದಾರರು 2 ಕಂತುಗಳಲ್ಲಿ 17.79 ಲಕ್ಷ ರೂ.ಗಳನ್ನಷ್ಟೆ ಪಾವತಿಸಿದ್ದಾರೆ. ಸುಮಾರು 20 ಲಕ್ಷ ರೂ. ಪಾವತಿಗೆ ಬಾಕಿ ಇರುವುದರಿಂದ ಶುಲ್ಕ ವಸೂಲಾತಿ ಸ್ಥಗಿತಕ್ಕೆ ಸೂಚನೆ ನೀಡಿ ನೋಟಿಸ್ ನೀಡಲಾಗಿದೆ ಎಂದು ಉತ್ತರಿಸಿದರು.

ಬಿಜೆಪಿ ಸದಸ್ಯ ಎಸ್.ಸಿ.ಸತೀಶ್ ಮಾತನಾಡಿ, ಟೆಂಡರ್ ಮೊತ್ತದ ಪಾವತಿಗೆ ಇರುವ ನಿಯಮಾವಳಿಗಳೇನು ಮತ್ತು ಟೆಂಡರ್‌ದಾರರಿಂದ ಪೂರ್ಣ ಮೊತ್ತವನ್ನು ಪಾವತಿಸಿಕೊಳ್ಳದೆ



ಮಡಿಕೇರಿ ನಗರ ಸಭಾಧ್ಯಕ್ಷೆ ಪಿ.ಕಲಾವತಿ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ಪಾರ್ಕಿಂಗ್ ಶುಲ್ಕ ವಸೂಲಾತಿಗೆ ಅವಕಾಶ ನೀಡಿದ್ದು ಹೇಗೆ ಎಂದು ಅಧ್ಯಕ್ಷರ ವಿರುದ್ಧ ಹರಿಹಾಯ್ದರು. ಇದೇ ನಿಯಮ ಮಾರುಕಟ್ಟೆಯ ಮೀನು ಮತ್ತು ಕೋಳಿ ಮಾಂಸ ಮಾರಾಟ ಮಾಡುತ್ತಿದ್ದ ಮಳಿಗೆದಾರರಿಗೆ ಏತಕ್ಕೆ ಅನ್ವಯವಾಗಿಲ್ಲ ಎಂದು ಪ್ರಶ್ನಿಸಿದರು. ಮೀನು ಮಳಿಗೆದಾರರು ಬಾಡಿಗೆ ನೀಡಿಲ್ಲ ಎಂದು ಮಳಿಗೆ ಮುಚ್ಚಿಸಿದ ಮರು ದಿನವೆ ಅದನ್ನು ತೆರೆಯಲು ಅವಕಾಶ ಮಾಡಿ ಕೊಟ್ಟಿದ್ದು ಹೇಗೆ ಎಂದು ಏರು ಧ್ವನಿಯಲ್ಲಿ ಪ್ರಶ್ನಿಸಿದರು. ಇದಕ್ಕೆ ಆಡಳಿತ ಪಕ್ಷದ ಸದಸ್ಯೆ ಶ್ವೇತ ಪ್ರಶಾಂತ್, ಅಪ್ಪಣ್ಣ, ಕಾಂಗ್ರೆಸ್ ಸದಸ್ಯ ರಾಜೇಶ್ ಯಲ್ಲಪ್ಪ ಅವರುಗಳು ಧ್ವನಿಗೂಡಿಸಿದ್ದರಿಂದ ಸದಸ್ಯರ ಮಾತುಗಳು ಕೇಳದಂತಾಗಿ ಸಭೆ ಗೊಂದಲದ ಗೂಡಾಗಿ ಪರಿಣಮಿಸಿತು.

ನಿಯಮದಂತೆ ಟೆಂಡರ್ ಮೊತ್ತವನ್ನು ಒಟ್ಟಾಗಿ ಪಾವತಿಸಿದ ಬಳಿಕ ಅವರಿಗೆ ಶುಲ್ಕ ವಸೂಲಾತಿಗೆ ಅವಕಾಶ ಒದಗಿಸಬೇಕು. ಇಲ್ಲಿ ಅದಕ್ಕೆ ಬದಲಾಗಿ ಟೆಂಡರ್ ಮೊತ್ತ ಪಾವತಿಗೆ ಅವಕಾಶ ನೀಡಿದ್ದಾದರೂ ಹೇಗೆಂದು ಎಸ್.ಸಿ. ಸತೀಶ್ ಪ್ರಶ್ನಿಸಿದರು. ಇದೀಗ ಹಣ ಪಾವತಿಯಾಗಿಲ್ಲ ಎಂದು ಶುಲ್ಕ ವಸೂಲಾತಿ ಸ್ಥಗಿತ ಮಾಡಲು ಪೌರಾಯುಕ್ತರು ಕ್ರಮ ಕೈಗೊಂಡಿರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.

ಪೌರಾಯುಕ್ತ ರಮೇಶ್ ಮಾತನಾಡಿ, ರಾಜಾಸೀಟು ಬಳಿಯ ಪಾರ್ಕಿಂಗ್ ಶುಲ್ಕ ಸ್ಥಗಿತಗೊಳಿಸುವಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಮೌಖಿಕವಾಗಿ ತಿಳಿಸಿದ್ದು, ಈ ಬಗ್ಗೆ ತಾನು ಲಿಖಿತ ಹೇಳಿಕೆಯನ್ನು ತಯಾರಿಸಿ ಅವರಿಂದ ಸಹಿ ಪಡೆದುಕೊಂಡು ಪಾರ್ಕಿಂಗ್ ಟೆಂಡರ್ ಸ್ಥಗಿತಕ್ಕೆ ನೋಟಿಸ್ ನೀಡಿರುವುದಾಗಿ ತಿಳಿಸುವುದರೊಂದಿಗೆ ಚರ್ಚೆ ಮತ್ತಷ್ಟು ಕಾವೇರುವಂತೆ ಮಾಡಿದರು. ಮತ್ತೆ ಸದಸ್ಯ ಎಸ್.ಸಿ.ಸತೀಶ್, ಇಲ್ಲಿ ಟೆಂಡರ್ ಸ್ಥಗಿತಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆದರೆ, ಅದೇ ಮೀನು ಮಾರುಕಟ್ಟೆ ವಿಷಯದಲ್ಲಿ ಮಳಿಗೆ ಸ್ಥಗಿತಗೊಳಿಸಿ ಮತ್ತೆ ಅವಕಾಶ ನೀಡದಿರಲು ಕಾರಣವೇನು ಎಂದು ಪ್ರಶ್ನಿಸಿದರು.

ಈ ಹಂತದಲ್ಲಿ ಈಗಾಗಲೆ ಸ್ಥಗಿತಗೊಳಿಸಲಾಗಿರುವ ಮೀನು ಮಳಿಗೆಗಳನ್ನು ಪುನರಾರಂಭಿಸಲು ಅವಕಾಶ ನೀಡುವಂತೆ ಸದಸ್ಯರು ಮಾಡಿದ ಆಗ್ರಹಕ್ಕೆ ಅಧ್ಯಕ್ಷರು ಒಪ್ಪಿಗೆ ಸೂಚಿಸಿದರು.

ಚರ್ಚೆಯ ನಡುವೆ ರಾಜೇಶ್ ಯಲ್ಲಪ್ಪ ಮಾತನಾಡಿ, ರಾಜಾಸೀಟು ಪಾರ್ಕಿಂಗ್ ಶುಲ್ಕ ವಸೂಲಾತಿ ಸ್ಥಗಿತ ಕೇವಲ ವೈಯಕ್ತಿಕ ಕಾರಣಗಳಿಂದ ನಡೆದಿದೆ ಎಂದು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮೇಲೆ ಆರೋಪಿಸಿದರು. ಇದಕ್ಕೆ ಉಪಾಧ್ಯಕ್ಷ ಮಹೇಶ್ ಜೈನಿ, ಇಂತಹ ಯಾವುದೇ ವೈಯಕ್ತಿಕ ಕಾರಣಗಳಿಂದ ಇದನ್ನು ಮಾಡಿಲ್ಲ ಎಂದು ತಿರುಗೇಟಿನ ಮೂಲಕ ಸ್ಪಷ್ಟಪಡಿಸಿದರು.

ಶಾಸಕರಿಂದ ಕೂಟಿಯಾಲ ಸೇತುವೆ ವೀಕ್ಷಣೆ



ಸಾರ್ವಜನಿಕರ ಒತ್ತಾಯದ ಮೇರೆಗೆ ಶಾಸಕ ಪೊನ್ನಣ್ಣ ಬುಧವಾರ ಕೂಟಿಯಾಲ ಸೇತುವೆಯನ್ನು ವೀಕ್ಷಿಸಿದರು.

ಗೋಣಿಕೊಪ್ಪ, ಅ.29–ಸಾರ್ವಜನಿಕರ ಒತ್ತಾಯದ ಮೇರೆಗೆ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಬುಧವಾರ ಪೊನ್ನಂಪೇಟೆ ತಾಲೂಕು ಬಿ ಶೆಟ್ಟಿಗೇರಿ ಮತ್ತು ಬಾಡಗರ ಕೇರಿ– ಬಿರುನಾಣಿ ಸಂಪರ್ಕಿಸುವ ಕೂಟಿಯಾಲ ಸೇತುವೆಯನ್ನು ವೀಕ್ಷಿಸಿದರು.

ಕೂಟಿಯಾಲ ರಸ್ತೆ ಹಾಗೂ ಸೇತುವೆ ವಿಷಯ ಈಗಾಗಲೇ ನ್ಯಾಯಾಲಯದಲ್ಲಿದ್ದು ಇದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದರು. ಶಾಸಕರು ಸ್ಥಳಕ್ಕೆ ತೆರಳಿ ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದ ಬಳಿಕ ಪರ್ಯಾಯ ಮಾರ್ಗ ಒದಗಿಸುವ ಬಗ್ಗೆಯೂ ಚರ್ಚಿಸಿದರು. ಎಲ್ಲವನ್ನು ಕೂಲಂಕುಶವಾಗಿ ಪರಿಶೀಲಿಸಿ ಅತಿ ಶೀಘ್ರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಶಾಸಕರು ಭರವಸೆ ನೀಡಿದರು.

ಬಗರ್ ಹುಕುಂ ತಾಲೂಕು ಅಧ್ಯಕ್ಷ ಅಣ್ಣಳವಾಡ ಲಾಲಾ ಅಪ್ಪಣ್ಣ, ಪಂಚಾಯಿತಿ ಅಧ್ಯಕ್ಷ ಕೊಲ್ಲಿರ ಬೋಪಣ್ಣ, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಉಮೇಶ್ ಕೇಚಮಯ್ಯ, ರೋಹಿತ್, ಅನು, ಅಯ್ಯಪ್ಪ, ಜಗನ್, ರಾಜ, ಈರಪ್ಪ, ನಂದ, ಅಣ್ಣಳವಾಡ ಹರೀಶ್, ಕುಪ್ಪಣ್ಣಮಾಡ ಪ್ರೀತಮ್, ಜೀತು, ರಶೀದ್, ಅರಣ್ಯ ಇಲಾಖೆಯ ಅಧಿಕಾರಿಗಳು, ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಅಂಗಡಿ ಕಿಟಕಿ ಸರಳು ಮುರಿದು ಕಳವು

ಮಡಿಕೇರಿ,ಅ.29– ಮಳಿಗೆಯ ಕಿಟಕಿಯ ಸರಳು ಮುರಿದು ಒಳ ನುಗ್ಗಿ ನಗದು, ಬೀಡಿ, ಸಿಗರೇಟು ಸೇರಿ 5 ಸಾವಿರ ರೂ. ಮೌಲ್ಯದ ಪದಾರ್ಥಗಳನ್ನು ಕದ್ದೊಯ್ದಿರುವ ಘಟನೆ ಕಿರುಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಭವಿಸಿದೆ.

ಪೊನ್ನಂಪೇಟೆ ತಾಲೂಕಿನ ಕಿರುಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತ್ತೂರು ಜಂಕ್ಷನ್‌ನಲ್ಲಿರುವ ವಾಣಂಡ ದರ್ಶನ್ ಎಂಬುವರಿಗೆ ಸೇರಿದ ಮಳಿಗೆಯಲ್ಲಿ ಈ ಕಳವು ಪ್ರಕರಣ ನಡೆದಿದೆ.

ಮಂಗಳವಾರ ರಾತ್ರಿ ಎಂದಿನಂತೆ ಮಾಲೀಕರು ಮಳಿಗೆಗೆ ಬೀಗ ಹಾಕಿ ಮನೆಗೆ ತೆರಳಿದ್ದು, ಬುಧವಾರ ಬೆಳಿಗ್ಗೆ ಮಾಲೀಕ ದರ್ಶನ್ ಅಂಗಡಿ ಮಳಿಗೆ ಯನ್ನು ತೆರೆದ ಸಂದರ್ಭದಲ್ಲಿ ಕಳ್ಳತನ ನಡೆದಿರುವುದು ಅರಿವಾಗಿದೆ. ಅಂಗಡಿ ಮಳಿಗೆಯ ಹಿಂಬದಿಯ ಕಿಟಕಿಗೆ ಅಳವಡಿಸಿದ್ದ ಕಬ್ಬಿಣದ ಸಲಾಕೆಗಳನ್ನು ಕಿತ್ತು ಕಳ್ಳರು ಒಳ ನುಗ್ಗಿದ್ದು, ಒಳಗೆ ಇರಿಸಿದ್ದ, 2 ಸಾವಿರ ಮೊತ್ತದ ಸಿಗರೇಟ್, ಬೀಡಿ, ಪ್ಲಾಸ್ಟಿಕ್ ಡಬ್ಬಿಯಲ್ಲಿ ಇರಿಸಿದ್ದ 3 ಸಾವಿರ ರೂ. ನಗದು ಹಾಗೂ ಮತ್ತಿತರ ಸಾಮಗ್ರಿಗಳನ್ನು ಕಳ್ಳತನ ಮಾಡಿರುವುದು ಕಂಡು ಬಂದಿದೆ.

ಈ ಬಗ್ಗೆ ಪೊನ್ನಂಪೇಟೆ ಪೊಲೀಸರಿಗೆ ದೂರು ನೀಡಿದ ಮೇರೆಗೆ ಪೊಲೀಸ್ ಠಾಣಾಧಿಕಾರಿ ನವೀನ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಕಳೆದ ವರ್ಷವೂ ಅಂಗಡಿ ಮಳಿಗೆಯ ಬಾಗಿಲಿನ ಬೀಗ ಒಡೆದು ಕಳ್ಳರು ಕೆಲವೊಂದು ಸಾಮಗ್ರಿಗಳನ್ನು



ಕಳ್ಳತನಕ್ಕೆ ಕಿಟಕಿಯ ಸರಳು ಮುರಿದಿರುವುದು.

ಕಳ್ಳತನ ಮಾಡಿದ್ದರು. ನೆನ್ನೆ ದಿನ ರಾತ್ರಿ ಅಂಗಡಿ ಬಾಗಿಲು ಮುಚ್ಚಿ ಬೀಗ ಹಾಕಿ ಮನೆಗೆ ತೆರಳಿದ್ದೆವು. ಇಂದು ಬೆಳಿಗ್ಗೆ ಅಂಗಡಿ ಬಾಗಿಲು ತೆರೆದು ನೋಡಿದಾಗ ಕಳ್ಳತನ ಎಸಗಿರುವುದು ಕಂಡು ಬಂದಿದೆ ಎಂದು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ಅಂಗಡಿ ಮಾಲೀಕ ವಾಣಂಡ ದರ್ಶನ್ ತಿಳಿಸಿದ್ದಾರೆ. ಈ ಘಟನೆ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಎಪಿಎಂಸಿಗೆ ಅವಿರೋಧ ಆಯ್ಕೆ

ವಿರಾಜಪೇಟೆ, ಅ.29–ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 11 ಮಂದಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

'ಎ' ತರಗತಿ ಸಹಕಾರ ಸಂಘಗಳ ಪರವಾಗಿ ವಾಟೇರಿರ ಟಿ.ಪ್ರೇಮ್ ನಾಣಯ್ಯ, ಪಳಂಗಂಡ ಸಿ.ರಾಕೇಶ್, 'ಬಿ' ತರಗತಿ ಸಾಮಾನ್ಯ ಸ್ಥಾನಕ್ಕೆ ಕುಂಬೆರ ಎ.ಮನು ಕುಮಾರ್, ಪುಟ್ಟಿಚಂಡ ಟಿ.ನರೇಂದ್ರ, ಮಾಳೇಟಿರ ಬಿ.ದೇವಯ್ಯ ಚುಕ್ಕು, ಹಿಂದುಳಿದ ಪ್ರವರ್ಗ "ಎ" ಮೀಸಲು ಸ್ಥಾನಕ್ಕೆ ಬಿ.ಎಲ್.ರಾಮಚಂದ್ರ, ಹಿಂದುಳಿದ ಪ್ರವರ್ಗ "ಬಿ"ಮೀಸಲು ಸ್ಥಾನಕ್ಕೆ ಕಾಣತಂಡ ಎಂ.ಬೋಪಣ್ಣ, ಮಹಿಳಾ ಸದಸ್ಯ ಸ್ಥಾನಕ್ಕೆ ಕೋದಂಡ ಮಂಜುಳ ಅಯ್ಯಪ್ಪ, ಇಟ್ಟಿರ ಸಿ.ಮಾಲತಿ, ಪರಿಶಿಷ್ಟ ಜಾತಿ ಮೀಸಲು ಸ್ಥಾನಕ್ಕೆ ಹೆಚ್.ಆರ್.ಕುಂಜ, ಪರಿಶಿಷ್ಟ ವರ್ಗ ಮೀಸಲು ಸ್ಥಾನಕ್ಕೆ ಪರಿವಾರ ಪಿ.ಸುರೇಶ್ ಅವರುಗಳು ಆಯ್ಕೆಯಾಗಿದ್ದಾರೆ ಎಂದು ವ್ಯವಸ್ಥಾಪಕರಾದ ಎಂ.ಎಸ್.ವಿಶ್ವನಾಥ್ ತಿಳಿಸಿದ್ದಾರೆ.

ಕಾಮವ್ವ ನಿಧನ



ನಾಪೋಕ್ಲು, ಅ.29–ಸಮೀಪದ ಹಳೇ ತಾಲೂಕು ನಿವಾಸಿ ದಿವಂಗತ ಕುಂದ್ಯೆರೀರ ಪೂವಯ್ಯ ಅವರ ಧರ್ಮಪತ್ನಿ ಕಾಮವ್ವ (90) ನಿಧನರಾದರು. ಮೃತರ ಅಂತ್ಯಕ್ರಿಯೆ ನಿನ್ನೆ ಹಳೇ ತಾಲೂಕಿನಲ್ಲಿರುವ ಕುಂದ್ಯೆರೀರ ಕುಟುಂಬದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಮೂವರು ಪುತ್ರಿಯರು ಸೇರಿ ದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಸಂತಮೇರಿ ಆಂಗ್ಲ ಮಾಧ್ಯಮ ಶಾಲೆಗೆ ಜಿಲ್ಲಾ ಪ್ರಶಸ್ತಿ



ಸುಂಟಿಕೊಪ್ಪದ ಸಂತಮೇರಿ ಆಂಗ್ಲ ಮಾಧ್ಯಮ ಶಾಲೆಯ ಬಾಲಕಿಯರ ತಂಡ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಸುಂಟಿಕೊಪ್ಪ,ಅ.29–ಜಿಲ್ಲಾ ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಸುಂಟಿಕೊಪ್ಪದ ಸಂತಮೇರಿ ಆಂಗ್ಲ ಮಾಧ್ಯಮ ಶಾಲೆಯ 14ರ ವಯೋಮಾನದ ಬಾಲಕಿಯರ ತಂಡ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಜಿಲ್ಲಾ ಮಟ್ಟದ 14ರ ವಯೋಮಾನದವರಿಗೆ ಟೇಬಲ್ ಟೆನ್ನಿಸ್ ಪಂದ್ಯಾವಳಿಯನ್ನು ಕೊಡಗರಹಳ್ಳಿ ಶಾಂತಿನಿಕೇತನ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಪಂದ್ಯಾವಳಿಯಲ್ಲಿ ಜಿಲ್ಲೆಯ 5 ತಾಲೂಕುಗಳ ತಂಡಗಳು ಭಾಗವಹಿಸಿದ್ದು ಸಂತಮೇರಿ ಆಂಗ್ಲ ಮಾಧ್ಯಮ ಬಾಲಕಿಯರ ತಂಡ ಮಡಿಕೇರಿ ತಾಲೂಕು ತಂಡವನ್ನು ಸೋಲಿಸುವ ಮೂಲಕ ಪ್ರಶಸ್ತಿಯನ್ನು ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಯಿತು.

ಪುನೀತ್ ರಾಜ್‌ಕುಮಾರ್ 4ನೇ ವರ್ಷದ ಪುಣ್ಯಸ್ಮರಣೆ

ಮಡಿಕೇರಿ,ಅ29–ಕುಶಾಲನಗರದ ಜನತಾ ಕಾಲೋನಿ ಹಾಗೂ ಮುಳ್ಳುಸೋಗೆ ಗ್ರಾಮದ ಡಾ. ಪುನೀತ್ ರಾಜ್ ಕುಮಾರ್ ಅಭಿಮಾನಿ ಬಳಗದ ವತಿಯಿಂದ ಜನತಾ ಕಾಲೋನಿಯಲ್ಲಿ ಪವರ್ ಸ್ಟಾರ್ ದಿವಂಗತ ಪುನಿತ್ ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಪುಣ್ಯಸ್ಮರಣೆ ಅಂಗವಾಗಿ ಸಾರ್ವಜನಿಕರಿಗೆ ಅನ್ನದಾನ ಕಾರ್ಯಕ್ರಮಕ್ಕೆ ಪೊಲೀಸ್ ವೃತ್ತ ನಿರೀಕ್ಷಕ ದಿನೇಶ್ ಕುಮಾರ್ ಚಾಲನೆ ನೀಡಿದರು. ಅಭಿಮಾನಿ ಬಳಗದ ಕಾರ್ಯದರ್ಶಿ ಸಚಿನ್, ಸದಸ್ಯ ಲೋಕೇಶ್ ಮಾತನಾಡಿದರು. ಅಭಿಮಾನಿ ಬಳಗದ ಅಧ್ಯಕ್ಷ ಶಿವರಾಜ್, ಸದಸ್ಯರಾದ ಮಹೇಶ, ಸಂತೋಷ್, ವೇಣುಕುಮಾರ್, ಜೀವನ್, ರಾಜೀವ್, ಅನುದೀಪ್, ಅನಂತ್ ಉಪಸ್ಥಿತರಿದ್ದರು.



ಪುನೀತ್ ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಕುಳ್ಳೂರು ಗ್ರಾಮದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಚಾಮರಾಜನಗರ, ಅ.29– ತಾಲೂಕಿನ ಪುನಜನೂರು ಗ್ರಾಪಂ ವ್ಯಾಪ್ತಿಯ ಕೋಳಿಪಾಳ್ಯ, ಕುಳ್ಳೂರು ಗ್ರಾಮದ ರಸ್ತೆ ಚರಂಡಿ, ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು

ಟಿಎಸ್‌ಪಿ ಯೋಜನಾಡಿಯಲ್ಲಿ ಕುಳ್ಳೂರು ಗ್ರಾಮದಲ್ಲಿ ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿ ನಿರ್ಮಾಣಕ್ಕೆ 50 ಲಕ್ಷರೂ. ಎಸ್.ಇ.ಪಿ ಯೋಜನೆ ಯಡಿಯಲ್ಲಿ ಕೋಳಿಪಾಳ್ಯೆ ಗ್ರಾಮಕ್ಕೆ 50 ಲಕ್ಷ ರೂ.ವೆಚ್ಚದಲ್ಲಿ ಸಿಮೆಂಟ್ ಕಾಂಕ್ರಿಟ್ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಈಗಾಗಲೇ ಸರ್ಕಾರದಿಂದ ಬರುವ ಸವಲತ್ತುಗಳನ್ನು ಗಿರಿಜನ ಹಾಡಿಗಳಿಗೆ ವಿತರಿಸಲಾಗಿದೆ, ಆಶ್ರಯ ಮನೆ, ರಸ್ತೆ, ಚರಂಡಿ, ಕುಡಿಯುವ ನೀರು ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ಧರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ ಆಶ್ರಯ ಮನೆ ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರಕಾರ ಮಂಜೂರು ಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದು ತಿಳಿಸಿದರು.

ಕೃಷಿ ಪತ್ತಿನ ಸಹಕರ ಸಂಘದ ಅಧ್ಯಕ್ಷ ಆರ್, ಮಣಿನಾಯಕ್, ಪುನಜನೂರು ಗ್ರಾ.ಪಂ ಉಪಾಧ್ಯಕ್ಷ ರಾಚ್ಚಯ್ಯ, ಸದಸ್ಯರಾದ ಪಿ, ನಾಗನಾಯಕ, ಮಹೇಶ್ ನಾಯಕ್, ಲಲಿತಾಬಾಯಿ, ಸಣಕ್ಕಿಗೌಡ ಗ್ರಾ.ಪಂ ಮಾಜಿ ಅಧ್ಯಕ್ಷೆ ಶಾಂತಮ್ಮ, ಷಮೀರ್‌ಪಾಷ, ಕಾರ್ಮಿಕ ವಿಭಾಗದ ಜಿಲ್ಲಾ ಕಾರ್ಯಾಧ್ಯಕ್ಷ ಪಿ. ಕುಮಾರ ನಾಯಕ್, ಮುಖಂಡರಾದ ಯು, ನಾಗನಾಯಕ, ರಾಜೇಂದ್ರನಾಯಕ್, ಜಡೆಯಪ್ಪ ಉಲ್ಲೇಶ್ ನಾಯಕ್, ಬಾಲುನಾಯಕ, ಶಂಕರ್‌ಮೂಡಳ್ಳಿ, ಮಹದೇವ ನಾಯಕ, ಮಹೇಂದ್ರ, ಬಾಬು, ಸುರೇಶ್, ಮೋಹನ್‌ನಾಯಕ್ ವಿಜಿ, ಮಹೇಂದ್ರ ನಾಯಕ್, ಗ್ರಾ.ಪಂ ಕಾರ್ಯದರ್ಶಿ ಲಕ್ಷ್ಮಣ್‌ನಾಯಕ್, ಇಂಜಿನಿಯರ್ ಮಧು ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಗ್ರಾಚ್ಯುಟಿ ಬಿಡುಗಡೆಗೆ ಒತ್ತಾಯಿಸಿ

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಚಾಮರಾಜನಗರ, ಅ.29–ಸುಪ್ರೀಂ ಕೋರ್ಟ್ ಆದೇಶದಂತೆ ನಿವೃತ್ತಿಯಾದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೂ ಗ್ರಾಚ್ಯುಟಿ ಮೊತ್ತವನ್ನು ಮಂಜೂರು ಮಾಡುವಂತೆ ಒತ್ತಾಯಿಸಿ ರಾಜ್ಯ ಅಂಗನವಾಡಿ ನೌಕರರ ಸಂಘದ ತಾಲೂಕು ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾನಿರತರು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಕೆ.ಸುಜಾತ ಮಾತನಾಡಿ, 2023 ರ ಜನವರಿಯಲ್ಲಿ ನಡೆದ ದೀರ್ಘ ಚಳವಳಿ



ಗ್ರಾಚ್ಯುಟಿ ಮೊತ್ತವನ್ನು ಮಂಜೂರು ಮಾಡುವಂತೆ ಒತ್ತಾಯಿಸಿ ರಾಜ್ಯ ಅಂಗನವಾಡಿ ನೌಕರರ ಸಂಘದ ತಾಲೂಕು ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಹಿನ್ನೆಲೆಯಲ್ಲಿ ಫೆಬ್ರವರಿ 2ರಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗ್ರಾಚ್ಯುಟಿಯನ್ನು ಜಾರಿ ಮಾಡಿದೆ. ಈ ಆದೇಶ 2011 ರಿಂದ 2023 ರವರೆಗೆ ನಿವೃತ್ತಿಯಾದ 10.311 ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ 11,980 ಸಹಾಯಕಿಯರಿಗೆ ಅನ್ವಯಿಸಬೇಕು ಎಂದು ಸತತವಾಗಿ ಒತ್ತಾಯ ಮಾಡಿದರಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ 183 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಹಣಕಾಸು ಇಲಾಖೆಗೆ ಮನವಿ ಸಲ್ಲಿಸಲಾಗಿತ್ತು. ಆದರೆ, ಈವರೆಗೂ ಅನುದಾನ ಬಿಡುಗಡೆ ಮಾಡಿಲ್ಲ. ಆದ್ದರಿಂದ ಶೀಘ್ರವಾಗಿ ಅನುದಾನವನ್ನು ಬಿಡಗಡೆ ಮಾಡಬೇಕೆಂದು ಸಿಡಿಪಿಒ ನಾಗೇಶ್ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶಾಹಿದಾ ಬಾನು, ಖಜಾಂಚಿ ಗುರುಲಿಂಗಮ್ಮ, ಚಿಕ್ಕತಾಯಮ್ಮ, ಸೋಮಮ್ಮ, ಜಯಮ್ಮ, ಪುಷ್ಪಾವತಿ, ಕಾವೇರಿ, ನಾಗರತ್ನ, ಸಂಪತ್ತುಮಾರಿ, ರಾಜಮ್ಮ, ಶಶಿಕಲಾ, ಲಕ್ಷ್ಮೀ, ಮಣಿ, ಮಾದಲಾಂಬಿಕಾ ಹಾಗೂ ಇತರರು ಭಾಗವಹಿಸಿದ್ದರು.

ಸೋಮಹಳ್ಳಿ ಗ್ರಾ.ಪಂ ಪಿಡಿಒ ಅಮಾನತ್ತಿಗೆ ಆದೇಶ

ಚಾಮರಾಜನಗರ: ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ತಾಲೂಕಿನ ಅಮಚವಾಡಿ ಗ್ರಾಮ ಪಂಚಾಯಿತಿ ಹಿಂದಿನ ಪಿಡಿಓಯಾಗಿದ್ದು, ಪ್ರಸ್ತುತ ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿ ಗ್ರಾ.ಪಂ.ಯಲ್ಲಿರುವ ಬಿ.ಕೆ. ಶ್ರೀನಿವಾಸ್ ಅವರನ್ನು ಅಮಾನತುಗೊಳಿಸಿ ಜಿಪಂ ಸಿಇಓ ಮೋನಾ ರೋತ್ ಆದೇಶ ಹೊರಡಿಸಿದ್ದಾರೆ. ಅಮಚವಾಡಿ ಗ್ರಾಪಂನ 15ನೇ ಹಣಕಾಸು ಯೋಜನೆಯಡಿ ಅನುದಾನ ಬಳಕೆಯಲ್ಲಿ ನಿಯಮ ಉಲ್ಲಂಘನೆ ಸಂಬಂಧ ವರದಿ ಸಲ್ಲಿಕೆಯಾಗಿರುವ ಕಾರಣ ಹಣ ದುರುಪಯೋಗ ಹಾಗೂ ಬೇಜವಾಬ್ದಾರಿ ಹಿನ್ನೆಲೆಯಲ್ಲಿ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಿವೃತ್ತಿ ಫಲಾನುಭವಿಗಳಿಗೆ 7.5 ಲಕ್ಷ ಪರಿಹಾರ ವಿತರಣೆ



ಹಾಲು ಉತ್ಪಾದಕ ಸಹಕಾರ ಸಂಘದ ಫಲಾನುಭವಿಗಳಿಗೆ ಪರಿಹಾರದ ಚೆಕ್ ವಿತರಿಸಲಾಯಿತು.

ಗುಂಡ್ಲುಪೇಟೆ,ಅ–29 (ಸೋಮ್.ಜಿ)– ಹಾಲು ಉತ್ಪಾದಕ ಸಹಕಾರ ಸಂಘದ ಸಿಬ್ಬಂದಿಗಳಿಗೆ ನೀಡುವ ಪರಿಹಾರವನ್ನು ಫಲಾನುಭವಿಗಳಿಗೆ 7.5 ಲಕ್ಷ ರೂ.ಗಳ ಚೆಕ್ ವಿತರಿಸಲಾಯಿತು.

ನಿವೃತ್ತಿ ಹೊಂದಿದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ಒಕ್ಕೂಟದ ವತಿಯಿಂದ ನಿವೃತ್ತ ಪರಿಹಾರ ನೀಡುತ್ತಿದ್ದು ಅದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಚಾಮುಲ್ ನಿರ್ದೇಶಕ ಹೆಚ್‌ಎಸ್ ನಂಜುಂಡ ಪ್ರಸಾದ್ ಸಲಹೆ ನೀಡಿದರು. ಸಹಕಾರ ಸಂಘಗಳಲ್ಲಿ ಸಿಗುವ ಸೌಲಭ್ಯಗಳು ಯಾವುದೇ ಖಾಸಗಿ ಡೈರಿಗಳಲ್ಲಿ ಸಿಗುವುದಿಲ್ಲ ಇದನ್ನರಿತುಕೊಂಡು ಸಿಬ್ಬಂದಿ ಇನ್ನೂ ಹೆಚ್ಚಿನ ಆಸಕ್ತಿಯಿಂದ ಕೆಲಸ ನಿರ್ವಹಿಸಿ ಲಾಭದತ್ತ ಕೊಂಡೊಯ್ಯುವಂತೆ ಕಿವಿಮಾತು ಹೇಳಿದರು.

ನಿರ್ದೇಶಕ ಎಂ.ಪಿ.ಸುನಿಲ್ ಮಾತನಾಡುತ್ತಾ ಸಂಘಗಳಲ್ಲಿ ಹಾಲಿನ ಗುಣಮಟ್ಟ ಹಾಗೂ ಸಂಘವನ್ನು ಉತ್ತಮ ಸ್ಥಿತಿಗೆ ಕೊಂಡೊಯ್ಯುವಲ್ಲಿ ಸಿಬ್ಬಂದಿಗಳ ಪಾತ್ರ ಬಹುಮುಖ್ಯವಾಗಿದೆ. ಸಿಬ್ಬಂದಿಗಳಿಗೆ ಆತ್ಮಸ್ಥೈರ್ಯ ತುಂಬುವ ಉದ್ದೇಶದಿಂದ ಈ ಯೋಜನೆ ಜಾರಿಯಲ್ಲಿದ್ದು ಸಂಘಗಳಲ್ಲಿ ಉತ್ತಮ ಸೇವೆ ಸಲ್ಲಿಸಿ ಸೌಲಭ್ಯಗಳನ್ನು ಪಡೆಯುವಂತೆ ತಿಳಿಸಿದರು.

ಚಾಮುಲ್ ವಿಸ್ತರಣಾಧಿಕಾರಿ ಎಚ್ ಪ್ರಕಾಶ್, ಮುದ್ದಪ್ಪ ಉದಯ್ ಕುಮಾರ್, ಮಂಜೇಶ್ ಹಾಗೂ ಫಲಾನುಭವಿಗಳಾದ ಬಸವಣ್ಣ ಹುಂಡಿಪುರ ಮಲ್ಲಿಗಮ್ಮ ಶೆಟ್ಟಳ್ಳಿ ಮೊದಲಾದವರು ಹಾಜರಿದ್ದರು.

ರಾಷ್ಟ್ರಮಟ್ಟದ ಮುಕ್ತ ಕರಾಟೆ ಸ್ಪರ್ಧೆ

ಮಾಸ್ಟರ್ ಕರಾಟೆ ತಂಡಕ್ಕೆ ಬಹುಮಾನ



ಮೈಸೂರಿನಲ್ಲಿ ನಡೆದ ಐದನೇ ರಾಷ್ಟ್ರಮಟ್ಟದ ಮುಕ್ತ ಕರಾಟೆ ಚಾಂಪಿಯನ್ ಷಿಪ್‌ನಲ್ಲಿ ಕೊಳ್ಳೇಗಾಲದ ವಿದ್ಯಾರ್ಥಿಗಳು 11 ಬಹುಮಾನ ಗಳಿಸಿ ಸಾಧನೆಗೈದಿದ್ದಾರೆ

ಕೊಳ್ಳೇಗಾಲ: ಎನ್ ವಿ ಯೋಧ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಮೈಸೂರು ವತಿಯಿಂದ ಟೊಷಿಯನ್ ಕಾಲೇಜು ಒಳಾಂಗಣದಲ್ಲಿ ಜರುಗಿದ ಐದನೇ ರಾಷ್ಟ್ರಮಟ್ಟದ ಮುಕ್ತ ಕರಾಟೆ ಚಾಂಪಿಯನ್ ಷಿಪ್‌ನಲ್ಲಿ ಕೊಳ್ಳೇಗಾಲದ ಮಾಸ್ಟರ್ ಕರಾಟೆ ಅಕಾಡೆಮಿ 14 ವಿದ್ಯಾರ್ಥಿಗಳು ಕಥಾ ಮತ್ತು ಕುಮಿಥೆ ವಿಭಾಗದಲ್ಲಿ ಭಾಗವಹಿಸಿ 11 ಬಹುಮಾನ ಗಳಿಸಿ ಸಾಧನೆಗೈದಿದ್ದಾರೆ. ಬೃತ್ವಕಣ್ವ, ಅನು, ನಯನ, ನವ್ಯಶ್ರೀ, ದೀಪಾಂಜಲಿ, ಲೋಚನ್, ಸೃಜನ್ ನಾಯಕ್, ಕೀರ್ತನ್, ಕರಣ್, ಭೂಮಿಕ, ಚಿರಂಜೀವಿ, ವಿಶ್ವ, ಕುಷಿಕ ಕಟ ಮತ್ತು ಕುಮಿತೆ ವಿಭಾಗದಲ್ಲಿ ಸಾಧನೆಗೈದಿದ್ದು ಸಾಧಕ ವಿದ್ಯಾರ್ಥಿಗಳನ್ನು ಆಯೋಜಕರಾದ ನಾಗಾಭರಣ, ಮೈಸೂರ್ ಕರಾಟೆ ಅಸೋಸಿಯೇಷನ್ ಕಾರ್ಯದರ್ಶಿ ಭಾರತಿ, ದೀಪಕ್, ಕರಾಟೆ ಶಿಕ್ಷಕ ಕೆ.ನಂಜುಂಡಸ್ವಾಮಿ, ಕೋಚ್‌ಗಳಾದ ಪ್ರತ್ಯೂಷ್ ಮತ್ತು ರಂಜಿತ ಬಹುಮಾನ ವಿಜೇತ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ

ಅಪ್ಪು ಎಂದೆಂದಿಗೂ ಅಜರಾಮರ

ಚಾಮರಾಜನಗರ, ಅ.29–ನಗರದ ಮಾರಿಗುಡಿ ಸಮೀಪದಲ್ಲಿರುವ ಶ್ರೀಕಾಮಧೇನು ಮಿಲ್ಕ್ ಪಾರ್ಲರ್ ಎದುರು ರಾಜರತ್ನ ಅಪ್ಪು ಯುವ ಸೇನಾ ಸಮಿತಿ ವತಿಯಿಂದ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ನಾಲ್ಕನೇ ವರ್ಷದ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

ಪುನೀತ್ ಫೋಟೋಗೆ ಪೂಜೆ ಸಲ್ಲಿಸಿದ ಅಭಿಮಾನಿಗಳು ಅಪ್ಪು ಗುಣಗಾನ ಮಾಡಿ ಸ್ಮರಿಸಿ ಇದೆ ಸಂದರ್ಭದಲ್ಲಿ ಅನ್ನಸಂತರ್ಪಣೆ ನಡೆಯಿತು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ರಾಜರತ್ನ ಅಪ್ಪು ಯುವಸೇನಾ ಸಮಿತಿ ಅಧ್ಯಕ್ಷ ಕ್ಯಾಂಟೀನ್ ಮಂಜು ಮಾತನಾಡಿ, ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಯುವಜನರ ಮನಸ್ಸಿನಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆ. ಅವರು, ತಮ್ಮ ನಟನೆ, ಸ್ನೇಹಪರ ಮತ್ತು ಆದರ್ಶ ವ್ಯಕ್ತಿತ್ವದಿಂದಾಗಿ ಯುವಕರ ಪಾಲಿನ ಸ್ಫೂರ್ತಿಯಾಗಿದ್ದರು. ಅವರು ಎಂದೆಂದಿಗೂ ಅಜರಾಮರರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಮಿತಿಯ ಮಂಜು ಮಿಲನ, ಕಾರ್ತಿಕ್‌ಪವರ್, ಮದನ, ಬಾಂಡ್ ರವಿ, ಮನು, ಮಧು,ರಮೇಶ್ ಮಂಗಲ ಮಾದೇಶ್, ಕುಮಾರ್, ಹರದನಹಳ್ಳಿ ಮಹೇಶ್, ವಿಷ್ಣು, ಮಣಿ, ಚಂದ್ರು, ಆಟೋ ಮಹೇಶ್, ಆದರ್ಶ, ಅಂಕಶೆಟ್ಟಿ, ಸಿ.ಆರ್. ಕೃಷ್ಣ, ರಾಜು, ಶಿವು ಇತರರು ಹಾಜರಿದ್ದರು.



ಶ್ರೀಕಾಮಧೇನು ಮಿಲ್ಕ್ ಪಾರ್ಲರ್ ಎದುರು ಯುವ ಸೇನಾ ಸಮಿತಿ ಪುನೀತ್ ರಾಜ್‌ಕುಮಾರ್ ನಾಲ್ಕನೇ ವರ್ಷದ ಪುಣ್ಯಸ್ಮರಣೆ ಆಚರಿಸಿತು.

ಇಂದು ನಗರದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಚಾಮರಾಜನಗರ: ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಅ.30ರ ಬೆಳಿಗ್ಗೆ 11 ಗಂಟೆಗೆ ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

House & Office space for rent
@ Saraswathipuram, Kuvempunagar & surroundings.
Mob: 93421-25252

Property for Sale
@ Jayanagar, Kuvempunagar, Saraswathipuram & surroundings
Mob: 93421-25252

MUDA Site for Sale
ಲಲಿತಾದ್ರಿಪುರ ಪಕ್ಕದ BVL PREMIO ಬಡಾವಣೆಯಲ್ಲಿ 40x60 ಸೈಟ್.
Mob: 9886048471

MUDA Site for SALE
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಪಕ್ಕ ನ್ಯಾಯಾಂಗ ಬಡಾವಣೆಯಲ್ಲಿ 37x40 North Face ಸೈಟ್
Mob: 9886048471

FOR SALE
35x50 Old House W/F @ Kuvempunagar Near Kamakshi Hospital
98456 01278
Hanu Reddy Realty®

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

SITE FOR SALE (MUDA) APPROVED
30X40 Just 1 Km to Sri Rampura Ring Road Circle, Mysuru
8050345574

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮ ವೇತನ + ಪಿಎಫ್ + ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಜೆ.ಪಿ. ನಗರ, ಹೆಬ್ಬಾಳು ಕೈಗಾರಿಕ ನಗರ ಮತ್ತು ಮೈಸೂರು ಸಿಟಿ.
7829393555
9739376832
9886200104

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಹೆಸರಾಂತ ದ್ವಿಚಕ್ರ ವಾಹನದ ಶೋರೂಂಗೆ ಕೂಡಲೇ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್ (Marketing Sales Executive).
ಕೂಡಲೇ ಸಂಪರ್ಕಿಸಿ: ಕರೆ ಮಾಡಿ.
Mob: 9743647484

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಅನುಬಂಧ ವೃದ್ಧಾಶ್ರಮ
(ಸಸ್ಯಹಾರಿಗಳಿಗೆ ಮಾತ್ರ) ವಯಸ್ಸಾದ, ಹಾಸಿಗೆ ಹಿಡಿದ ಮತ್ತು ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. (ಮಹಿಳೆಯರಿಗಾಗಿ ಮಾತ್ರ) ಸಂಪರ್ಕಿಸಿ
9880793910

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ– ₹ 10,800(24CT)
9108146123

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570 001
ದೂರವಾಣಿ: 9902639593

LAND FOR SALE ಜಮೀನು ಮಾರಾಟಕ್ಕಿದೆ
15 ಗುಂಟೆ ಕನ್ವರ್ಷನ್ ಆಗಿರುವ ಜಮೀನು ಜೆ.ಪಿ.ನಗರ ರಿಂಗ್ ರೋಡ್ ಹತ್ತಿರ ಹಾಗೂ A ಝೋನ್ ಪಕ್ಕದಲ್ಲಿದೆ. ಆಸಕ್ತರು ಸಂಪರ್ಕಿಸಿ
7411501819

For Rent
Godown suitable for agencies and storage. 1100 sq.ft. 200 M, behind H.D. Kote Road, Srirampura 2nd Stage, Mysore.
9901181768
9448421568

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (25 ರಿಂದ 35 ವರ್ಷ). ಹೌಸ್‌ಕೀಪಿಂಗ್ (25 ರಿಂದ 35 ವರ್ಷ). ಬೋಗಾದಿ, ರಾಜರಾಜೇಶ್ವರಿನಗರ, ಹೆಬ್ಬಾಳ್, ಮೇಟಗಳ್ಳಿ, ಕುಂಬಾರಕೊಪ್ಪಲ್, ಸಿಟಿ ಸುತ್ತಮುತ್ತ ಸಂಪರ್ಕಿಸಿ: (10 am to 6 pm)
Mob: 9036745292

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

RAI ESTATES
RERA APPROVED · MUDA APPROVED · E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 011

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9535175624

HOUSE FOR SALE
30x40 S/F GF 1st & 2nd Total 5BHK Vidyaranyapuram (Agent-Excuse)
9731188861

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಜಮೀನು ಮಾರಾಟಕ್ಕಿದೆ
ಮೈಸೂರಿನ ಆಂದೋಲನ ಸರ್ಕಲ್‌ನಿಂದ ಸ್ವಲ್ಪ ದೂರದ ಬಲ್ಲಹಳ್ಳಿ ಗ್ರಾಮದಲ್ಲಿ 8.5 ಎಕರೆ ಮಾರಾಟಕ್ಕಿದೆ. 3 ಬೋರ್, 70 ತೆಂಗು, 15 ಮಾವು, ಮನೆ, ಕೊಟ್ಟಿಗೆ, ತಂತಿ ಬೇಲಿ ಹಾಕಿರುವ ಕೆಂಪು ಮಣ್ಣಿನ ಉತ್ತಮ ದಾರಿ ಸಂಪರ್ಕ ಹೊಂದಿರುವ ಜಮೀನು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 9036284426

Wanted
Physical Education Teacher (PE) for a High School at Gundlupet. Any Degree with B.P.Ed. contact:
MoB: 9731897495

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108048064

2 BHK House for Rent
(Only for Vegetarian) Address: #1246, 2nd 'B' Main, Srirampura 2nd Stage, Mysore-570 023.
8296083057, 8095218110

ಸುವರ್ಣ ಯಾತ್ರಾ
7 ದಿನಗಳ ಅಂಡಮಾನ್ ಪ್ರವಾಸ 12–11–25
10 ದಿನಗಳ ಕಾಶಿ, ಅಯೋಧ್ಯಾ ನೇಪಾಳ ಮುಕ್ತಿನಾಥ ಪ್ರವಾಸ 18–11–25
9 ದಿನಗಳ ರಾಜಸ್ಥಾನ ಪ್ರವಾಸ 18–11–25
7 ದಿನಗಳ 2 ಜ್ಯೋತಿರ್ಲಿಂಗ ಪ್ರವಾಸ ಕಾಶಿ ಬಾಬಾ ಬೈದ್ಯನಾಥ, ಅಯೋಧ್ಯ 28/11/25
ಸುವರ್ಣ ಯಾತ್ರಾ
9019462508 / 9008381022

SITE FOR SALE
East facing corner site, Jnanabharathi Layout 30x40, City Bus Service is also available. 40 ft. Road. MUDA Khata and E-Khata ready. Direct owner.
Mob: 9342123373

ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ. ಅಂತರದಲ್ಲಿ 1–2 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ. ಸಂಪರ್ಕಿಸಿ:
Mob: 6364795551

ಕೆಲಸಕ್ಕೆ ಬೇಕಾಗಿದ್ದಾರೆ
MRP ವೈನ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
PART TIME AND FULL TIME
AGE LIMIT 21 to 35
9448563900, 8310449772

ತಕ್ಷಣ ಬೇಕಾಗಿದ್ದಾರೆ
ಟಿ. ನರಸೀಪುರ ರಸ್ತೆ, ಚಿಕ್ಕಳ್ಳಿ ಹಾಗೂ ಮೈಸೂರು ಸಿಟಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಸೆಕ್ಯೂರಿಟಿ ಸೂಪರ್ ವೈಸರ್ ಹಾಗೂ ಫೀಲ್ಡ್ ಆಫಿಸರ್ ಬೇಕಾಗಿದ್ದಾರೆ.
ESI,PF ಸೌಲಭ್ಯವಿರುತ್ತದೆ.
8971367078

Atharva's Security Serviices
ಮೈಸೂರಿನಾದ್ಯಂತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಬೌನ್ಸರ್ಸ್, ಕಂಪ್ಯೂಟರ್ ತರಬೇತಿ ಹೊಂದಿರುವ ಮತ್ತು ವಿವಿಧ ಸಂಘಗಳಲ್ಲಿ ಕೆಲಸ ಮಾಡಿ ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸಿ.
9513112155, 9513926655
ಎಂ ಪ್ರೋ ಪ್ಯಾಲೇಸ್ ಹೋಟೆಲ್ ಹಿಂಭಾಗ, ಮೈಸೂರು 570029

ಕೆಲಸ ಖಾಲಿ ಇದೆ
ಮೈಸೂರಿನಲ್ಲಿರುವ ಮಹಿಳೆಯರಿಗೆ, ಪುರುಷರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಫೀಸ್ ಕೆಲಸಗಳಿಗೆ ನೇರವಾಗಿ ಆಯ್ಕೆ. 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹವರಿಗೆ. ಸಂಬಳ: 20,000 ದಿಂದ 45,000. ಸಂಪರ್ಕಿಸಿ:
Mob: 8095133188

SITE FOR SALE
30x40 SITE - W/F MMG GRAND CITY. KRS Road, Mysuru. MUDA approved site. Clear documents.
Mob: 8971100199

ಬೇಕಾಗಿದ್ದಾರೆ
Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-25000/-
Ph.7406 369 369

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

House For Sale
20x30 MUDA allotted old House for Sale at Vijayanagara 4th Stage near 2nd Marimallappas School
0% Brokerage
Contact: Mysore Estates Vishwanath Gowda
9590911111

House for Rent
2BHK with Dining Hall Vitrified Flooring Solar & Electric Geyser @ Vijayanagar 3rd Stage
9916314393



SUNZONE SOLAR SYSTEM
VM Double Road, Kuvempunagar, Mysuru
9845175443

ಕಳೆದಿದೆ
ಬಸವರಾಜೇ ಅರಸ್, ಮೈಸೂರು ತಾಲ್ಲೂಕು # EWS 494, ಜಯನಗರ 2ನೇ ಹಂತ, ಹುಡ್ಕೋ 807, ಚಾಮರಾಜ ಮೊಹಲ್ಲಾ, ಕುವೆಂಪುನಗರ, ಮೈಸೂರು, ಹಂಗಾಮಿ ಸ್ವಾಧೀನ ಪತ್ರವು 26/11/1986 ಹಾಗೂ 04/02/1989 ಖಾತೆ ವರ್ಗಾವಣೆ ಪತ್ರವು ಕಳೆದುಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ
7019105747

ಶ್ರೀ ಗೊರವನಹಳ್ಳಿ ಮಹಾಲಕ್ಷ್ಮಿ ಟೂರಿಸ್ಟ್
16.11.2025, 9 ಜೋತಿರ್ಲಿಂಗ, ಕಾಶಿ, ಅಯೋಧ್ಯ, ಗುಜರಾತ್, ರಾಜಸ್ಥಾನ ಮಧ್ಯಪ್ರದೇಶ – ಪ್ರವಾಸ
9886829622

ಸೈಟು ಮಾರಾಟಕ್ಕಿದೆ
30x50 N/F, KBL SILICON CITY PHASE 2, BEML ಹತ್ತಿರ, KRS ROAD.
9243536373

ಬೇಕಾಗಿದ್ದಾರೆ
ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಸಂಬಳ 10,000) + Incentive) ಸ್ಥಳ : ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
Field Executives ಬೇಕಾಗಿದ್ದಾರೆ. (ಸಂಬಳ 17000) Field Manager ಬೇಕಾಗಿದ್ದಾರೆ (ಸಂಬಳ 25000 ರಿಂದ 30,000), ಸ್ಥಳ : ಮಂಡ್ಯ ಮತ್ತು ಹಾಸನ ಹಾಗೂ ಮೈಸೂರು
8150005111

Site For Sale
40x50 west facing Site For Sale at Teachers Layout off Rajkumar road
0% Brokerage
Contact: Mysore Estates Vishwanath Gowda
9590911111

1.5 ಎಕರೆ ತೋಟ ಮಾರಾಟಕ್ಕಿದೆ
ಕೆಆರ್ ಪೇಟೆ (ಮಂಡ್ಯ) ಇಂದ 8ಕಿ.ಮೀ ದೂರದಲ್ಲಿ 1. 5 ಎಕರೆ ತೋಟ (30 ತೆಂಗಿನಮರ) 55 ಲಕ್ಷಗಳಿಗೆ ಮಾರಾಟಕ್ಕಿದೆ.
8197665413

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/A, ಸರಸ್ವತಿಪುರಂ, ಮೈಸೂರು.
ನಾವು ನ್ಯಾಷನಲೈಸ್ಡ್ ಮತ್ತು ಎನ್.ಬಿ.ಎಫ್.ಸಿ ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. ಸಿಬಿಲ್ ತೊಂದರೆ ಇದ್ದರು 11B, 9 & 11A, ಮುಡಾ ಮತ್ತು ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿ ಕೊಡಲಾಗುವುದು.
8088647887

ಸೈಟುಗಳು ಮಾರಾಟಕ್ಕಿದೆ
ಇಲವಾಲ, ವಿಜಯನಗರ, ಬೋಗಾದಿ, ಜೆ.ಪಿ.ನಗರದಲ್ಲಿ ಮಾರುವವರು/ ಕೊಳ್ಳುವವರು ಸಂಪರ್ಕಿಸಿ
7899272101

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್ನಲ್ಲಿ, ಅಕೌಂಟ್ಸ್ ನಿರ್ವಹಣೆಗಾಗಿ, ಬಿ.ಕಾಮ್ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ
8073393505

ಸೈಟು ಮಾರಾಟಕ್ಕಿದೆ
30x50 N/F 11 A, ಖಾತೆ ರೇರಾ ಅಪ್ರೂಡ್ ಸೈಟು ಮಾರಾಟಕ್ಕಿದೆ. 23 ಲಕ್ಷಗಳು (Opp. Park) ಅಮೃತ ಕೋಕೋ ಶೆಲ್ಟರ್, GSS ಲೇಔಟ್, ತಳೂರು, TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ. ವಧುವರರ ಸಂಪೂರ್ಣ ಜಾತಕ ಉಚಿತವಾಗಿ ಪಡೆಯಿರಿ.
9448229184, 7899625268

ಶ್ರೀ ಶಂಕರ್ ಟೂರಿಸ್ಟ್
15–11–2025 (ಒಂದು ದಿನದ ಪ್ರವಾಸ) ಗೌಡಗೆರೆ ಚಾಮುಂಡೇಶ್ವರಿ, ಅಂಬೆಗಾಲು ಕೃಷ್ಣ, ರವಿಶಂಕರ್ ಗುರೂಜಿ ಆಶ್ರಮ (ART OF LIVING), ಪಿರಮಿಡ್ ವ್ಯಾಲಿ, ಚಿಕ್ಕ ತಿರುಪತಿ (ಕಲ್ಲಹಳ್ಳಿ), ಹೊಳೆ ಆಂಜನೇಯಸ್ವಾಮಿ, ಎಲ್ಲಾ ಸೇರಿ– ರೂ–800/–
7829837573, 6361882440

ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಗನ್ ಮ್ಯಾನ್‌ಗಳ ಅವಶ್ಯಕತೆ
ಇರುವವರು ಸಂಪರ್ಕಿಸಿ
9513121155
9513926655

ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರುಗಳು ಸೆಕ್ಯೂರಿಟಿ ಗಾರ್ಡುಗಳು, ಟೈಲರ್, ಹೆಲ್ಪರ್ ಹಾಗೂ ಡ್ರೈವರ್ Cum ಮಾರ್ಕೆಟಿಂಗ್, ವೆಲ್ಡರ್ ಮತ್ತು ಅಕೌಂಟೆಂಟ್‌ಗಳು ಬೇಕಾಗಿದ್ದಾರೆ
8105249880, 7795285485

ಬಣ್ಣದ ಕೆಲಸ, ಟೈಲ್ ಕೆಲಸ
ನಲ್ಲಿ ಕೆಲಸ ಮಾಡಿ ಕೊಡಲಾಗುವುದು
9480348124

ನಿವೃತ್ತರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹ ಸಂಸ್ಥೆಯಿಂದ ವಿಶೇಷ ಅವಕಾಶದ ಸೆಮಿನಾರ್
31-10-2025 11 AM ಹೋಟೆಲ್ ಮಯೂರ ಹೊಯಳ (ಮೆಟ್ರೋಪೋಲ್ ಹೋಟೆಲ್ ಎದುರು) ಮೈಸೂರು. ನಿವೃತ್ತರು, ವಿದ್ಯಾವಂತ ಗೃಹಿಣಿಯರು, ಬಿಸಿನೆಸ್ ವಲಯ ಇವರಿಗೆ ಆಹ್ವಾನ, Salary, Incentives, PF, ESI ಆಹ್ವಾನಿತರಿಗೆ ವಿಶೇಷ ಸನ್ಮಾನ.
Lunch Arranged
Contact : 9448188504, 7349052084, 9743672794

ಕಾಶಿ ಅಯೋಧ್ಯೆ ಧಾರ್ಮಿಕ ಯಾತ್ರೆ
7000 ರೂಪಾಯಿಗಳು ಮಾತ್ರ ಸರ್ಕಾರದಿಂದ 5000 ರೂ.ಗಳ ಸಹಾಯ ಧನ ಪಡೆಯಲು ಅವಕಾಶವಿರುತ್ತದೆ
9964683183, 8217360376

LOST
I, Doddathayamma, Lingadevara Koppal Village, Mydanahalli Post, Yelawala Hobli, Mysuru, have Lost Partition deed No. MYW-1-16441-2024-25, Finders please Contact Near by Police Station or
Mob : 9686807717

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ನೂತನವಾಗಿ ಆರಂಭವಾಗಿರುವ AWBM ಕಂಪನಿಗೆ ಕನ್ನಡಬಲ್ಲ 156 ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ವಿದ್ಯಾರ್ಹತೆ : SSLC, PUC, Diploma, ITI, Any Degree, M.Com etc. ವಯೋಮಿತಿ : 18-31 Years, ತಿಂಗಳಿಗೆ : 21,500 - 25500 (ಉಚಿತ ಊಟ + ವಸತಿಯಿದೆ) ಮೊದಲು ಬಂದವರಿಗೆ ಹೆಚ್ಚಿನ ಆದ್ಯತೆ. ಡಿಂಪಲ್
7090212014, 7349699460

ವರ ಬೇಕಾಗಿದೆ
33 ವರ್ಷದ ಪರಿಶಿಷ್ಟ ಜಾತಿಯ ಆದಿಕರ್ನಾಟಕ ಪಂಗಡದ MBA ಮಾಡಿ, ಪ್ರೈವೆಟ್(Pvt.) ಸಂಸ್ಥೆಯಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ವಧುವಿಗೆ. (ಡಿಗ್ರಿ ಅಥವಾ ಮಾಸ್ಟರ್ ಡಿಗ್ರಿ ಮಾಡಿರುವ) Govt./ Pvt./ Business ಮಾಡುತ್ತಿರುವ ವರ ಬೇಕಾಗಿದ್ದಾರೆ. (ಜಾತಿ ಅಭ್ಯಂತರವಿಲ್ಲ)
6360182288, 9342279234

ಹೋಟೆಲ್ ಬಾಡಿಗೆಗೆ ಬೇಕಾಗಿದೆ
ಮೈಸೂರಿನ ಸುತ್ತಮುತ್ತ ವೆಜ್ ಅಥವಾ ನಾನ್‌ವೆಜ್ ಹೋಟೆಲ್ ಬಾಡಿಗೆಗೆ ಬೇಕಾಗಿದೆ ಹಾಗೂ ಮ್ಯಾನೇಜರ್ ಕಮ್ ಕ್ಯಾಷಿಯರ್ ಮತ್ತು ಕುಕ್ ಬೇಕಾಗಿದ್ದಾರೆ. ಸಂಪರ್ಕಿಸಿ
8088419322

ಕಳೆದಿದೆ
ದೊಡ್ಡತಾಯಮ್ಮ, ಲಿಂಗದೇವರ ಕೊಪ್ಪಲು ಗ್ರಾಮ, ಮೈದನಹಳ್ಳಿ ಪೋಸ್ಟ್, ಇಲವಾಲ ಹೋಬಳಿ, ಮೈಸೂರು, ಇವರ ಸ್ವತ್ತಿನ ವಿಭಾಗ ಪತ್ರ ನಂ. MYW-1-16441-2024-25 ಕಳೆದಿದ್ದು, ಯಾರಿಗಾದರು ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ತಲುಪಿಸಬೇಕಾಗಿ ವಿನಂತಿ. ಅಥವಾ
ಸಂಪರ್ಕಿಸಿ : 9686807717

ತಕ್ಷಣ ಬೇಕಾಗಿದ್ದಾರೆ
Sri Sapthagiri Builders & Developers, Mysuru (Hebbal 1st Stage)
1) Marketing Executive - 02 Besic Salary 15000 K + incentive 2) Driver - 02
9591828444, 9980524644

ಬೇಕಾಗಿದ್ದಾರೆ
ಪುರುಷರು ಮಾತ್ರ ಬೇಕಾಗಿದ್ದಾರೆ. Maintenanceಗೆ ITI Candidates, ಹಾಗೂ ಹೆಲ್ಪರ್‌ಗಳು, ವಯಸ್ಸು 18 ರಿಂದ 45, ಸಂಬಳ : 17,500 +ESI, PF, ಹೆಚ್ಚಿನ ವಿವರಗಳಿಗೆ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ : CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

HOUSE FOR RENT
Duplex house with 3 BHK and inside car parking facility available for rent in Teachers Layout near Siddartha Layout
Contact No: 9845753036

ಬೇಕಾಗಿದ್ದಾರೆ
ಸರ್ಕಾರಿ ಕಛೇರಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ನಿರ್ವಹಿಸಲು ಪುರುಷ ಮತ್ತು ಮಹಿಳೆ ಗಾರ್ಡ್‌ಗಳು ಬೇಕಾಗಿದ್ದಾರೆ. ಹುದ್ದೆ : ಸೆಕ್ಯೂರಿಟಿ ಗಾರ್ಡ್, ಸ್ಥಳ : ಮೈಸೂರು, ಸಂಪರ್ಕಿಸಿ
9731251118, 8867567199

WANTED
DOSA MASTER/SOUTH INDIAN COOK, IDLI MAKER & COFFEE MAKER, EXPERIENCED CANDIDATES REQUIRED FOR A RESTAURANT IN MYSURU. GOOD SALARY, FOOD AND ACCOMMODATION PROVIDED
9513556615

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿರುವ & ಬೆಂಗಳೂರಿನಲ್ಲಿರುವ ಕಂಪನಿ ಮತ್ತು ಆಫೀಸ್‌ಗಳಿಗೆ 7th, 10th, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹ ಯುವಕ ಯುವತಿಯರಿಗೆ ವಸತಿ ಊಟದೊಂದಿಗೆ ಸಂಬಳ + ಓಟಿ ಸೇರಿ. 19000 ರಿಂದ 25000, H R ಸ್ನೇಹ:
9916744622, 9916788422

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೂಪರ್‌ವೈಜರ್ ಮೇಟಗಳ್ಳಿ, ಬೋಗಾದಿ, ಕೂರ್ಗಳ್ಳಿ ಏರಿಯಾದಲ್ಲಿ ಕೆಲಸ ಬಯಸುವವರು. ಸಂಪರ್ಕಿಸಿ
9035367083, 6361548626

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 18000 (8 hrs, 26 Days) ಊಟ, ತಿಂಡಿ, ರೂಮ್ ಸೌಲಭ್ಯವಿರುತ್ತದೆ.
9620777819, 9620667819

ಅಂಗಡಿ ಬಾಡಿಗೆಗೆ ಇದೆ
3½ x 4 ಮೀಟರ್ ಅಳತೆಯ ಅಂಗಡಿ ಬಾಡಿಗೆಗೆ ಇದೆ. ಸ್ಥಳ : ಬನ್ನಿಮಂಟಪ ಸಿ–ಬಡಾವಣೆ ಜೈನಾ ಬುಟಿಕ್ ಹತ್ತಿರ, ಸಂಪರ್ಕಿಸಿ
9886900935

ವಧು ಬೇಕಾಗಿದ್ದಾರೆ
ಹೆಸರು : ಡಾ. ಸಂತೋಷ್ ವಯಸ್ಸು : 34, ಜಾತಿ : ಕ್ರಿಶ್ಚಿಯನ್ ವೃತ್ತಿ : ಥೆರಪಿಸ್ಟ್, ಸ್ವಂತ ಆಸ್ಪತ್ರೆ ಯಾವ ಜಾತಿಯ ವಧು ಸಹ ಸಂಪರ್ಕಿಸಿ : ದೀಪಾ (ನಾವು ಬ್ರೋಕರ್ ಅಲ್ಲ)
9902758935

WANTED
Post for Female staff with computer knowledge and field executives with two wheeler with a valid licences Details for correspondence:
Mob : 9606062178
E-mail ID : bilvashree24@gmail.com

ಜಮೀನು ಮಾರಾಟಕ್ಕಿದೆ
ಮೈಸೂರು ತಾಲೂಕು ಜಯಪುರ ಹೋಬಳಿ ಮಾವನಿಹಳ್ಳಿ ಗ್ರಾಮದಲ್ಲಿ 3 ಎಕರೆ 7 ಗುಂಟೆ ಜಮೀನು ಮತ್ತು ಮುರುಡಗಳ್ಳಿಯಲ್ಲಿ 1 ಎಕರೆ 4 ಗುಂಟೆ ಜಮೀನು ಹಾರೋಹಳ್ಳಿ ಹೈವೆ ರಸ್ತೆಯಲ್ಲಿ 20 ಗುಂಟೆ ಹಾಗೂ ಹಾಂಪಾಪುರ ಹೋಬಳಿಯಲ್ಲಿ 25 ಗುಂಟೆ ಮತ್ತು 1 ಎಕರೆ 10 ಗುಂಟೆ, 10 ಗುಂಟೆ, 35 ಗುಂಟೆ ಜಮೀನು ಮಾರಾಟಕ್ಕಿದೆ
9945661696

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಮತ್ತು ಕುವೆಂಪುನಗರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : ಸೂಪರ್‌ವೈಸರ್ 23000 + W/o ಗಾರ್ಡ್ 22000 + W/o ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819, 9620777819

FOR RENT
3 BHK, PARKING & SOLAR FACILITIES 40X60, II FLOOR, J.P. NAGAR RING ROAD OPP TO PETROL BUNK, MYSORE
9739938999, 9448958429

HOUSE FOR RENT
3 BHK north facing house, Ground floor with solar and bore well # 148 MIG, I block, Ramakrishna nagar, 6th Cross, Mysore-570022
9880940090

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಅಪಘಾತ ತಡೆಗೆ 7 ಕೋ.ರೂ. ವೆಚ್ಚದ ಸುರಕ್ಷತಾ ರಸ್ತೆ ಕಾಮಗಾರಿಗೆ ಚಾಲನೆ



ಚುಂಚನಕಟ್ಟೆ: ಕೆಸ್ತೂರು ಕೊಪ್ಪಲು ಗೇಟ್ ಮತ್ತು ಮಳಲಿ ಸರ್ಕಲ್ ಸೇರಿದಂತೆ ಹಾಡ್ಯ ಸರ್ಕಲ್‌ಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ರಸ್ತೆ ಸುರಕ್ಷತೆಗಾಗಿ ಏಳು ಕೋಟಿ ವೆಚ್ಚದಲ್ಲಿ ಸುರಕ್ಷತಾ ರಸ್ತೆ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕ.ಡಿ.ರವಿಶಂಕರ್ ತಿಳಿಸಿದರು.

ಕೆಸ್ತೂರು ಕೊಪ್ಪಲು ಗೇಟ್‌ನಲ್ಲಿ 7 ಕೋಟಿ ವೆಚ್ಚದ ರಸ್ತೆ ಸುರಕ್ಷಾ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ರಸ್ತೆ ಸಂಚಾರ ಸುಗಮವಾಗಲು ಸರ್ಕಾರ 18.65 ಕೋಟಿ ಅನುದಾನ ಒದಗಿಸಿದೆ. ಆದ್ದರಿಂದ ಕೆಸ್ತೂರು ಕೊಪ್ಪಲು ಗೇಟ್ ಮತ್ತು ಮಳಲಿ ಸೇರಿದಂತೆ ಹಾಡ್ಯ ಮುಖ್ಯ ರಸ್ತೆಯಲ್ಲಿ ಸರ್ಕಲ್ ನಿರ್ಮಾಣ ಮಾಡುವುದರ ಜೊತೆಗೆ 10 ಮೀಟರ್‌ನಷ್ಟು ಡಾಂಬರೀಕರಣ ಮಾಡಲಾಗುವುದು ಎಂದರಲ್ಲದೆ ಗ್ರಾಮದ ಪರಿಮಿತಿಯಲ್ಲಿ ಬಾಕ್ಸ್ ಚರಂಡಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ಮೂರು ಸರ್ಕಲ್‌ನಲ್ಲಿ ಹೆಚ್ಚು ಅಪಘಾತ ಸಂಭವಿಸುತ್ತಿದ್ದು ಈ ಬಗ್ಗೆ ಗ್ರಾಮಸ್ಥರ ಮನವಿ ಮೇರೆಗೆ ಸುಗಮ ರಸ್ತೆ ಸಂಚಾರಕ್ಕೆ ಕ್ರಮ ವಹಿಸಿ ಸರ್ಕಾರದಿಂದ ಹಣ ಬಿಡುಗಡೆ ಮಾಡಿಸಿ ಕಾಮಗಾರಿಗೆ ಚಾಕನೆ ನೀಡಲಾಗಿದೆ. ಆದ್ದರಿಂದ ಸುಗ್ಗಿ ಆರಂಭಕ್ಕೂ ಮೊದಲು ಕಾಮಗಾರಿ ಆರಂಭಿಸಿ ಎಂದು ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಅವರುಗಳಿಗೆ ಸೂಚಿಸಿದರು.

ಜಿ.ಪಂ. ಮಾಜಿ ಸದಸ್ಯ ಜಯರಾಮೇಗೌಡ, ಗ್ರಾ.ಪಂ. ಅಧ್ಯಕ್ಷೆ ಮಂಜುಳಾ ಶ್ರೀನಿವಾಸ್, ಮಾಜಿ ಅಧ್ಯಕ್ಷ ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯ್‌ಶಂಕರ್, ಎಂ.ಜೆ.ರಮೇಶ್, ಕಾಂಗ್ರೆಸ್ ತಾಲೂಕು ವಕ್ತಾರ ಜಾಬೀರ್, ಗ್ರಾಮದ ಮುಖಂಡರಾದ ಬಲರಾಮೇಗೌಡ, ರುದ್ರೇಗೌಡ, ಲಕ್ಷ್ಮೀಗೌಡ, ಜಯರಾಮೇಗೌಡ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಹಿರಣ್ಣಯ್ಯ ಅನೇಕರು ಇದ್ದರು.

ದೊಡ್ಡೇಬಾಗಿಲು ಪಿಎಸಿಸಿಎಸ್ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷರಾಗಿ ಕೆ.ಮರಿಸ್ವಾಮಿ, ಉಪಾಧ್ಯಕ್ಷರಾಗಿ ಅಕ್ಬರ್‌ಪಾಷ ಆಯ್ಕೆ


ದೊಡ್ಡೇಬಾಗಿಲು ಪಿಎಸಿಸಿಎಸ್‌ಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ ಅ.29–ತಾಲೂಕಿನ ದೊಡ್ಡೇಬಾಗಿಲು ಗ್ರಾಮದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಹಿರಿಯ ಮುಖಂಡ ಕೃಷ್ಣಾಪುರ ಕೆ.ಮರಿಸ್ವಾಮಿ, ಉಪಾಧ್ಯಕ್ಷರಾಗಿ ಅಕ್ಬರ್‌ಪಾಷ ಅವಿರೋಧವಾಗಿ ಆಯ್ಕೆಯಾದರು.

ಜಿಲ್ಲೆಯಾದ್ಯಂತ ಸಹಕಾರಿ ಕ್ಷೇತ್ರದಲ್ಲಿ ಜಾತ್ಯತೀತ ಜನತಾದಳ ಪ್ರಾಬಲ್ಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾಲೂಕಿನ ದೊಡ್ಡೇಬಾಗಿಲು ಸಹಕಾರ ಸಂಘವೂ ಕೂಡ ಜೆಡಿಎಸ್ ವಶವಾಗಿದೆ. ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಕೆ.ಮರಿಸ್ವಾಮಿ ಹಾಗೂ ಅಕ್ಬರ್‌ಪಾಷ ಅವರಿಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಗೊಂಡರು.

ಹನ್ನೆರಡು ಸದಸ್ಯರ ಸಂಖ್ಯಾಬಲವಿರುವ ಸಹಕಾರ ಸಂಘದಲ್ಲಿ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಸೇರಿದಂತೆ 10 ಮಂದಿ ನಿರ್ದೇಶಕರು ಚುನಾವಣೆ ಸಭೆಯಲ್ಲಿ ಭಾಗವಹಿಸಿ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ಎಂ.ಮಹದೇವಸ್ವಾಮಿ ಹಾಗೂ ಚಿಕ್ಕತಾಯಮ್ಮ ಗೈರು ಹಾಜರಾಗಿದ್ದರು. ಚುನಾವಣಾಧಿಕಾರಿಯಾಗಿ ಬಿ. ಧನಲಕ್ಷ್ಮಿ ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷ ಕೆ.ಮರಿಸ್ವಾಮಿ ಮಾತನಾಡಿ, ಯಾವುದೇ ಸಹಕಾರ ಸಂಘ ಅಭಿವೃದ್ಧಿ ಹೊಂದಲು ಆಡಳಿತ ಮಂಡಳಿ ನಿರ್ದೇಶಕರ ಹಾಗೂ ಷೇರುದಾರ ಸದಸ್ಯರ ಸಹಕಾರ ಮುಖ್ಯ. ನಾವು ಅವಿರೋಧವಾಗಿ ಆಯ್ಕೆಯಾಗಲು ಕಾರಣಕರ್ತರಾದ ಸದಸ್ಯರು ಮತ್ತು ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘವನ್ನು ಉತ್ತಮವಾಗಿ ನಡೆಸಿಕೊಂಡು ಹೋಗುತ್ತೇವೆ ಎಂದರು.

ಶ್ರೀ ಭಗೀರಥ ಜನಕಲ್ಯಾಣ ಟ್ರಸ್ಟ್ ಮಾಜಿ ಅಧ್ಯಕ್ಷ ಎಸ್.ರಾಮಶೆಟ್ಟಿ ಮಾತನಾಡಿದರು.

ನಿರ್ದೇಶಕರಾದ ಡಿ.ಪಿ.ನಾಗರಾಜು, ಮಹದೇವಮ್ಮ ಬಸವರಾಜು, ಮಹದೇವಯ್ಯ, ಜವರನಾಯಕ, ಪುಟ್ಟತಾಯಮ್ಮ, ಮರಿತಾಯಮ್ಮ ರಾಜಮ್ಮ, ಕಟ್ಟೆಮಂಡಿ ಬಸವರಾಜು, ಎನ್.ಎಸ್.ಶೇಖರ್, ಸಿಐಟಿ ಮಿನಿ ಮಹದೇವಸ್ವಾಮಿ, ಎಸ್.ರಾಮಶೆಟ್ಟಿ, ತಿರುಮಕೂಡಲು ಜಯರಾಮು, ಬಿ.ನಾಗೇಂದ್ರ, ಜಗದೀಶ, ಶಂಕರ ಶೆಟ್ಟಿ, ನಂಜುಂಡ ಶೆಟ್ಟಿ, ಮಂಜು, ಮಹದೇವ ಶೆಟ್ಟಿ, ಕೃಷ್ಣನಾಯಕ, ಪ್ರಭುಸ್ವಾಮಿ, ನಾಗರಾಜು, ರಮೇಶ, ಸಿದ್ದರಾಜು ಜೋಗಿ, ಗೋವಿಂದರಾಜು, ಸುರೇಂದ್ರ, ಗಣೇಶ, ಮಹೇಶ, ಸೋಮಶೇಖರ್, ಲಿಂಗರಾಜು, ಕೆ.ಟಿ.ಸ್ವಾಮಿ, ನಾಗೇಗೌಡ ಇದ್ದರು.

ಕಾಂಗ್ರೆಸಿಗೆ ಸೇರ್ಪಡೆ



ವರುಣ ಕ್ಷೇತ್ರದ ತಾಯೂರು ಗ್ರಾಪಂ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಸೋಮು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ರಾಮಯ್ಯನವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಗ್ರಾ.ಪಂ ಮಾಜಿ ಅಧ್ಯಕ್ಷ ತಾಯೂರು ಬಸವರಾಜ್, ಸದಸ್ಯ ಲೋಕೇಶ್, ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ರಾಯಲ್ ಚಾಲೆಂಜರ್ಸ್ ಸಿಲ್ಕ್ ಫಿಲೇಚರ್ ತಂಡ ಚಾಂಪಿಯನ್


2025–26ನೇ ಸಾಲಿನ 4ನೇ ವರ್ಷದ KSIC ಟೆನ್ನಿಸ್ ಬಾಲ್ ಕ್ರಿಕೆಟ್ ಕಪ್ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಪಡೆದ ತಿನರಸೀಪುರದ ರಾಯಲ್ ಚಾಲೆಂಜರ್ಸ್ ಸಿಲ್ಕ್ ಫಿಲೇಚರ್ ತಂಡವನ್ನು ಘಟಕದ ಪ್ರಧಾನ ವ್ಯವಸ್ಥಾಪಕರಾದ ಎಸ್.ಕೆ.ಮಂಜುಳ ಅಭಿನಂದಿಸಿದರು.

ವಿದ್ಯುತ್ ಸ್ಪರ್ಶದಿಂದ ತಾಯಿ–ಮಗ ಸಾವು

ಹುಣಸೂರು ಬಳಿ ದುರಂತ


ನೀಲಮ್ಮ


ಹರೀಶ್

ಹುಣಸೂರು, ಅ.29– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ತಗುಲಿದ ಪರಿಣಾಮ ತಾಯಿ ಮತ್ತು ಮಗ ಸ್ಥಳದಲ್ಲೇ ಮೃತಪಟ್ಟ ಘಟನೆ ತಾಲೂಕಿನ ಎಮ್ಮೆಕೊಪ್ಪಲು ಗ್ರಾಮದಲ್ಲಿ ಸಂಭವಿಸಿದೆ.

ಎಮ್ಮೆಕೊಪ್ಪಲು ನಿವಾಸಿಗಳಾದ ನೀಲಮ್ಮ (38) ಮತ್ತು ಹರೀಶ್ (19), ಮೃತ ದುರ್ದೈವಿಗಳು. ತಮ್ಮ ಜಮೀನಿನಲ್ಲಿ ತಾಯಿ ಮಗ ಕೆಲಸ ಮಾಡುತ್ತಿದ್ದಾಗ ನೀಲಮ್ಮ ಜಲಭಾದೆ ತೀರಿಸಿಕೊಳ್ಳಲು ಬೇಲಿಯ ಕಡೆ ತೆರಳಿದಾಗ, ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ತುಳಿದು ವಿದ್ಯುತ್ ಸ್ಪರ್ಶವಾಗಿ ಕಿರುಚಿಕೊಂಡು ಕೆಳಕ್ಕೆ ಬಿದ್ದರು.

ಅಲ್ಲೇ ಕೆಲಸ ಮಾಡುತ್ತಿದ್ದ ಹರೀಶ ತಾಯಿ ಕೂಗಿಕೊಂಡು ಬಿದ್ದಿದ್ದನ್ನು ಕಂಡು ಸಹಾಯಕ್ಕಾಗಿ ಮುಂದಾದಾಗ ವಿದ್ಯುತ್ ಸ್ಪರ್ಶವಾಗಿ ಆತ ಕೂಡ ಸ್ಥಳದಲ್ಲೆ ಸಾವನ್ನಪ್ಪಿದ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವೇಕಾನಂದ ಯೂತ್ ಮೂವ್‌ಮೆಂಟ್‌ನಿಂದ ಜಾಥಾ

ಹಾಸ್ಪಿಸ್ ಮತ್ತು ಪ್ಯಾಲಿಯೇಟಿವ್, ಪಾರ್ಶ್ವವಾಯು ಬಗ್ಗೆ ಜಾಗೃತಿ


ವಿಶ್ವ ಹಾಸ್ಪಿಸ್ ಮತ್ತು ಪ್ಯಾಲಿಯೇಟಿವ್ ಕೇರ್ ದಿನ ಹಾಗೂ ವಿಶ್ವ ಪಾರ್ಶ್ವವಾಯು ಕುರಿತು ಜಾಗೃತಿ ಜಾಥಾ ನಡೆಸಲಾಯಿತು.

ಹೆಚ್.ಡಿ.ಕೋಟೆ, ಅ. 29: ಪಟ್ಟಣದಲ್ಲಿ ವಿಶ್ವ ಹಾಸ್ಪಿಸ್ ಮತ್ತು ಪ್ಯಾಲಿಯೇಟಿವ್ ಕೇರ್ ದಿನ ಹಾಗೂ ವಿಶ್ವ ಪಾರ್ಶ್ವವಾಯು ದಿನದ ಅಂಗವಾಗಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಜಾಥಾ ಕಾರ್ಯಕ್ರಮ ನಡೆಸಲಾಯಿತು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವಿಶ್ವ ಹಾಸ್ಪಿಸ್ ಮತ್ತು ಪ್ಯಾಲಿಯೇಟಿವ್ ಕೇರ್ ದಿನ ಹಾಗೂ ವಿಶ್ವ ಪಾರ್ಶ್ವವಾಯು ದಿನದ ಅಂಗವಾಗಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಜಾಥಾ ಕಾರ್ಯಕ್ರಮಕ್ಕೆ ಪಟ್ಟಣದ ತಾಲೂಕು ಆಡಳಿತ ಸೌಧದ ಮುಂಭಾಗ ತಹಸೀಲ್ದಾರ್ ಶ್ರೀನಿವಾಸ್ ಚಾಲನೆ ನೀಡಿದರು.

ಉಪಶಮನ ಆರೈಕೆ ಕಾರ್ಯಕ್ರಮ ಮುಖ್ಯಸ್ಥರಾದ ಡಾ.ಎಸ್.ಪಿ.ವಿಭಾ ಮಾತನಾಡಿ ಕೆಲವು ಕುಟುಂಬಗಳಲ್ಲಿ ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್, ಮೂತ್ರಪಿಂಡದ ಸಮಸ್ಯೆ, ಪಾರ್ಶ್ವವಾಯು ಕಾಯಿಲೆಗಳಿಂದ ಬಳಲುತ್ತಿದ್ದು, ಸಹಾನುಭೂತಿಯಿಂದ ಉಪಶಮನ ಆರೈಕೆ ನೀಡುವುದೆ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ದೇಶದಲ್ಲಿ ಇಂತಹ ಕಾಯಿಲೆಗೆ ತುತ್ತಾದವರ ಸಂಖ್ಯೆ ಸಾವಿರಕ್ಕೆ ಆರು ಜನರಲ್ಲಿ ಬರುತ್ತದೆ. ಇಂತವರನ್ನು ಆಸ್ಪತ್ರೆಗೆ ಕರೆದುಕೊಂಡು ಬರಲು ಸಾಧ್ಯವಾಗದೆ ಇರುಹುದು. ರೋಗಿಗಳಿಗೆ ಸುಲಭವಾಗಿ ಚಿಕಿತ್ಸೆ ನೀಡಿ ಆರೈಕೆ ಮಾಡಲಾಗುತ್ತಿದೆ. ತಾಲೂಕಿನಲ್ಲಿ ಕಳೆದ ಐದು ವರ್ಷಗಳಿಂದ 150 ಹೆಚ್ಚು ಜನರಿಗೆ ನಿರಂತರವಾಗಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಆರೋಗ್ಯ ವಿಭಾಗ ಮುಖ್ಯಸ್ಥರಾದ ಡಾ. ಕುಮಾರ್ ಮಾತನಾಡಿ ಮನೆ ಆಧಾರಿತ ಉಪಶಮನ ಆರೈಕೆಯು 2009 ರಲ್ಲಿ ಪ್ರಾರಂಭವಾಗಿದ್ದು, ಸಂಸ್ಥೆಯ ಮೂಲಕ ಮೈಸೂರು, ಕೊಡಗು, ಧಾರವಾಡ, ಹಾಸನ, ಸರಗೂರು ಸೇರಿದಂತೆ ವಿವಿಧ ಕಡೆ ಹತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಉಪಶಮನ ಆರೈಕೆಯ ಸೇವೆ ನೀಡಲಾಗಿದೆ. ಈ ಕಾರ್ಯಕ್ರಮವು ನೊಂದ ರೋಗಿಗಳ ಕುಟುಂಬಗಳಿಗೆ ಸಹಾಯವಾಗಲಿ ಎಂಬ ಉದ್ದೇಶದಿಂದ ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಜಾಥಾ ಕಾರ್ಯಕ್ರಮಕ್ಕೆ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಸೈಂಟ್ ಮೇರಿಸ್ ಸಮುದಾಯ ಆರೋಗ್ಯ ಕೇಂದ್ರ ಸಹಕಾರ ನೀಡಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಆರಕ್ಷಕ ನಿರೀಕ್ಷಕ ಗಂಗಾಧರ್, ಆರಕ್ಷಕ ಉಪನಿರೀಕ್ಷಕ ಚಿಕ್ಕನಾಯಕ, ಬೀಚನಹಳ್ಳಿ ಭಾಸ್ಕರ್, ಸುರೇಶ್, ಡಾ.ಅಭಿಷೇಕ್, ಸಂಧ್ಯಾ, ಬಂಗಾರಶೆಟ್ಟಿ, ಅಪ್ರೋಜ್ ಪಾಷ, ರಮೇಶ್, ವೆಂಕಟಸ್ವಾಮಿ ಇದ್ದರು.

ಕೆ.ಆರ್.ನಗರದ ತಾಯಿ–ಮಕ್ಕಳ ಆಸ್ಪತ್ರೆ ನಂಬರ್ ಒನ್ ಸ್ಥಾನಕ್ಕೇರಲು ಪೈಪೋಟಿ


ಕೆ.ಆರ್.ನಗರದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಅಂದಾಜು 1 ಕೋಟಿ ರೂ.ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರವಿಶಂಕರ್ ಚಾಲನೆ ನೀಡಿದರು.

ಕೆಆರ್.ನಗರ, ಅ. 29– ತಿಂಗಳಲ್ಲಿ 300ಕ್ಕೂ ಹೆಚ್ಚು ಗರ್ಭಿಣಿ ಮಹಿಳೆಯರಿಗೆ ಹೆರಿಗೆ ಮಾಡಲಾಗುತ್ತಿದ್ದು ರಾಜ್ಯದಲ್ಲೆ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಂಬರ್ ಒನ್ ಸ್ಥಾನಕ್ಕೆ ಪೈಪೋಟಿ ನೀಡುತ್ತಿದೆ. ಇದಕ್ಕೆ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗಳ ಕಠಿಣ ಶ್ರಮ ಎಂದು ಶಾಸಕ.ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಅಂದಾಜು 1 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು

ತಾಯಿ ಮತ್ತು ಮಕ್ಕಳ ಆರೈಕೆ ಜೊತೆಗೆ ಆಸ್ಪತ್ರೆಯ ಸ್ವಚ್ಚತಾ ಕಾರ್ಯದಿಂದ ಜನಮನ್ನಣೆ ಗಳಿಸಿದ್ದು ರಾಜ್ಯದಲ್ಲಿ ಮಾದರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಂತಸ ವ್ಯಕ್ತಪಡಿಸಿದ ಶಾಸಕರು ಕೂಡಲೇ 50 ಹಾಸಿಗೆಯಿಂದ 100 ಹಾಸಿಗೆ ಆಸ್ಪತ್ರೆ ಯನ್ನಾಗಿ ಮೇಲ್ದರ್ಜೆಗೆ ಏರಿಸಲು ಈಗಾಗಲೇ ಆರೋಗ್ಯ ಸಚಿವರಾದ ದಿನೇಶ್ ಗುಂಡುರಾವ್ ಅವರಿಗೆ ಮನವಿ ಮಾಡಿ ಪ್ರಸ್ತಾವನೆ ಸಲ್ಲಿಸಿದ್ದು ಅನುದಾನ ಕೋರಲಾಗಿದೆ ಎಂದು ತಿಳಿಸಿದರು.

ಇಲ್ಲಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುವುದರಿಂದ ನಮ್ಮ ಜಿಲ್ಲೆಯ ಅಕ್ಕಪಕ್ಕದ ತಾಲೂಕು, ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ಹಾಸನ ಜಿಲ್ಲೆಯ ಅರಕಲಗೂಡು, ಹೊಳೆನರಸೀಪುರ ಸೇರಿದಂತೆ ವಿವಿಧ ತಾಲೂಕಿನ ಮಹಿಳೆಯರು ಹೆಚ್ಚಾಗಿ ನಮ್ಮ ತಾಲೂಕಿನ ಆಸ್ಪತ್ರೆಗೆ ದಾಖಲಾಗುತ್ತಿರುವುದರಿಂದ ವೈದ್ಯ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗಿರುವುದರಿಂದ 50 ಹಾಸಿಗೆಯಿಂದ 100 ಹಾಸಿಗೆಗೆ ಏರಿಸಿ ಅಗತ್ಯ ಸೌಲಭ್ಯ ಒದಗಿಸಲಾಗುವುದು, ಎಂದರು.

ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಬಿ.ಜಿ ನವೀನ್, ಆರೋಗ್ಯರಕ್ಷಾ ಸಮಿತಿ ಸದಸ್ಯ ನಾಗೇಂದ್ರ, ಮಧುಕಿರಣ್ ಮಾತನಾಡಿದರು.

ಡಾ.ಮಾಧವ್, ಡಾ.ದೀಪ್ತಿ, ಜಿ.ಪಂ. ಮಾಜಿ ಸದಸ್ಯ ಜಿ.ಆರ್.ರಾಮೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಉದಯಶಂಕರ್, ಎಂ.ಎಸ್.ಮಹದೇವ್, ವಕ್ತಾರ ಸೈಯ್ಯದ್ ಜಾಬೀರ್, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಕೆಂಚಿ ಮಂಜುನಾಥ್, ಪುರಸಭಾಧ್ಯಕ್ಷ ಶಿವುನಾಯಕ್, ಸದಸ್ಯರಾದ ಕೋಳಿ ಪ್ರಕಾಶ್, ನಟರಾಜು, ಶಂಕರ್ ಸ್ವಾಮಿ, ಮಿಕ್ಸರ್ ಶಂಕರ್, ಕೆ.ವಿನಯ್ ಇದ್ದರು.

ಉಸ್ತುವಾರಿ ಸದಸ್ಯರಾಗಿ ನೇಮಕ



ಹುಣಸೂರು, ಅ.29– ಹುಣಸೂರು ಉಪವಿಭಾಗ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರನ್ನಾಗಿ ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಅಶೋಕ್ (ಪ.ಜಾತಿ.) ಹಾಗೂ ಕೃಷ್ಣಾಪುರ ಗ್ರಾಮದ ಕೆ.ಎಸ್ ಅಣ್ಣಯ್ಯ ನಾಯಕ (ಎಸ್.ಟಿ.) ನೇಮಕಗೊಂಡಿದ್ದಾರೆ.

ಇವರು ಸರ್ಕಾರದ ಆದೇಶದನ್ವಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ಅಧಿನಿಯಮ 2015 ಮತ್ತು 2016 ರಡಿಯಲ್ಲಿ (1995ರ 17(ಎ) ರಂತೆ ಉಪವಿಭಾಗ ಮಟ್ಟದ ಜಾಗೃತಿ ಮತ್ತು ಮೇಲ್ವಿಚಾರಣ ಸಮಿತಿಗೆ ಸರ್ಕಾರೇತರ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಕೆಎಸ್‌ಐಸಿ, ಕೆಎಂಎಫ್, ಕಾರ್ ಮ್ಯೂಸಿಯಂಗೆ ಎಂಎಂಕೆ ಕಾಲೇಜು ವಿದ್ಯಾರ್ಥಿಗಳ ಭೇಟಿ



ಹೆಚ್.ಡಿ.ಕೋಟೆ, ಅ. 29– ತಾಲೂಕಿನ ತುಂಬ ಸೋಗೆ ಗ್ರಾಮದಲ್ಲಿರುವ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕೌಶಲ ಅಭಿವೃದ್ಧಿಗಾಗಿ ಮೈಸೂರಿನ ಸಿಲ್ಕ್ ಫ್ಯಾಕ್ಟರಿ ಕೆಎಸ್‌ಐಸಿ ಮತ್ತು ಕೆಎಂಎಫ್ ಹಾಗೂ ಕಾರು ಮ್ಯೂಸಿಯಂಗಳಿಗೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ವ್ಯವಹಾರ ಜ್ಞಾನ, ಹಣಕಾಸು ನಿರ್ವಹಣೆ, ಪ್ರಾಯೋಗಿಕ ಜ್ಞಾನ, ವಸ್ತುಗಳ ಉತ್ಪಾದನೆ, ನಿರ್ವಹಣೆ, ತಯಾರಿಕೆ, ಪ್ಯಾಕಿಂಗ್ ಹಾಗೂ ಮಾರಾಟ ಪ್ರಕ್ರಿಯೆಗಳ ಬಗ್ಗೆ ಸಂಬಂಧಪಟ್ಟವರ ಜೊತೆಯಲ್ಲಿ ವಿವರವಾಗಿ ಮಾಹಿತಿ ಪಡೆದುಕೊಂಡರು. ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಮನೋಜ್, ಸೌಜನ್ಯ, ಜಾನ್ ಮಾತನಾಡಿ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಕೈಗಾರಿಕೆಗಳಿಗೆ ಭೇಟಿ ನೀಡುವುದರಿಂದ ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿ ಜೊತೆಗೆ ಪರೀಕ್ಷಾ ಫಲಿತಾಂಶವನ್ನು ಉತ್ತಮಗೊಳಿಸಿಕೊಳ್ಳಲು ಸಹಕಾರಿಯಾಗಿದೆ ಎಂದರು. ಇದೇ ಸಂದರ್ಭದಲ್ಲಿ ಮೈಮುಲ್ ನೂತನ ಅಧ್ಯಕ್ಷ ಕೆ. ಈರೇಗೌಡ, ಕಾಲೇಜಿನ ಅಭಿವೃದ್ಧಿ ಮಂಡಳಿ ಸದಸ್ಯ ಸಕಲೇಶ ಇತರರು ಹಾಜರಿದ್ದರು.

ನೌಕರ ಬಳಕೆದಾರರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪಿರಿಯಾಪಟ್ಟಣ, ಅ. 29– ಪಿರಿಯಾಪಟ್ಟಣ ತಾಲೂಕು ಸರ್ಕಾರಿ ನೌಕರರ ವಿವಿದ್ದೋದ್ದೇಶ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಂಜುನಾಥ್, ಉಪಾಧ್ಯಕ್ಷರಾಗಿ ವಿ.ಎನ್.ಸರ್ವಮಂಗಳ ಹಾಗೂ ಖಜಾಂಚಿಯಾಗಿ ವರದೇಶ್ ಅವರು ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಸರ್ಕಾರಿ ನೌಕರರ ವಿವಿದೊದ್ಧೇಶ ಸಹಕಾರ ಸಂಘದ ಆವರಣದಲ್ಲಿ ಬುಧವಾರ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಖಜಾಂಚಿ ಸ್ಥಾನಕ್ಕೆ ಚುನಾವಣೆ ನಡೆಯಿತು. ಮಂಜುನಾಥ್ ಅಧ್ಯಕ್ಷ ಸ್ಥಾನಕ್ಕೆ, ಸರ್ವಮಂಗಳ ಉಪಾಧ್ಯಕ್ಷೆ ಸ್ಥಾನಕ್ಕೆ ಹಾಗೂ ವರದೇಶ್ ಖಜಾಂಚಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ತಲಾ ಒಂದೊಂದೇ ನಾಮಪತ್ರ ಬಂದ ಕಾರಣ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಸಹಕಾರ ಸಂಘದ ಅಭಿವೃದ್ಧಿ ಅಧಿಕಾರಿ ಹಿತೇಂದ್ರ ರವರು, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಖಜಾಂಚಿಯವರನ್ನು ಅವಿರೋಧ ಆಯ್ಕೆ ಮಾಡಲಾಗಿದೆ ಎಂದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಚರಂಡಿ, ಇ–ಖಾತಾ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಪ್ರತಿಭಟನೆ


ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನಾ ಧರಣಿ ನಡೆಸಿದರು.

ತಿ.ನರಸೀಪುರ, ಅ.29– ತಾಲೂಕಿನ ಸುಜ್ಜಲೂರು ಗ್ರಾಮದ ಚರಂಡಿಯಲ್ಲಿ ಜಿಡ್ಡುಗಟ್ಟಿ ನಿಲ್ಲುತ್ತಿರುವ ತ್ಯಾಜ್ಯ ನೀರಿನ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಹಾಗೂ ಬೇವಿನಹಳ್ಳಿ ಗ್ರಾಮದಲ್ಲಿ ನಿವೇಶನ ಫಲಾನುಭವಿಗಳಿಗೆ ಇ–ಖಾತೆ ಮಾಡಿಕೊಡಲು ಇರುವ ಸಮಸ್ಯೆಯನ್ನು ಪರಿಹರಿಸುವಂತೆ ಆಗ್ರಹಿಸಿ ಗ್ರಾಮಸ್ಥರೊಡನೆ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ತಾಲೂಕು ಕಚೇರಿ ಮತ್ತು ತಾ.ಪಂ ನಡುವಿನ ರಸ್ತೆಯಲ್ಲಿ ಬುಧವಾರದಿಂದ ಅನಿರ್ಧಿಷ್ಟಾವಧಿ ಪ್ರತಿಭಟನಾ ಧರಣಿ ಆರಂಭಿಸಿದ್ದಾರೆ.

ಪಟ್ಟಣದ ತಾ.ಪಂ ಕಚೇರಿಗೆ ಹೊಂದಿಕೊಂಡಂತಿರುವ ತಾಲೂಕು ಕಚೇರಿಯ ಪ್ರವೇಶದ ಬಲಭಾಗದ ರಸ್ತೆಯಲ್ಲಿ ಟೆಂಟ್ ಹಾಕಿರುವ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಎರಡು ಗ್ರಾಮಗಳ ಗ್ರಾಮಸ್ಥರೊಡನೆ ಪ್ರತಿಭಟನಾ ಧರಣಿ ಆರಂಭಿಸಿ, ಹಲವು ವರ್ಷಗಳಿಂದ ಚರಂಡಿ ಅವ್ಯವಸ್ಥೆ ಸಮಸ್ಯೆಯನ್ನು ಸರಿಪಡಿಸದೆ ಇರುವ ಬಗ್ಗೆ ಸರ್ಕಾರ ಮಂಜೂರು ಮಾಡಿದ ನಿವೇಶನಕ್ಕೆ ವಿದ್ಯುನ್ಮಾನ ಖಾತೆಯನ್ನು ಮಾಡಿಕೊಡದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಮೂಗೂರು ಹೋಬಳಿಯ ಸುಜ್ಜಲೂರು ಗ್ರಾಮದಲ್ಲಿ ಸುಮಾರು 350ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿದ್ದು, ಅತಿಹೆಚ್ಚು ಇರುವ ಲಿಂಗಾಯತ ಸಮಾಜದ ಬೀದಿಗಳ ಗೋಳು ಹೇಳತೀರದಾಗಿದೆ, ಊರ ಹೊರಗಿರುವ ದಲಿತರ ಬೀದಿಯ ಚರಂಡಿಯ ನೀರು, ಊರ ಹೊರ ಹೋಗದೆ, ಮನೆಗಳಿಗೆ ನುಗ್ಗುವ ಮೂಲಕ ನರಕಯಾತನೆಂತಾಗಿದೆ. ಆದರೂ ಯಾರೂ ಗಮನ ಹರಿಸುತ್ತಿಲ್ಲ ಎಂದು ಕಿಡಿಕಾರಿದರು.

ಅಲ್ಲದೆ ಸೋಸಲೆ ಹೋಬಳಿ, ಬೇವಿನಹಳ್ಳಿ ಗ್ರಾಮದಲ್ಲಿ ಸರ್ವೆ ನಂ 296 ರ 3.36 ಎಕರೆ ಸರ್ಕಾರಿ ಖರಾಬು ಜಮೀನಿನಲ್ಲಿ, ದಸಂಸ ಹೋರಾಟದ ಫಲವಾಗಿ 63 ನಿವೇಶನಗಳುಳ್ಳ ನೂತನ ಡಾ.ಬಿ.ಆರ್. ಅಂಬೇಡ್ಕರ್ ಬಡಾವಣೆ ನಿರ್ಮಾಣವಾಗಿದ್ದು, ನಿವೇಶನದ ಫಲಾನುಭವಿಗಳಿಗೆ 'ಇ ಖಾತೆ' ಮಾಡದೆ ಸ್ಥಳೀಯ ಆಡಳಿತ ಒಂದೇ ಒಂದು ಮನೆಯನ್ನು ಸಹ ಮಂಜೂರು ಮಾಡಿರುವುದಿಲ್ಲ ಎಂದು ದೂರಿದರು.

ಈ ಎರಡೂ ಗ್ರಾಮದ ಸಮಸ್ಯೆಗಳು ಸ್ಥಳೀಯ ಸಂಸ್ಥೆಗಳಲ್ಲಿಯೇ ಬಗೆಹರಿಯಬಹುದಾಗಿದ್ದರೂ, ಗ್ರಾಮದ ಪ್ರಬಲ ಸಮುದಾಯಗಳ ಪ್ರತಿಷ್ಠೆ ಕಾರಣದಿಂದ, ಅಧಿಕಾರಿಗಳ ಬೇಜವಬ್ದಾರಿಯಿಂದಾಗಿ ಕಗ್ಗಂಟಾಗಿರುವುದು ವಿಪರ್ಯಾಸ. ಹಾಗಾಗಿ ಈಗಲಾದರೂ ಎಚ್ಚೆತ್ತು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಆಡಳಿತ ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ತುರ್ತು ಕ್ರಮವಹಿಸಬೇಕು. ಅಲ್ಲಿಯವರೆಗೂ ಅನಿರ್ಧಿಷ್ಟಾವಧಿ ಪ್ರತಿಭಟನಾ ಧರಣಿ ಕೂರುತ್ತೇವೆ ಎಂದರು.

ಪ್ರತಿಭಟನಾ ಸ್ಥಳಕ್ಕೆ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಹಾಗೂ ತಾ.ಪಂ ಯೋಜನಾಧಿಕಾರಿ ರಂಗಸ್ವಾಮಿ ಆಗಮಿಸಿ ಸುಜ್ಜಲೂರು ಚರಂಡಿ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಸಂಬಂಧ ನ್ಯಾಯಾಲಯ ಪ್ರಕರಣ ಗುರುವಾರ ಇತ್ಯರ್ಥವಾದ ಬಳಿಕ ಅಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುತ್ತೇವೆ. ಬೇವಿನಹಳ್ಳಿ ನಿವೇಶನ ಹಂಚಿಕೆ ಸಂಬಂಧ ದಾಖಲೆಗಳು ಪತ್ತೆಯಾಗಿದ್ದು, ಮುಂದಿನ ಕೆಲವು ದಿನಗಳಲ್ಲಿ ಇ–ಖಾತಾ ಆಗದಿರುವ ಸಮಸ್ಯೆಯನ್ನು ಪರಿಹರಿಸುತ್ತೇವೆ. ಅಲ್ಲಿಯವರೆಗೂ ಕಾಲಾವಕಾಶ ಬೇಕಿರುವುದರಿಂದ ಪ್ರತಿಭಟನೆಯನ್ನು ಹಿಂಪಡೆಯುವಂತೆ ಮನವೊಲಿಸಿದರಾದರೂ ಪ್ರತಿಭಟನಾಕಾರರು ಒಪ್ಪದೆ ಧರಣಿಯನ್ನು ಮುಂದುವರೆಸಿದರು.

ದಸಂಸ ಜಿಲ್ಲಾ ಖಜಾಂಚಿ ಬಿ.ಡಿ.ಶಿಮುದ್ದಿ, ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಮುಖಂಡರಾದ ಆಲಗೂಡು ನಾಗರಾಜ್ ಮೂರ್ತಿ, ಬನ್ನಹಳ್ಳಿಹುಂಡಿ ಉಮೇಶ್, ಕರೋಹಟ್ಟಿ ನಾಗೇಶ, ಬೇವಿನಹಳ್ಳಿ ದಿನೇಶ್, ರವಿ, ಸುಜ್ಜಲೂರು ಬಸವಯ್ಯ, ಮಹೇಶ್, ಕುಮಾರ್ ಮಹದೇವ, ನಂಜುಂಡಯ್ಯ, ಉಕ್ಕಲಗೆರೆ ಜಯಮಲ್ಲೇಶ್, ನಿಂಗಪ್ಪ, ಕೃಷ್ಣ, ಬಸವಣ್ಣ, ಮುತ್ತು, ಸಣ್ಣಮ್ಮ, ಶಿವಮ್ಮ, ಮಹದೇವಮ್ಮ ಹಾಗೂ ಇತರರು ಇದ್ದರು.

ಐದು ವರ್ಷ ಸಿದ್ದರಾಮಯ್ಯ ಅವರೇ ಸಿಎಂ ಎಂದು ಘೋಷಿಸುವಂತೆ ಪತ್ರ ಚಳುವಳಿ

ಮೈಸೂರು, ಅ.29(ಎಂಟಿವೈ)- ಹಲವು ಜನಪರ ಯೋಜನೆಗಳ ಜಾರಿಗೊಳಿಸಿ ಲಕ್ಷಾಂತರ ಕುಟುಂಬಗಳಿಗೆ ನೆರವಾಗಿರುವ ಸಿದ್ದರಾಮಯ್ಯ ಅವರನ್ನೇ ಐದು ವರ್ಷವೂ ಮುಖ್ಯಮಂತ್ರಿ ಎಂದು ಘೋಷಿಸಬೇಕು ಎಂದು ಒತ್ತಾಯಿಸಿ ಅಹಿಂದ ಸಂಘಟನೆಗಳ ಕಾರ್ಯಕರ್ತರು ಪತ್ರ ಚಳುವಳಿ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದ ಬಳಿಯಿರುವ ಅಂಚೆ ಬಾಕ್ಸ್ ಬಳಿ ಕಾರ್ಯಕರ್ತರು ಜಮಾಯಿಸಿ, ಐದು ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೇ ಅಧಿಕಾರದಲ್ಲಿ ಮುಂದುವರೆಸುವಂತೆ ಆಗ್ರಹಿಸಿ ಎಐಸಿಸಿ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ವಿಳಾಸಕ್ಕೆ ಬರೆದಿರುವ ಪತ್ರಗಳನ್ನು ಅಂಚೆ ಪೆಟ್ಟಿಗೆಗೆ ಹಾಕಿದರು.

ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ನಡೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 135 ಸ್ಥಾನ ಗೆಲ್ಲುವ ಮೂಲಕ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಕಾರಣವಾಯಿತು.

ಈ ದೊಡ್ಡ ಮಟ್ಟದ ಗೆಲುವಿಗೆ ಸಿದ್ದರಾಮಯ್ಯನವರ ನಾಯಕತ್ವ ಹಾಗೂ ಅಹಿಂದ ಸಮುದಾಯಗಳು ಅವರ ನಾಯಕತ್ವದಲ್ಲಿ ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಿದ್ದು ಕಾರಣವಾಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ನೆಲೆ ತುಂಬಾ ಭದ್ರವಾಗಿರುವುದಕ್ಕೂ ಮೂಲ ಕಾರಣ ಸಿದ್ದರಾಮಯ್ಯ ಅವರ ಆಡಳಿತ, ಜನಪರ ಗ್ಯಾರಂಟಿ ಯೋಜನೆಗಳ ನಿರ್ವಹಣೆ. ಜತೆಗೆ ಅಹಿಂದ ಸಮುದಾಯಗಳ ಮೇಲೆ ಅವರು ಇಟ್ಟಿರುವ ಪ್ರೀತಿ, ಕಾಳಜಿ, ಸಾಮಾಜಿಕ ನ್ಯಾಯಪರ ಸಿದ್ಧಾಂತ. ಹೀಗಾಗಿ ಅವರನ್ನೇ ಐದು ವರ್ಷವೂ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಅವರನ್ನು ಶಾಸಕರುಗಳು ಸೇರಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಮುಖ್ಯಮಂತ್ರಿ ಹುದ್ದೆಯ ವಿಚಾರದಲ್ಲಿ ಹೆಚ್ಚು ಅಪಪ್ರಚಾರ ಮತ್ತು ರಾಜಕೀಯ ಮಾಡುತ್ತಿವೆ. ಮುಖ್ಯಮಂತ್ರಿಗಳನ್ನು ಬದಲಾಯಿಸುತ್ತಾರೆ ಎಂಬ ಹೇಳಿಕೆಗಳನ್ನು ನೀಡಿ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುತ್ತಿವೆ. ಇದಕ್ಕೆ ಕೆಲವು ಕಾಂಗ್ರೆಸ್ ನಾಯಕರು ಕೂಡ ಧ್ವನಿಯಾಗಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ಏಳಿಗೆಗೆ ತೊಡಕಾಗಬಹುದು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯಿಂದ ಇಳಿಸುತ್ತಾರೆ ಎಂಬ ಅಪಪ್ರಚಾರವನ್ನು ಅಹಿಂದ ಸಮುದಾಯಗಳಿಗೆ ಸಹಿಸಲು ಅಸಾಧ್ಯ. ಹೀಗಾಗಿ ಈ ಕೂಡಲೇ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಹುದ್ದೆಯ ವಿಚಾರದಲ್ಲಿ ಮಧ್ಯಪ್ರವೇಶಿಸಿ ಐದು ವರ್ಷವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರೆಯುತ್ತಾರೆ ಎಂದು ಘೋಷಿಸಿ, ಎಲ್ಲಾ ಗೊಂದಲಗಳಿಗೂ ತೆರೆ ಎಳೆಯಬೇಕೆಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ದಲಿತ ಮಹಾಸಭಾದ ಅಧ್ಯಕ್ಷ ರಾಜೇಶ್, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್, ರಾಜಶೇಖರ್, ಎಫ್.ಎಂ.ಕಲೀಂ, ರಹೀಮ್ ಖಾನ್, ಮಹಮದ್ ಆಲಿ, ಲೋಕೇಶ್ ಕುಮಾರ್, ಹರೀಶ್ ಮೊಗಣ್ಣ, ಮಂಜುಳಾ, ಮಂಜುನಾಥ್, ಛಾಯಾ, ಅನಿಲ್, ನಿಂಗರಾಜು, ನಾರಾಯಣ್, ರವಿ, ನಜರ್‌ಬಾದ್, ದಿನೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪೂರ್ಣಾವಧಿ ಸಿಎಂ ಎಂದು ಘೋಷಿಸುವಂತೆ ಆಗ್ರಹಿಸಿ ಅಹಿಂದ ಸಂಘಟನೆಗಳ ಕಾರ್ಯಕರ್ತರು ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ಪತ್ರ ಚಳವಳಿ ನಡೆಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡ್ಯೂಡ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತಮ್ಮ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಗ್ರೀನ್ (ಕ) + ಗಿಲ್‌ಮಾಲ್ (ಕ)	2+2 ಪ್ರದರ್ಶನಗಳು
ಲಿಡೋ	
ತಮ್ಮ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬಿಳಿಚುಕ್ಕಿ ಹಳ್ಳಿಹಕ್ಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಬೆ.10.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
- ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
- ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
- ಟೈಮ್ ಪಾಸ್ (ಕ): ಬೆ: 11.15ಕ್ಕೆ
- ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
- ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
- ಡೀಸೆಲ್ (ತ): ಮ: 1.40ಕ್ಕೆ
- ಮಹಾಯೋಧ ರಾಮ (ಹಿ): ಮ: 1.50ಕ್ಕೆ
- ಕೆ-ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
- ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
- ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
- ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
- ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
- ಟೈಮ್ ಪಾಸ್ (ಕ): ಮ: 1.50ಕ್ಕೆ
- ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
- ತೆಲುಸು ಕಾದಾ (ತೆ): ಮ: 4.30ಕ್ಕೆ
- ಕೆ-ರ್‍ಯಾಂಪ್ (ತೆ): ರಾ: 7.20ಕ್ಕೆ
- ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪುನೀತ್ ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ



ಮೈಸೂರು, ಅ.29-ನಟ ಪುನೀತ್ ರಾಜ್‌ಕುಮಾರ್ ನಾಲ್ಕನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಪುನೀತ್ ರಾಜ್ ಕುಮಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು.

ಈ ವೇಳೆ ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ ಮಾತ ನಾಡಿ, ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನು ಅಗಲಿ ನಾಲ್ಕು ವರ್ಷಗಳಾದರೂ ಅವರ ನೆನಪು ಮಾತ್ರ ಸದಾ ನಮ್ಮಲ್ಲಿ ಅಡಗಿದೆ. ಕನ್ನಡಿಗರನ್ನು ಅವರು ಆವರಿಸಿಕೊಂಡಿದ್ದಾರೆ. ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಜನ ಪ್ರತಿನಿಧಿ, ನಟ, ನಟಿಯರಾಗಲಿ ಪುನೀತ್ ರಾಜ್‌ಕುಮಾರ್ ಅವರನ್ನು ಅನುಸರಿಸಿದರೆ, ಮುಂದಿನ ಪೀಳಿಗೆಗೆ ವಿಶೇಷ ಸಂದೇಶ ನೀಡಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಟಿ.ಸೋಮು, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಶಿವು, ಟಿ.ರಾಜ್, ಮಹದೇವ ಉಪಸ್ಥಿತರಿದ್ದರು.

ಬ್ರಾಹ್ಮಣ ಧರ್ಮ ಸಹಾಯಸಭಾ ನೂತನ ಪದಾಧಿಕಾರಿಗಳು

ಮೈಸೂರು, ಅ. 29- ಬ್ರಾಹ್ಮಣ ಧರ್ಮ ಸಹಾಯಸಭಾದ 2025-28ರ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಎನ್. ಶ್ರೀನಿವಾಸ- ಅಧ್ಯಕ್ಷ, ಎ.ಆರ್. ವೆಂಕಟೇಶ್-ಉಪಾಧ್ಯಕ್ಷ, ಕೆ.ಜಿ. ಸತೀಶ್ -ಕಾರ್ಯದರ್ಶಿ, ಎಸ್.ಕೆ. ಜಗದೀಶ್-ಜಂಟಿ ಕಾರ್ಯದರ್ಶಿ, ಎಸ್.ವಿ. ನಾಗೇಂದ್ರ, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಎಲ್. ನರಸಿಂಹಪ್ರಸಾದ್, ಶ್ರೀಮತಿ ಎಂ.ಎ. ಹೇಮಲತಾ, ಬಿ.ಎಸ್. ಶ್ರೀನಾಥ್, ಹೆಚ್.ಎಸ್. ನಾಗರಾಜ್, ಹೆಚ್.ಎನ್. ಬಿಂದುಮಾಧವ, ಆರ್.ಎಸ್. ಸತ್ಯನಾರಾಯಣ, ಪಿ.ಎಂ. ನಟೇಶ್, ಎಂ.ವಿ. ಶ್ರೀನಿವಾಸ ಮತ್ತು ಕೆ.ಎಸ್. ಸುರೇಶ್ -ನಿರ್ದೇಶಕರು.

ದಾನ ಮಾಡುವ ಮನಸ್ಸು ಮುಖ್ಯ
ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲ ಸತ್ಯನಾರಾಯಣ್



ಮೈಸೂರು, ಅ.29- ಮೈಸೂರಿನ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಎಸ್ ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗದಿಂದ ನೋಟ್‌ಬುಕ್, ಹಣ್ಣು ಹಂಪಲು ವಿತರಿಸಲಾಯಿತು.

ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲ ಸತ್ಯನಾರಾಯಣ್ ಮಾತನಾಡಿ, ಮನುಷ್ಯ ಎಷ್ಟೇ ಹಣವಂತನಾದರೂ ಮತ್ತೊಬ್ಬರಿಗೆ ಸಹಾಯ ಮಾಡುವ ಗುಣವಿಲ್ಲದೆ ಇದ್ದರೆ ಪ್ರಯೋಜನವಿಲ್ಲ. ದಾನ ಮಾಡುವ ಮನಸ್ಸು ಮುಖ್ಯವಾಗಿರುತ್ತದೆ. ಇತರರಿಗೆ ಒಳಿತು ಮಾಡುವ ಯಾವ ಅವಕಾಶವನ್ನೂ ಕಳೆದುಕೊಳ್ಳಬೇಡಿ. ನಾವು ಪರರ ಕಷ್ಟ-ಸುಖಗಳಿಗೆ ಹೇಗೆ ನೆರವಾದೆವು ಭರವಸೆಯ ಬೆಳಕಾದೆವು ಎನ್ನುವುದೇ ಜೀವನದ ಪರಿಪೂರ್ಣತೆ ಎಂದರು. ಮೈಸೂರು ನಗರ ಜೆ.ಡಿ.ಎಸ್. ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯಾದರ್ಶನ್, ಛಾಯ, ಯಶವಂತ್‌ಕುಮಾರ್, ಭವ್ಯ, ಸುಬ್ರಮಣ್ಯ, ರಾಜೇಶ್‌ಕುಮಾರ್, ಮಹೇಶ, ಅಕ್ಷಯ್ ಪ್ರಿಯದರ್ಶನ್, ದತ್ತ, ಹರ್ಷಿತ್ ನಾಗೇಶ್, ಪಾಠಶಾಲೆ ಶಿಕ್ಷಕರಾದ ಸುಮಂತ್, ವೀರಪ್ಪಾಜಿ, ಕುಮಾರ್ ಭಟ್ಟರು, ಬೋರೇಗೌಡ, ಶರ್ಮ ಗಣಪತಿ, ರಾಜು ಇದ್ದರು.

ಸಿಐಟಿಯು, ಮೈಸೂರು ಜಿಲ್ಲಾ ಸಮಿತಿ ನೂತನ ಪದಾಧಿಕಾರಿಗಳು

ಮೈಸೂರು, ಅ. 29- ಮೈಸೂರಿನಲ್ಲಿ ನಡೆದ 11ನೇ ಸಿಐಟಿಯು ಜಿಲ್ಲಾ ಸಮ್ಮೇಳನದಲ್ಲಿ 3 ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಎಂ. ಅಣ್ಣಪ್ಪ-ಅಧ್ಯಕ್ಷ, ಹೆಚ್.ಎಸ್. ಜಗದೀಶ್-ಕಾರ್ಯಾಧ್ಯಕ್ಷ, ಜಿ. ಜಯರಾಂ, ಹೆಚ್.ಎಸ್. ಸುನಂದಾ, ಮೆಹಬೂಬ್, ಹೆಚ್.ಎಂ. ಬಸವಯ್ಯ, ಬಿ. ಚನ್ನಕೇಶವ, ಲೋಕೇಶ್, ಮುರಳೀಧರ ಪೇಶ್ವೆ, ಪರಮೇಶ್ - ಉಪಾಧ್ಯಕ್ಷರು, ಬಾಲಾಜಿರಾವ್-ಪ್ರಧಾನ ಕಾರ್ಯದರ್ಶಿ, ಎಂ.ಕೆ. ಶಶಿಕುಮಾರ್, ಪುಷ್ಪಲತಾ, ನವೀನ್ ಕುಮಾರ್, ಧನಂಜಯ, ಮಂಜುಳಾ, ರಘು ಪೂಜಾರ್, ಸಂಜಯ್ ಅರಸ್ -ಕಾರ್ಯದರ್ಶಿಗಳು, ಲೀಲಾವತಿ-ಖಜಾಂಚಿ.

ಶಿಕ್ಷಣ ನಾವು ಮಕ್ಕಳಿಗೆ ನೀಡುವ ಬಹು ದೊಡ್ಡ ಆಸ್ತಿ
● ಪೋಷಕರಿಗೆ ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು ● ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಚಾಲನೆ


ಮೈಸೂರಿನ ಹೂಟಗಳ್ಳಿ ಸರ್ಕಾರಿ ಶಾಲೆಯಲ್ಲಿ ಆಯೋಜಿಸಿದ್ದ ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ತಪಾಸಣೆ ಹಾಗೂ ಮೌಲ್ಯಾಂಕನ ಶಿಬಿರವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ಅ.29- ಶಿಕ್ಷಣವೇ ಮಕ್ಕಳಿಗೆ ನೀಡುವ ದೊಡ್ಡ ಆಸ್ತಿ ಎಂಬುದನ್ನು ಪೋಷಕರು ಮರೆಯಬಾರದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ಗ್ರಾಮಾಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಹೂಟಗಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪ್ರೌಢಶಾಲೆಯಲ್ಲಿ ಬುಧವಾರ ಆಯೋಜಿಸಿದ್ದ ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ತಪಾಸಣೆ ಮತ್ತು ಮೌಲ್ಯಾಂಕನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೋಷಕರು ತಮ್ಮ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ಉತ್ತಮ ಶಿಕ್ಷಣ ಕಲ್ಪಿಸಿಕೊಡಬೇಕು. ಶಿಕ್ಷಣವೇ ಮಕ್ಕಳಿಗೆ ನೀಡುವಂತಹ ದೊಡ್ಡ ಆಸ್ತಿ ಎಂಬುದನ್ನು ಎಂದೂ ಮರೆಯಬಾರದು. ಡಾ. ಬಿ.ಆರ್.ಅಂಬೇಡ್ಕರ್, ಜ್ಯೋತಿ ಬಾಪುಲೆ ಅವರಂತಹ ಹಲವು ಮಹನೀಯರು ಶಿಕ್ಷಣಕ್ಕೆ ಮಹತ್ವ ನೀಡಿದ್ದರಿಂದಲೇ ಅಗಾಧವಾದ ಸಾಧನೆ ಸಾಧ್ಯವಾಯಿತು ಎಂದು ತಿಳಿಸಿದರು.

ವಿಶೇಷ ಚೇತನ ಮಕ್ಕಳ ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ನಿರ್ಲಕ್ಷ್ಯ ವಹಿಸಬಾರದು. ಅಂಗವೈಕಲ್ಯತೆಯಿಂದ ಹಿನ್ನಡೆ ಆಗುತ್ತದೆ ಎಂಬ ತಪ್ಪು ಭಾವನೆಯನ್ನು ಹೊಂದಬಾರದು. ವಿಶೇಷ ಚೇತನರಿಗೆ ಅನುಕಂಪಕ್ಕಿಂತ ಪ್ರೋತ್ಸಾಹ ತುಂಬಾ ಮುಖ್ಯವಾಗುತ್ತದೆ. ಅವರಿಗೆ ಜೀವನೋತ್ಸಾಹ ತುಂಬಿ ವಿದ್ಯಾವಂತರನ್ನಾಗಿ ಮಾಡಿದರೆ, ಸ್ವಂತ ಬಲದಿಂದ ಜೀವನ ನಡೆಸುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರದಿಂದಲೂ ಇರುವಂತಹ ಯೋಜನೆಗಳನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ತಾಲೂಕಿಗೆ ಹೊಸದಾಗಿ 3 ಕರ್ನಾಟಕ ಪಬ್ಲಿಕ್ ಶಾಲೆ ಮಂಜೂರಾಗಿದ್ದು, ಅದರಲ್ಲಿ ಹೂಟಗಳ್ಳಿಯ ಶಾಲೆಯನ್ನೂ ಸೇರಿಸಲಾಗಿದೆ. ಶಿಕ್ಷಕರು ಶ್ರದ್ಧೆಯಿಂದ ಶ್ರಮ ವಹಿಸಿ, ಕಾರ್ಯನಿರ್ವಹಿಸಿದರೆ ಮಕ್ಕಳ ಭವಿಷ್ಯಕ್ಕೆ ಉತ್ತಮ ಅಡಿಪಾಯ ಹಾಕಿದಂತಾಗುತ್ತದೆ. ಈ ಶಾಲೆಯು ರಾಜ್ಯಕ್ಕೆ ಪ್ರಥಮ ಸ್ಥಾನ ಬರಬೇಕೆಂಬುದು ನನ್ನ ಆಶಯ ಎಂದರು.

ಇದೇ ವೇಳೆ ಜೆ.ಕೆ.ಟೈರ್‍ಸ್ ವತಿಯಿಂದ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಲಾಯಿತು. ಹೂಟಗಳ್ಳಿ ಗ್ರಾಮದ ಮುಖಂಡ ಸುರೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾಲೇಗೌಡ, ಶಾಲೆಯ ಮುಖ್ಯ ಶಿಕ್ಷಕ ದುಂಡಯ್ಯ, ಸಂಗೀತ, ವೈದ್ಯರಾದ ಚೇತನ್, ಎಸ್‌ಡಿಎಂಸಿ ಅಧ್ಯಕ್ಷ ಲೋಕೇಶ್, ಶಿಕ್ಷಕ ಸತೀಶ್, ಜೆ.ಕೆ.ಟೈರ್‍ಸ್‌ನ ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಬದಲಾವಣೆ, ದಲಿತ ಸಿಎಂ ಚರ್ಚೆ ಅನಗತ್ಯವಾಗಿ ಯಾರೂ ಧಣಿಯುವುದು ಬೇಡ



ಬೆಂಗಳೂರು, ಅ.29- ಮುಖ್ಯಮಂತ್ರಿ ಬದಲಾವಣೆ ಅಥವಾ ನವೆಂಬರ್ ಕ್ರಾಂತಿ ಮತ್ತು ದಲಿತ ಸಿಎಂ ವಿಚಾರವಾಗಿ ಸಚಿವರ ಚರ್ಚೆಯಂತಹ ಯಾವುದೇ ವಿಷಯಗಳ ಬಗ್ಗೆ ಅನಗತ್ಯ ಮಾತನಾಡಿ ಯಾರೂ ದಣಿಯುವುದು ಬೇಡ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮನವಿ ಮಾಡಿದ್ದಾರೆ.

ಪಕ್ಷದ ನಾಯಕರು ಮುಖ್ಯಮಂತ್ರಿ ಬದಲಾವಣೆ ಅಥವಾ ದಲಿತ ಸಿಎಂ ಕುರಿತು ಚರ್ಚಿಸುತ್ತಿರುವ ಬಗ್ಗೆ ವರದಿಗಾರರಿಗೆ ಪ್ರತಿಕ್ರಿಯಿಸಿದ ಡಿಸಿಎಂ, ಅಂತಹ ಯಾವುದೇ ವಿಷಯಗಳ ಬಗ್ಗೆ ಅನಗತ್ಯ ಮಾತನಾಡಿ ಯಾರೂ ದಣಿಯುವುದು ಬೇಡ ಎಂದು ಮನವಿ ಮಾಡುತ್ತೇನೆ ಎಂದರು.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್, ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರಗಳಲ್ಲಿ ಮುಂಬರುವ ಎಂಎಲ್‌ಸಿ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಕುರಿತು ಪಕ್ಷದ ನಾಯಕರೊಂದಿಗೆ ಸಭೆ ನಡೆಸಿದರು. ಪ್ರತಿ ಕ್ಷೇತ್ರಕ್ಕೂ ನಾಲ್ಕರಿಂದ ಐದು ಜನ ಉಮೇದುವಾರಿಕೆಗೆ ಅರ್ಜಿ ಸಲ್ಲಿಸಿದ್ದಾರೆ. ನಾನು 8-10 ದಿನಗಳಲ್ಲಿ ಹೆಸರುಗಳನ್ನು ಅಂತಿಮಗೊಳಿಸುತ್ತೇನೆ. ಮುಂದಿನ ಸುತ್ತಿನಲ್ಲಿ ನಾನು ಜಿಲ್ಲಾ ಸಚಿವರು ಮತ್ತು ಶಾಸಕರೊಂದಿಗೆ ಚರ್ಚಿಸಿ ಅವರ ಅಭಿಪ್ರಾಯವನ್ನು ಪಡೆಯುತ್ತೇನೆ ಎಂದು ಅವರು ಹೇಳಿದರು. ರಾಹುಲ್ ಗಾಂಧಿ ನ.20 ರಂದು ರಾಜ್ಯಕ್ಕೆ ಭೇಟಿ ನೀಡಿ, ಸುಮಾರು 100 ಕಾಂಗ್ರೆಸ್ ಭವನಗಳಿಗೆ ಶಂಕುಸ್ಥಾಪನೆ ಮಾಡುವ ಬಗ್ಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್ ಅವರು, ಇನ್ನೂ ದಿನಾಂಕ ಅಂತಿಮವಾಗಿಲ್ಲ ಎಂದರು.

ಸಿ.ಟಿ.ರವಿ ಕ್ಷಮೆಗೆ ಸವಿತಾ ಸಮಾಜ ಆಗ್ರಹ

ಮೈಸೂರು, ಅ.29(ಎಸ್‌ಪಿಎನ್)- ಸವಿತಾ ಸಮಾಜದ ಕುರಿತು ಅವಹೇಳನಾಕಾರಿ ಹೇಳಿಕೆ ನೀಡಿರುವ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಬಹಿರಂಗ ಕ್ಷಮೆಯಾಚಿಸ ಬೇಕು ಎಂದು ಸವಿತಾ ಸಮಾಜದ ಮೈಸೂರು ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್ ಆಗ್ರಹಿಸಿದ್ದಾರೆ. ಸಿ.ಟಿ.ರವಿಯವರು ತಮ್ಮ ಮೊಬೈಲ್‌ನಲ್ಲಿ ಕಾಲೇಜಿನ ವಿಷಯ ಸಂಬಂಧ ಮಾತನಾಡುವ ವೇಳೆ ಸವಿತಾ ಸಮಾಜ ಕುರಿತು ಅವಹೇಳಕಾರಿ ಹೇಳಿಕೆ ನೀಡಿ, ರಾಜ್ಯ ಸವಿತಾ ಸಮುದಾಯಕ್ಕೆ ನೋವುಂಟು ಮಾಡಿದ್ದಾರೆ. ಹಾಗಾಗಿ ಶಾಸಕರು ಕೂಡಲೇ ಕ್ಷಮೆಯಾಚಿಸ ಬೇಕು. ಇಲ್ಲವಾದ್ದಲ್ಲಿ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಪುನೀತ್ 4ನೇ ಪುಣ್ಯ ಸ್ಮರಣೆ; ಜೀವಧಾರ ರಕ್ತ ನಿಧಿ ಕೇಂದ್ರದಲ್ಲಿ ರಕ್ತದಾನ ಶಿಬಿರ


ದಿವಂಗತ ಡಾ.ಪುನೀತ್‌ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ಮೈಸೂರು, ಅ.29(ಎಂಕೆ)- ಮೈಸೂರಿನ ಸಂತ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರ ಕರ್ನಾಟಕ ರತ್ನ ದಿವಂಗತ ಡಾ.ಪುನೀತ್‌ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ಶಿಬಿರದಲ್ಲಿ 30ಕ್ಕೂ ಹೆಚ್ಚು ಮಂದಿ ಪುನೀತ್‌ರಾಜ್‌ಕುಮಾರ್ ಅಭಿಮಾನಿಗಳು ರಕ್ತದಾನ ಮಾಡುವ ಮೂಲಕ ನೆಚ್ಚಿನ ನಟನನ್ನು ಸ್ಮರಿಸಿದರು. ಈ ವೇಳೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ರಕ್ತದಾನದ ಮೂಲಕ ಬೇರೆಯವರ ಬದುಕಿಗೆ ನಾವು ಬೆಳಕಾಗಬಹುದಾಗಿದೆ. ಸೇವೆಯ ಮೂಲಕ ನಮ್ಮ ಬದುಕನ್ನು ಸಾರ್ಥಕವನ್ನಾಗಿಸಿಕೊಳ್ಳಬೇಕಿದೆ. ನಮ್ಮ ಬದುಕು ಪ್ರದರ್ಶನವಾಗಬಾರದು, ನಿದರ್ಶನವಾಗಬೇಕು ಎಂಬುದಕ್ಕೆ ಡಾ.ಪುನೀತ್ ರಾಜ್‌ಕುಮಾರ್ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ ಎಂದು ಸ್ಮರಿಸಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಪುನೀತ್ ರಾಜ್‌ಕುಮಾರ್ ಅವರ ಸಾವಿಗೂ ಮುನ್ನ ಅವರು, ಮಾಡಿದ್ದ ಸಾಮಾಜಿಕ ಸೇವೆ ಯಾರಿಗೂ ಗೊತ್ತಿರಲಿಲ್ಲ. ಬಲಗೈಯಲ್ಲಿ ಮಾಡಿದ ದಾನ ಎಡಗೈಗೆ ತಿಳಿಯಬಾರದು ಎಂಬ ರೀತಿಯಲ್ಲಿ ಅಸಹಾಯಕರ ನೆರವಿಗೆ ನಿಂತಿದ್ದರು. ಚಲನಚಿತ್ರಗಳು ಹಾಗೂ ಸಾಮಾಜಿಕ ಸೇವೆ ಮೂಲಕ ಮುಗಿಲೆತ್ತರಕ್ಕೆ ಬೆಳೆದು ನಿಂತಿದ್ದರು ಎಂದು ನೆನೆದರು.

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಬ್ಲಡ್ ಆನ್ ಕಾಲ್ ಕ್ಲಬ್‌ನ ದೇವೇಂದ್ರ, ಸದಾಶಿವ್, ನಾಗಮಣಿ, ದರ್ಶನ್, ನವೀನ್, ಮಮತಾ ಮತ್ತಿತರರಿದ್ದರು.

ಕೋಟ್ಯಾಂತರ ಜನರ ಮೇಲೆ ಡಾ. ವಿಷ್ಣುವರ್ಧನ್ ಪ್ರಭಾವ
ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಸ್ಮರಣೆ


ವೀಣಾ ಶಾರದಾ ಇವೆಂಟ್ಸ್ ಮತ್ತು ಶ್ರೀ ಎನ್. ಮೆಲೋಡಿಸ್‌ನವರು ಮೈಸೂರಿನ ನಾದಬ್ರಹ್ಮಸಭಾದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ವಿಷ್ಣುವರ್ಧನ್ ಗಾನೋತ್ಸವಕ್ಕೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಚಾಲನೆ ನೀಡಿದರು. ಕೊಳ್ಳೇಗಾಲ ಮಾಜಿ ಶಾಸಕ ಎಸ್. ಬಾಲರಾಜು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪಾಲಿಕೆ ಮಾಜಿ ಸದಸ್ಯ ಎಂ.ಡಿ. ಪಾರ್ಥಸಾರಥಿ, ಗಣೇಶ್, ರಾಜೇಶ್ ಸಿ. ಗೌಡ, ಮುರುಳಿ, ರವಿ. ಸುರೇಶ್, ಮಹೇಶ್ ತಲಕಾಡು ಇದ್ದಾರೆ.

ಮೈಸೂರು, ಅ.29- ಡಾ.ವಿಷ್ಣುವರ್ಧನ್ ಅವರ ಚಿತ್ರಗಳು ಹಾಗೂ ಅವರ ವ್ಯಕ್ತಿತ್ವ, ಸಂದೇಶ ಕೋಟ್ಯಾಂತರ ಜನರ ಮೇಲೆ ಪ್ರಭಾವ ಬೀರಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಹೇಳಿದರು.

ವೀಣಾ ಶಾರದಾ ಇವೆಂಟ್ಸ್ ಹಾಗೂ ಶ್ರೀ ಎನ್. ಮೆಲೋಡಿಸ್ ವತಿಯಿಂದ ಡಾ. ವಿಷ್ಣುವರ್ಧನ್ ಗಾನ ವೃಂದದ ಆಶ್ರಯದಲ್ಲಿ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಏರ್ಪಡಿಸಿದ್ದ ಡಾ. ವಿಷ್ಣುವರ್ಧನ್ ಗಾನೋತ್ಸವ ಉದ್ಘಾಟಿಸಿ ಮಾತನಾಡಿ, ಇದರಿಂದಾಗಿಯೇ ವಿಷ್ಣುವರ್ಧನ್ ಅವರು ಇನ್ನೂ ಕೂಡ ಜನಮಾನಸದಿಂದ ಮರೆಯಾಗಿಲ್ಲ ಎಂದರು.

ಕೊಳ್ಳೇಗಾಲದ ಮಾಜಿ ಶಾಸಕ ಎಸ್. ಬಾಲರಾಜು ಮಾತನಾಡಿ, ವಿಷ್ಣುವರ್ಧನ್ ಅವರು ಅತ್ಯಂತ ಸುರಧ್ರೂಪಿ ನಟರಾಗಿದ್ದರು. ತಮ್ಮ ಅಭಿನಯದ ಮೂಲಕ ಅಪಾರ ಅಭಿಮಾನಿಗಳನ್ನು ಸಂಪಾದಿಸಿದವರು ಎಂದರು. ನಗರ ಪಾಲಿಕೆ ಮಾಜಿ ಸದಸ್ಯ, ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂ.ಡಿ. ಪಾರ್ಥಸಾರಥಿ ಮಾತನಾಡಿ, ವಿಷ್ಣುವರ್ಧನ್ ಅವರಿಗೆ ಯಾವತ್ತೋ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕಿತ್ತು. ಆದರೆ ಹೋರಾಟ ಮಾಡಿ, ಪಡೆಯುವ ಸ್ಥಿತಿ ಬರ ಬಾರದಾಗಿತ್ತು. ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಗಣೇಶ್, ರಾಜೇಶ್ ಸಿ. ಗೌಡ, ಮುರುಳಿ, ರಾಜೇಶ್ ತಲಕಾಡು, ರವಿ, ಸುರೇಶ್ ಮುಖ್ಯ ಅತಿಥಿಗಳಾಗಿದ್ದರು. ಗಾಯಕರಾದ ವೀಣಾ, ಮಹದೇವ್, ರಂಗಸ್ವಾಮಿ, ಸುರೇಶ್, ಶಾಂತರಾಜು, ಶಿವರಾಮ ಚಂದ್ರು, ಸಿದ್ದಪ್ಪಾಜಿ, ಕೆಂಚೇ ಗೌಡ, ಕೃಷ್ಣ, ಶಿವಮಲ್ಲು, ಜಯಲಕ್ಷ್ಮೀ, ದೀಪಾ, ಲೀಲಾವತಿ, ರುಕ್ಮಿಣಿ ಶ್ರೀನಿವಾಸ್, ವೀಣಾ ಶಾರದಾ ಮತ್ತು ಕುಮಾರಸ್ವಾಮಿ ಅವರು ವಿಷ್ಣುವರ್ಧನ್ ಅಭಿನಯದ ಚಿತ್ರಗಳಿಂದ ಆಯ್ದ 40 ಗೀತೆಗಳನ್ನು ಪ್ರಸ್ತುತಪಡಿಸಿ, ಸಭಿಕರನ್ನು ರಂಜಿಸಿದರು.

ರಫೆಲ್‌ನಲ್ಲಿ ಹಾರಾಟ ನಡೆಸಿ ದಾಖಲೆ ಬರೆದ ರಾಷ್ಟ್ರಪತಿ ದ್ರೌಪದಿ ಮುರ್ಮು



ಅಂಬಾಲಾ, ಅ.29– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಹರಿಯಾಣದ ಅಂಬಾಲಾ ವಾಯುಪಡೆ ನೆಲೆಯಿಂದ ರಫೆಲ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದಾರೆ.

ಐದು ತಿಂಗಳ ಹಿಂದೆ ಪಹಲ್ಗಾಮ್ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಭಾರತ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಪ್ರಾರಂಭಿಸಿದಾಗ ಈ ವಾಯುನೆಲೆಯಿಂದ ರಫೆಲ್ ಯುದ್ಧ ವಿಮಾನಗಳು ಗಡಿಯುದ್ದಕ್ಕೂ ಭಯೋತ್ಪಾದಕ ಶಿಬಿರಗಳನ್ನು ನಾಶಮಾಡುವ ಕಾರ್ಯಾಚರಣೆಗೆ ಹೊರಟಿದ್ದವು.

ರಾಷ್ಟ್ರಪತಿ ದ್ರೌಪದಿ ಮುರ್ಮು ಈಗ ಎರಡನೇ ಬಾರಿಗೆ ಯುದ್ಧ ವಿಮಾನದಲ್ಲಿ ಪ್ರಯಾಣಿಸಿದ್ದಾರೆ. ಭಾರತದ ಸಶಸ್ತ್ರ ಪಡೆಗಳ ಸುಪ್ರೀಂ ಕಮಾಂಡರ್ 2023ರ ಏ.8ರಂದು ಅಸ್ಸಾಂನ ತೇಜ್ಪುರ ವಾಯುಪಡೆ ನಿಲ್ದಾಣದಲ್ಲಿ ಸುಖೋಯ್–30 ಎಂಕೆಐ ಜೆಟ್‌ನಲ್ಲಿ ಹಾರಾಟ ನಡೆಸಿದ್ದರು.

ಮುರ್ಮು ಅವರಿಗಿಂತ ಮುನ್ನ ಮಾಜಿ ರಾಷ್ಟ್ರಪತಿಗಳಾದ ಎಪಿಜೆ ಅಬ್ದುಲ್ ಕಲಾಂ ಮತ್ತು ಪ್ರತಿಭಾ ಪಾಟೀಲ್ ಪುಣೆ ಬಳಿಯ ಲೋಹೆಗಾಂವ್‌ನಲ್ಲಿ ಸುಖೋಯ್–30 ಎಂಕೆಐನಲ್ಲಿ ಹಾರಾಟ ನಡೆಸಿದ್ದರು.

ಫ್ರೆಂಚ್ ಏರೋಸ್ಪೇಸ್ ದೈತ್ಯ ಡಸಾಲ್ಟ್ ಏವಿಯೇಷನ್ ತಯಾರಿಸಿದ ರಫೆಲ್‌ನಲ್ಲಿ ಭಾರತೀಯ ರಾಷ್ಟ್ರಪತಿಯೊಬ್ಬರು ಹಾರಾಟ ನಡೆಸುತ್ತಿರುವುದು ಇದೇ ಮೊದಲು. ರಫೆಲ್‌ಗಳು 2020ರಲ್ಲಿ ಅಂಬಾಲಾದ ವಾಯುಪಡೆ ನಿಲ್ದಾಣದಲ್ಲಿ ಭಾರತೀಯ ವಾಯುಪಡೆಯ ನೌಕಾಪಡೆಗೆ ಸೇರಿದ್ದವು. ಇವು 17ನೇ ಸ್ಕ್ವಾಡ್ರನ್, 'ಗೋಲ್ಡನ್ ಆರೋಸ್'ನ ಭಾಗವಾಗಿದೆ.

ಇದು ಮರೆಯಲಾಗದ ಅನುಭವ: ರಫೆಲ್‌ನಲ್ಲಿ ಹಾರಾಟದ ಬಳಿಕ ಮಾತನಾಡಿದ ಮುರ್ಮು ಅವರು, ಇದು ಮರೆಯಲಾಗದ ಅನುಭವ. ರಫೆಲ್ ಯುದ್ಧ ವಿಮಾನದಲ್ಲಿನ ಈ ಮೊದಲ ಹಾರಾಟವು ತಮ್ಮಲ್ಲಿ ದೇಶದ ರಕ್ಷಣಾ ಸಾಮರ್ಥ್ಯಗಳ ಬಗ್ಗೆ ಹೆಮ್ಮೆ ಮೂಡಿಸಿದೆ ಎಂದು ಹೇಳಿದರು.



ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ವೇಳೆ ಪಾಕಿಸ್ತಾನ ಸೆರೆ ಹಿಡಿದಿದ್ದಾಗಿ ಹೇಳಿಕೊಂಡಿದ್ದ ಭಾರತದ ವಾಯುಪಡೆ ಪೈಲಟ್ ಶಿವಾಂಗಿ ಸಿಂಗ್ ಜೊತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಫೋಟೋ ಕ್ಲಿಕ್ಕಿಸಿ ಕೊಂಡಿದ್ದಾರೆ.

ನ.28ಕ್ಕೆ ಉಡುಪಿ ಶ್ರೀ ಕೃಷ್ಣ ಮಠಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಭೇಟಿ



ಉಡುಪಿ, ಅ.29– ಬಿಹಾರ ಚುನಾವಣಾ ಅಖಾಡ ರಂಗೇರಿದೆ. ಸದ್ಯ ಇದೇ ಚುನಾವಣಾ ಪ್ರಚಾರದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ನ.28ರಂದು ಉಡುಪಿ ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಲಿದ್ದಾರೆ. ಶ್ರೀಕೃಷ್ಣ ಮಠದಲ್ಲಿ ನಡೆಯಲಿರುವ ಲಕ್ಷ ಕಂಠ ಗೀತಾ ಪಾರಾಯಣ– ಬೃಹತ್ ಗೀತೋತ್ಸವದಲ್ಲಿ ಭಾಗಿಯಾಗಲಿದ್ದಾರೆ ಎಂದು ಮಠದ ಮೂಲಗಳು ತಿಳಿಸಿವೆ.

ಅಂದು ಮಧ್ಯಾಹ್ನ 12 ಗಂಟೆಗೆ ಶ್ರೀಕೃಷ್ಣ ಮಠಕ್ಕೆ ಆಗಮಿಸುವ ಪ್ರಧಾನಿ ಮೋದಿ, ಪ್ರಸಾದ ಸ್ವೀಕರಿಸಿದ ಬಳಿಕ ಪರ್ಯಾಯ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಬಳಿಕ ಶ್ರೀಕೃಷ್ಣ ಮಠದಲ್ಲಿ ನಡೆಯಲಿರುವ ಲಕ್ಷ ಕಂಠ ಗೀತಾ ಪಾರಾಯಣ–ಬೃಹತ್ ಗೀತೋತ್ಸವದಲ್ಲಿ ಭಾಗಿಯಾಗಲಿದ್ದಾರೆ. ಈ ನಿಟ್ಟಿನಲ್ಲಿ ಭಕ್ತರು ಮತ್ತು ಗಣ್ಯರು ಬೃಹತ್ ಪ್ರಮಾಣದಲ್ಲಿ ಸೇರುವ ನಿರೀಕ್ಷೆಯಿದೆ.

ಮೂಲಗಳ ಪ್ರಕಾರ ಉಡುಪಿ ಶ್ರೀಕೃಷ್ಣ ಮಠಕ್ಕೆ ಪ್ರಧಾನಿ ಮೋದಿ ಅವರ ಭೇಟಿಯನ್ನು ಪ್ರಧಾನಿ ಕಚೇರಿ ದೃಢಪಡಿಸಿದೆ. ಹೀಗಾಗಿ ಎಲ್ಲಾ ವ್ಯವಸ್ಥೆಗಳನ್ನು ಈಗಾಗಲೇ ಮಾಡಲಾಗುತ್ತಿದೆ ಎನ್ನಲಾಗುತ್ತಿದೆ.

ನ.8ರಿಂದ 30ರವರೆಗೆ ಲಕ್ಷ ಕಂಠ ಗೀತಾ ಪಾರಾಯಣ: ನ.8ರಿಂದ 30ರವರೆಗೆ ಉಡುಪಿಯ ಶ್ರೀ ಕೃಷ್ಣ ಮಠ ಮತ್ತು ಪುತ್ತಿಗೆ ಮಠದ ಆಶ್ರಯದಲ್ಲಿ ಲಕ್ಷ ಕಂಠ ಗೀತಾ ಪಾರಾಯಣ–ಬೃಹತ್ ಗೀತೋತ್ಸವ ನಡೆಯಲಿದೆ. ಕೊನೆಯ ದಿನ ಅಂದರೆ ನ.30ರಂದು ಸುಮಾರು 50 ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಸೇರಲಿದ್ದಾರೆ ಎನ್ನಲಾಗುತ್ತಿದೆ. ಇನ್ನು ಈ ಕಾರ್ಯಕ್ರಮದಲ್ಲಿ ದೇಶದ ಗಣ್ಯರು ಸೇರಿದಂತೆ ಸಂತರು, ಧಾರ್ಮಿಕ ಮುಖಂಡರು ಭಾಗವಹಿಸಲಿದ್ದಾರೆ.

ರೈಲ್ವೆ ಟವರ್ ಕಾರ್‌ಗೆ ಸಿಲುಕಿ ವ್ಯಕ್ತಿ ಸಾವು

ಚಾಮರಾಜಪುರಂ ರೈಲ್ವೆ ನಿಲ್ದಾಣದಲ್ಲಿ ದುರಂತ

ಮೈಸೂರು, ಅ.29– ರೈಲ್ವೆ ಟವರ್ ಕಾರ್‌ಗೆ ಸಿಲುಕಿ ವ್ಯಕ್ತಿಯೊಬ್ಬ ಮೃತಪಟ್ಟ ಘಟನೆ ಮೈಸೂರಿನ ಚಾಮರಾಜಪುರಂ ರೈಲ್ವೆ ನಿಲ್ದಾಣದ ಬಳಿ ಬುಧವಾರ ಸಂಜೆ ಸಂಭವಿಸಿದೆ.

ರೈಲ್ವೆ ವಿದ್ಯುದ್ದೀಕರಣ ವ್ಯವಸ್ಥೆ ನಿರ್ವಹಣೆಗೆ ಬಳಸುವ ಟವರ್ ಕಾರ್, ಅಶೋಕಪುರಂ ರೈಲ್ವೆ ನಿಲ್ದಾಣದಿಂದ ಮೈಸೂರು ಕೇಂದ್ರ ರೈಲ್ವೆ ನಿಲ್ದಾಣದತ್ತ ಸಂಚರಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ. ರೈಲ್ವೆ ಗೇಟ್ ಹಾಕಿದ್ದರೂ ಪಕ್ಕದಲ್ಲಿನ ಜಾಗದಿಂದ ರೈಲ್ವೆ ಹಳಿ ದಾಟಲು ಮುಂದಾದ ಸುಮಾರು 50 ವರ್ಷದ ವ್ಯಕ್ತಿ, ಟವರ್ ಕಾರ್‌ಗೆ ಸಿಲುಕಿ ಮೃತಪಟ್ಟಿದ್ದಾರೆ.

ವಿಷಯ ತಿಳಿದು ರೈಲ್ವೆ ಪೊಲೀಸ್ ಠಾಣೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಪರಿಶೀಲನೆ ನಡೆಸಿದರು. ಮೃತರು ಚಾಮರಾಜನಗರ ಜಿಲ್ಲೆ ಹೆಗ್ಗವಾಡಿ ಗ್ರಾಮದ ಕಡೆಯವರಾಗಿದ್ದು, ನಿತ್ಯ ಕೂಲಿ ಕೆಲಸಕ್ಕೆ ಬಂದು ಹೋಗುತ್ತಿದ್ದರು ಎಂದು ತಿಳಿದುಬಂದಿದೆಯಾದರೂ ಅವರ ನಿಖರ ಗುರುತು ಪತ್ತೆಯಾಗಿಲ್ಲ.

ದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿಡಲಾಗಿದ್ದು, ವಾರಸುದಾರರು ಪತ್ತೆಯಾದ ಬಳಿಕ ವೈದ್ಯಕೀಯ ಪರೀಕ್ಷೆ ನಡೆಸಿ, ಅವರಿಗೆ ಹಸ್ತಾಂತರಿಸಲಾಗುವುದು ಎಂದು ರೈಲ್ವೆ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ರಮೇಶ್ ತಿಳಿಸಿದ್ದಾರೆ.





PUBLIC NOTICE

My client has entered into an agreement to sell, to purchase the below mentioned schedule property from its present owner Smt. S.R. Pooja, W/o Sri Manoj Kumar D.S. of Dyapasandra Village, Keregodu Post, Mandya. Objections if any to the proposed transaction of sale or claims if any in respect of the schedule property may be lodged with the undersigned within 7 days from hereof failing which my client will proceed with the sale transaction.

SCHEDULE PROPERTY

All that piece and parcel of residential vacant site bearing No. 1162, having Form 3 (Rule 20) Khata Records No. 25136653, PID No. 1592131319, WARD No. 32, situated at First Phase, Vijayanagar 4th Stage, Devaraja Mohalla, Mysore-570 017 city, coming within the jurisdiction & limits of Hootagalli CMC, being the layout formed by MUDA, measruing East to West 09.00 metrs and North to South 13.80 mtrs., in all ad-measuring 124.20 sq. mtrs and bounded on the East by Site #1161, West by Site #1163, North by Site #1180 and South by Road.

Sd/- Shyam Sunder Bajpekar,
Advocate (KAR 78/93),
Apex Law Chambers, No. 2,
2nd Floor, Maurya Mansion,
1st Main, 1st Cross, Gandhinagar,
Bangalore-560 009. Mob: 9845072775

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮಾನ್ ದೊಡ್ಡ ವೆಂಕಟೇಗೌಡರು

ಇವರು ದಿನಾಂಕ 20–10–2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಮೃತರ ಉತ್ತರ ಕ್ರಿಯಾದಿ ಭೂಶಾಂತಿಯನ್ನು ದಿನಾಂಕ: 30–10–2025ನೇ ಗುರುವಾರ ಬೆಳಗ್ಗೆ 11.00 ಗಂಟೆಗೆ ನಮ್ಮ ಸ್ವಗೃಹ– ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಬನ್ನೂರು ಟೌನ್, ಚಾಮನಹಳ್ಳಿ ಗ್ರಾಮ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ದುಃಖತಪ್ತರು

ಮೃತರ ಪತ್ನಿ ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳಾದ ಮಹೇಶ, ಸುರೇಶ (ನವನೀತ್ ಜ್ಯುವೆಲರ್ಸ್ ಮಾಲೀಕರು) ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು

8ನೇ ವರ್ಷದ ಚಿರಸ್ಮರಣೆ



ಜನನ: 30–09–1915 ಮರಣ: 30–10–2017


ಶತಾಯುಷಿ ಪಟೇಲ್ ನಾಗಮ್ಮನವರು

ಸಂತೇ ಕಾವುದವಾಡಿ, ಚಾಮರಾಜನಗರ (ತಾಲ್ಲೂಕು)

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ.

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಬಂಧುಬಳಗ ಹಾಗೂ ಕಾವುದವಾಡಿ ಗ್ರಾಮಸ್ಥರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ದೇವೇಗೌಡರು (ಗ್ರಾಮಪಂಚಾಯಿತಿ ಮಾಜಿ ಸದಸ್ಯರು)

ಇವರು ದಿನಾಂಕ 20–10–2025 ಸೋಮವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 30–10–2025ನೇ ಗುರುವಾರ ಬೆಳಗ್ಗೆ 11.00 ಗಂಟೆಗೆ ನಮ್ಮ ಸ್ವಗೃಹ ಮೈಸೂರು ತಾ||, ವರುಣಾ ಹೋ||, ಲಕ್ಷ್ಮಿಪುರ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು ಹರಿಕಥೆ: ರಾತ್ರಿ 9ಕ್ಕೆ

ಮೃತರ ಪತ್ನಿ ಶ್ರೀಮತಿ ಮಹದೇವಮ್ಮ, ಮಕ್ಕಳು, ಸೊಸೆಯಂದಿರು ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಲಕ್ಷ್ಮಿಪುರ ಗ್ರಾಮಸ್ಥರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

19ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 19 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀ ಎಂ.ಗಿರೀಶ್ (PWD ಕಂಟ್ರಾಕ್ಟರ್)
ಜನನ: 05–10–1962
ಮರಣ: 30–10–2006

ದುಃಖತಪ್ತರು: ಪತ್ನಿ: ಭಾಗ್ಯಮ್ಮ, ಮಗ–ಶ್ರೀನಿವಾಸ್, ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು, ರಾಮಕೃಷ್ಣನಗರ, ಮೈಸೂರು

ಮೈಸೂರು ಮಹಾನಗರ ಪಾಲಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ: ಮೈಸಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–13/833/2025–26

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು
ದಿನಾಂಕ 29–10–2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಪಾಲಿಕೆ ಅನಿದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್ ಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.30 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ. ಸಂ	ವಿವರ	ಕಾಮಗಾರಿ ವಿವರ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-1 & Kw-2	8	148.73	31.10.2025	17.11.2025	18.11.2025
2	KG-3	1	42.40	31.10.2025	17.11.2025	18.11.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಳ (ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು